ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 8 ಶುಕ್ರವಾರ 2024

₹4

ಸಂಪುಟ: 44 | ಸಂಚಿಕೆ: 320 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ನಾಳೆ ಮೈಸೂರಲ್ಲಿ ಮೈಸೂರು ರೇಸ್ ಕ್ಲಬ್ ನೇತ್ರ ಸಂಗ್ರಹಣಾ ಕೇಂದ್ರ ಉದ್ಘಾಟನೆ

ಮೈಸೂರು, ಮಾ.7(ಜಿಎ)– ಮೈಸೂರು ರೇಸ್ ಕ್ಲಬ್ ಕಣ್ಣಿನ ಆಸ್ಪತ್ರೆ, ಎಂಆರ್‌ಸಿ ಚಾರಿಟೆಬಲ್ ಟ್ರಸ್ಟ್ ಸಹಯೋಗದೊಂದಿಗೆ ಲಯನ್ಸ್ ಅಂತಾರಾಷ್ಟ್ರೀಯ ಐ ಬ್ಯಾಂಕ್–ಮೈಸೂರು ರೇಸ್ ಕ್ಲಬ್ ನೇತ್ರ ಸಂಗ್ರಹಣ ಕೇಂದ್ರವನ್ನು ಮಾ.9ರಂದು ಸಂಜೆ 4 ಗಂಟೆಗೆ ಮೈಸೂರು ರೇಸ್ ಕ್ಲಬ್ ಕಣ್ಣಿನ ಆಸ್ಪತ್ರೆ ಆವರಣದಲ್ಲಿ ಉದ್ಘಾಟಿಸಲಾಗುವುದು ಎಂದು ಐ ಬ್ಯಾಂಕ್‌ನ ನಿರ್ದೇಶಕಿ ಡಾ.ರೇಖಾ ಧ್ಯಾನ್‌ಚಂದ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ರೇಸ್ ಕ್ಲಬ್ ಚಾರಿಟೆಬಲ್ ಟ್ರಸ್ಟ್ ಕಣ್ಣಿನ ಆಸ್ಪತ್ರೆಯ ಛೇರ್ಮನ್ ಕೆ.ಎಂ.ಚಂದ್ರೇಗೌಡ, ಲಯನ್ಸ್‌ನ ಡಾ.ಎನ್.ಕೃಷ್ಣೇಗೌಡ, ಸುರೇಶ್ ರಾಮು, ದೇವೇಗೌಡ, ಪಿ.ಎಸ್.ಪ್ರೇಮನಾಥ್ ಇನ್ನಿತರರು ಅತಿಥಿಗಳಾಗಿ ಭಾಗವಹಿಸುವರು ಎಂದು ತಿಳಿಸಿದರು.

ಬೆಂಗಳೂರಿನಲ್ಲಿ ಹಲವಾರು ವರ್ಷಗಳಿಂದ ನೇತ್ರ ಸಂಗ್ರಹಣ ಕೇಂದ್ರ ನಡೆಯುತ್ತಿದ್ದು, ನೇತ್ರದಾನಿಗಳಿಂದ ಸಂಗ್ರಹಿಸಿದ ಕಣ್ಣಿನ ಭಾಗಗಳನ್ನು ಸಂರಕ್ಷಿಸುವ ಕೇಂದ್ರ ಇದಾಗಿದೆ. ನೇತ್ರದಾನಿಗಳಿಂದ ಸಂಗ್ರಹಿಸಿದ ಕಾರ್ನಿಯಾಗಳನ್ನು ಈ ಕೇಂದ್ರದಲ್ಲಿ ಸಂರಕ್ಷಿಸಲಾಗುವುದು. ಬಳಿಕ ಅದನ್ನು ಬೆಂಗಳೂರಿಗೆ ಪರೀಕ್ಷೆ ಹಾಗೂ ಸಂಸ್ಕರಣೆಗೆ ಕಳುಹಿಸಲಾಗುವುದು. ಅಲ್ಲಿಂದ ಅಗತ್ಯವಿರುವವರಿಗೆ ರವಾನಿಸುವ ಕೆಲಸ ನಡೆಯಲಿದೆ ಎಂದು ತಿಳಿಸಿದರು.

ಕಾರ್ನಿಯಾ ದೋಷದ ಕಾರಣ ಅಂಧತ್ವ ಸಮಸ್ಯೆ ಎದುರಿಸುತ್ತಿರುವವರಲ್ಲಿ ಮಕ್ಕಳು ಹೆಚ್ಚಾಗಿದ್ದಾರೆ. ಜೊತೆಗೆ, ನೇತ್ರದಾನಿಗಳಿಂದ ಸಂಗ್ರಹಿಸಿದ ಎಲ್ಲ ನೇತ್ರಗಳೂ ಅಳವಡಿಕೆಗೆ ಯೋಗ್ಯವಾಗಿರುವುದಿಲ್ಲ. ಆಯ್ಕೆಯಾದುವನ್ನೇ ಅಳವಡಿಸಬೇಕಾಗುತ್ತದೆ. ಆದ್ದರಿಂದ ನೇತ್ರದಾನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನತೆ ಆಗಮಿಸಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಎಂ.ಆರ್.ಸಿ. ಅಧ್ಯಕ್ಷ ಎನ್.ಚಂದ್ರೇಗೌಡ, ಪ್ರೇಮನಾಥ್, ರಾಹುಲ್ ಜೀ, ದೇವೇಗೌಡ ಉಪಸ್ಥಿತರಿದ್ದರು.



ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು ನಗರಪಾಲಿಕೆಯಲ್ಲಿ ತಮ್ಮ ಕಚೇರಿ ಆರಂಭಿಸಿದ ವೇಳೆ ಅವರನ್ನು ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಯದುಗಿರಿ ಯತಿರಾಜ ಶಾಖಾ ಮಠ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದ ಪ್ರಧಾನ ವ್ಯವಸ್ಥಾಪಕ ವಿದ್ವಾನ್ ಕೆ.ಆರ್.ಯೋಗಾನರಸಿಂಹನ್ (ಮುರುಳಿ ಅಯ್ಯಂಗಾರ್), ಅರ್ಚಕ ವೀರರಾಘವನ್ ಅವರು ಅಭಿನಂದಿಸಿದರು.

ಶಿವರಾತ್ರಿ ಪೂಜೆ; ಅರಮನೆ ತ್ರಿನೇಶ್ವರಸ್ವಾಮಿಗೆ 3 ದಿನ ಚಿನ್ನದ ಕೊಳಗ ಧಾರಣೆ

ಮೈಸೂರು,ಮಾ.7(ಎಂಟಿವೈ)– ಮಹಾಶಿವರಾತ್ರಿ ಹಬ್ಬದಂದು ಅರಮನೆಯ ಆವರಣದಲ್ಲಿರುವ ತ್ರಿನೇಶ್ವರಸ್ವಾಮಿ ದೇವಾಲಯದಲ್ಲಿ ನಡೆಯುವ ವಿಶೇಷ ಪೂಜಾ ಮಹೋತ್ಸವದಲ್ಲಿ ಶಿವಲಿಂಗಕ್ಕೆ ಧರಿಸಲು ಜಿಲ್ಲಾ ಖಜಾನೆಯಿಂದ ಬಿಗಿ ಭದ್ರತೆಯಲ್ಲಿ 11 ಕೆಜಿ ತೂಕದ ಚಿನ್ನದ ಕೊಳಗ(ಮುಖವಾಡ)ವನ್ನು ದೇವಾಲಯಕ್ಕೆ ಸುರಕ್ಷಿತವಾಗಿ ತರಲಾಯಿತು.

ಸಂಪ್ರದಾಯದಂತೆ ಶಿವರಾತ್ರಿ ಹಬ್ಬದ ಪ್ರಯುಕ್ತ ತ್ರಿನೇಶ್ವರಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜಾ ಮಹೋತ್ಸವ ನಡೆಯಲಿದ್ದು, ಮೈಸೂರು ಸೇರಿದಂತೆ ವಿವಿಧೆಡೆಯಿಂದ ಭಕ್ತರು ತ್ರಿನೇಶ್ವರಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ, ದರ್ಶನ ಪಡೆಯಲಿದ್ದಾರೆ. ವರ್ಷಕ್ಕೆ ಒಂದೇ ದಿನ ತ್ರಿನೇಶ್ವರಸ್ವಾಮಿ ಚಿನ್ನದ ಕೊಳಗ ಧಾರಣೆಯೊಂದಿಗೆ ಕಂಗೊಳಿಸಲಿದೆ. ಜಯಚಾಮರಾಜ ಒಡೆಯರ್ ಅವರು ಪುತ್ರ ಪ್ರಾಪ್ತಿಗಾಗಿ ಹರಕೆ ಹೊತ್ತು ಮೂರು ದೇವಾಲಯಗಳಿಗೆ ಚಿನ್ನದ ಕೊಳಗವನ್ನು ಕೊಡುಗೆ ನೀಡಿದ್ದಾರೆ. ರಾಜವಂಶಸ್ಥರಾದ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ಜನನದ ಸ್ಮರಣಾರ್ಥ ನೀಡಿರುವ ಕೊಳಗವನ್ನು ಶಿವರಾತ್ರಿ ಹಬ್ಬದ ದಿನ ತ್ರಿನೇಶ್ವರಸ್ವಾಮಿ ಲಿಂಗಕ್ಕೆ ಧರಿಸಿ ಪೂಜಿಸಲಾಗುತ್ತದೆ. ಉಳಿದ ದಿನ ಜಿಲ್ಲಾ ಖಜಾನೆಯಲ್ಲಿ ಚಿನ್ನದ ಕೊಳಗವನ್ನು ಇರಿಸಲಾಗುತ್ತದೆ.

ಭದ್ರತೆಯಲ್ಲಿ ರವಾನೆ: ಶಿವಲಿಂಗಕ್ಕೆ ಧಾರಣೆ ಮಾಡುವ ನಿಟ್ಟಿನಲ್ಲಿ ಇಂದು ಬೆಳಗ್ಗೆ ಜಿಲ್ಲಾ ಖಜಾನೆಯಿಂದ ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು ಅವರ ಸಮ್ಮುಖದಲ್ಲಿ ಮುಜರಾಯಿ ಇಲಾಖೆಯ ಅಧಿಕಾರಿಗಳು ಚಿನ್ನದ ಕೊಳಗವನ್ನು ಪಡೆದರು. ಬಳಿಕ ಶಸ್ತ್ರಸಜ್ಜಿತ ಪೊಲೀಸ್ ಸಿಬ್ಬಂದಿಗಳ ಬೆಂಗಾವಲಿನಲ್ಲಿ ಅರಮನೆ ಆವರಣದಲ್ಲಿರುವ ತ್ರಿನೇಶ್ವರಸ್ವಾಮಿ ದೇವಾಲಯಕ್ಕೆ ಚಿನ್ನದ ಕೊಳಗವನ್ನು ತರಲಾಯಿತು. ಈ ವೇಳೆ ದೇವಾಲಯದಲ್ಲಿ ಚಿನ್ನದ ಕೊಳಗ ಪರಿಶೀಲಿಸಿ, ಮುಜರಾಯಿ ಇಲಾಖೆ ಅಧಿಕಾರಿಗಳು ಚಾಮುಂಡಿಬೆಟ್ಟ ಮತ್ತು ಅರಮನೆ ಸಮೂಹ ದೇವಾಲಯಗಳ ಅಧಿಕಾರಿಗಳ ವಶಕ್ಕೆ ಒಪ್ಪಿಸಿದರು.



ಮಹಾಶಿವರಾತ್ರಿ ಹಿನ್ನೆಲೆಯಲ್ಲಿ ಜಿಲ್ಲಾ ಖಜಾನೆಯಿಂದ ಮೈಸೂರು ಅರಮನೆಯ ಆವರಣದಲ್ಲಿರುವ ತ್ರಿನೇಶ್ವರಸ್ವಾಮಿ ದೇವಾಲಯಕ್ಕೆ ಚಿನ್ನದ ಕೊಳಗವನ್ನು ಒಪ್ಪಿಸಲಾಯಿತು.

11 ಕೆಜಿ ತೂಕದ ಚಿನ್ನದ ಕೊಳಗದ ಮೇಲ್ಭಾಗದಲ್ಲಿ ಗಂಗೆ, ಬೆಳ್ಳಿಯ ಅರ್ಧ ಚಂದ್ರ, ಕಿವಿಯಲ್ಲಿ ಕೊಂಡಲು ಸೇರಿದಂತೆ ವಿವಿಧ ಆಭರಣ ಪರಿಶೀಲಿಸಿ ದಾಖಲೀಕರಿಸಲಾಯಿತು. ಚಿನ್ನದ ಕೊಳಗವನ್ನು ತಮ್ಮ ಸುಪರ್ದಿಗೆ ಪಡೆದ ಬಳಿಕ ಮರದ ಪೆಟ್ಟಿಯಲ್ಲಿಟ್ಟು, ಅದನ್ನು ಸುರಕ್ಷಿತವಾಗಿ ದೇವಾಲಯದ ಕೊಠಡಿಯಲ್ಲಿಡಲಾಗಿದ್ದು, ನಾಳೆ(ಮಾ.8) ಮುಂಜಾನೆ ವಿವಿಧ ಪೂಜಾ ಕಾರ್ಯ ಜರುಗಿದ ನಂತರ ಗರ್ಭಗುಡಿಯಲ್ಲಿರುವ ಶಿವಲಿಂಗಕ್ಕೆ ಚಿನ್ನದ ಕೊಳಗ ಧಾರಣೆ ಮಾಡಲಾಗುತ್ತದೆ.

ಭಕ್ತರಿಗೆ ವ್ಯವಸ್ಥೆ: ಪ್ರತಿ ವರ್ಷದಂತೆ ಈ ವರ್ಷವೂ ಅರಮನೆಯ ತ್ರಿನೇಶ್ವರಸ್ವಾಮಿ ದೇವಾಲಯಕ್ಕೆ ಅಪಾರ ಸಂಖ್ಯೆಯ ಭಕ್ತರು ಭೇಟಿ ನೀಡುವ ಸಾಧ್ಯತೆ ಇದ್ದು, ಇದಕ್ಕಾಗಿ ಚಾಮುಂಡಿಬೆಟ್ಟ ಹಾಗೂ ಅರಮನೆ ಸಮೂಹ ದೇವಾಲಯಗಳ ಆಡಳಿತ ಮಂಡಳಿಯಿಂದ ಭಕ್ತರಿಗೆ ಶಾಮಿಯಾನ, ಕುಡಿಯುವ ನೀರು ಹಾಗೂ ಪ್ರಸಾದದ ವ್ಯವಸ್ಥೆ ಕಲ್ಪಿಸಲಾಗಿದೆ. ಜಯಮಾರ್ತಾಂಡ ದ್ವಾರದಿಂದ ಭಕ್ತರು ದೇವಾಲಯ ಪ್ರವೇಶಿಸಬಹುದಾಗಿದ್ದು, ಎರಡೂ ಬದಿಯಲ್ಲೂ ಸರದಿ ಸಾಲಿನಲ್ಲಿ ಬರುವ ಭಕ್ತರಿಗಾಗಿ ಶಾಮಿಯಾನ ಹಾಕಲಾಗಿದೆ. ಅಲ್ಲದೆ, ಪ್ರಸಾದ ವಿತರಣೆಗೂ ವ್ಯವಸ್ಥೆ ಮಾಡಲಾಗಿದ್ದು, ದಾಹ ತೀರಿಸಲು ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಈ ಸಂದರ್ಭದಲ್ಲಿ ಚಾಮುಂಡಿಬೆಟ್ಟದ ದೇವಾಲಯದ ಆಡಳಿತಾಧಿಕಾರಿ ಕೃಷ್ಣ ಮುಜರಾಯಿ ತಹಶೀಲ್ದಾರ್ ವಿದ್ಯುಲತಾ, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಅರಮನೆ ಭದ್ರತಾ ಪಡೆ ಎಸಿಪಿ ಚಂದ್ರಶೇಖರ್, ಅರಮನೆ ಸಮೂಹ ದೇವಾಲಯಗಳ ಮಂಡಳಿ ವ್ಯವಸ್ಥಾಪಕಿ ಶೀಲಾ, ಜಿಲ್ಲಾ ಅಗ್ನಿಶಾಮಕಾಧಿಕಾರಿ ಗುರುರಾಜ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಈ ಬಾರಿ ಮೂರು ದಿನ ದರ್ಶನ

ಪ್ರತಿ ವರ್ಷ ಶಿವರಾತ್ರಿ ದಿನ ಮಾತ್ರ ತ್ರಿನೇಶ್ವರಸ್ವಾಮಿ ಚಿನ್ನದ ಕೊಳಗ ಧರಿಸಿ ಕಂಗೊಳಿಸುವ ದರ್ಶನ ಭಕ್ತರಿಗೆ ಸಿಗುತ್ತಿತ್ತು. ಕೆಲವು ವರ್ಷ ಎರಡು ದಿನ ಕೊಳಗ ಧಾರಣೆ ಮಾಡಿರುವ ಉದಾಹರಣೆಯೂ ಇತ್ತು. ಆದರೆ, ಈ ವರ್ಷ ಮೂರು ದಿನಗಳ ಕಾಲ ಚಿನ್ನದ ಕೊಳಗ ಧಾರಣೆಯಾಗಿರುವ ತ್ರಿನೇಶ್ವರಸ್ವಾಮಿಯ ದರ್ಶನ ಪಡೆಯುವ ಅವಕಾಶ ಭಕ್ತರಿಗೆ ಒದಗಿಬಂದಿದೆ. ಶುಕ್ರವಾರ ಶಿವರಾತ್ರಿ ಹಬ್ಬದ ಅಂಗವಾಗಿ ಕೊಳಗ ಧರಿಸಲಾಗುತ್ತದೆ. ಮಾ.9 ಎರಡನೇ ಶನಿವಾರವಾಗಿರುವುದರಿಂದ ಹಾಗೂ ಮಾ.10 ಭಾನುವಾರ. ಈ ಎರಡೂ ದಿನವೂ ಸರ್ಕಾರಿ ರಜೆ ದಿನ ಖಜಾನೆ ಬಂದ್ ಆಗಿರುತ್ತದೆ. ಈ ಕಾರಣದಿಂದ ಚಿನ್ನದ ಕೊಳಗ ಮೂರು ದಿನವೂ ತ್ರಿನೇಶ್ವರಸ್ವಾಮಿಯ ಗರ್ಭಗುಡಿಯಲ್ಲಿ ಶಿವಲಿಂಗಕ್ಕೆ ಧಾರಣೆಯಾಗಿರುತ್ತದೆ.

ಮಾ.8ರಂದು ಬೆಳಗ್ಗೆ 6 ಗಂಟೆಯಿಂದ ಭಕ್ತರಿಗೆ ದೇವಾಲಯಕ್ಕೆ ಪ್ರವೇಶಾವಕಾಶ ಕಲ್ಪಿಸಲಾಗಿದ್ದು, ಮಧ್ಯರಾತ್ರಿವರೆಗೂ ಶಿವನ ದರ್ಶನ ಪಡೆಯಬಹುದಾಗಿದೆ. ಮಾ.9 ಮತ್ತು 10ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 1, ಸಂಜೆ 5ರಿಂದ ರಾತ್ರಿ 8 ಗಂಟೆವರೆಗೆ ಚಿನ್ನದ ಕೊಳಗದಿಂದ ಅಲಂಕೃತಗೊಂಡಿರುವ ತ್ರಿನೇಶ್ವರಸ್ವಾಮಿಯ ದರ್ಶನ ಪಡೆಯಬಹುದಾಗಿದೆ. ಮಾ.11ರಂದು ಬೆಳಗ್ಗೆ 10.30ರಿಂದ 11 ಗಂಟೆ ವೇಳೆಗೆ ಚಿನ್ನದ ಕೊಳಗವನ್ನು ಶಿವಲಿಂಗದಿಂದ ತೆಗೆದು, ಬಿಗಿ ಭದ್ರತೆಯಲ್ಲಿ ಜಿಲ್ಲಾ ಖಜಾನೆಗೆ ರವಾನಿಸಲಾಗುತ್ತದೆ.



ಚಾಮುಂಡಿಬೆಟ್ಟ ಗ್ರಾಮ ಪಂಚಾಯಿತಿ ವತಿಯಿಂದ ಹೊಲಿಗೆ ಯಂತ್ರ ವಿತರಿಸಲಾಯಿತು. ಈ ವೇಳೆ ಗ್ರಾಪಂ ಅಧ್ಯಕ್ಷೆ ನಾಗಮ್ಮ, ಉಪಾಧ್ಯಕ್ಷ ರವಿಕುಮಾರ್, ಸದಸ್ಯರಾದ ಭರತ್, ಮಂಜುನಾಥ್, ಸುಜಾತ, ಪಿಡಿಒ ರೂಪೇಶ್‌ಕುಮಾರ್, ಚಾಮುಂಡಿ ಬೆಟ್ಟ, ತಾವರೆಕಟ್ಟೆ ಗ್ರಾಮಸ್ಥರು ಉಪಸ್ಥಿತರಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ಮಾ.7–ಎನ್.ಜೆ.ಎಸ್. ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ಸಂಯುಕ್ತಾಶ್ರಯದಲ್ಲಿ ಮಾ.12ರಂದು ಬೆಳಗ್ಗೆ 9.30ರಿಂದ ಮ. 2ರವರೆಗೆ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 94487 53597, 99161 55453, 94487 38657 ಸಂಪರ್ಕಿಸಿ.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಮೈಸೂರು ಸೇಲ್ಸ್ ಏರಿಯಾ ಡೀಲರ್ಸ್ ಆಫ್ ಹಿಂದೂಸ್ಥಾನ್ ಪೆಟ್ರೋಲಿಯಂ ಕಾರ್ಪೋರೇಷನ್, ಲಯನ್ಸ್ ಕ್ಲಬ್ ಆಫ್ ಮೈಸೂರು ಹೆರಿಟೇಜ್ ಸಿಟಿ:** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಮುಖ್ಯ ಅತಿಥಿಗಳು: ಸೈಕಲ್ ಪ್ಯೂರ್ ಅಗರಬತ್ತೀಸ್‌ನ ಶ್ರೀಮತಿ ಜಾನವಿಮೂರ್ತಿ, ಡಾ.ಅನಾ ಎಂ.ಷರೀಫ್, ಸ್ಥಳ: ಹೊರವರ್ತುಲ ರಸ್ತೆ, ಬೋಗಾದಿ, ಬೆಳಗ್ಗೆ 9 ರಿಂದ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ :** 88ನೇ ತ್ರಿಮೂರ್ತಿ ಶಿವಜಯಂತಿ ಮಹೋತ್ಸವ, ಶಿವರಾತ್ರಿ ಮಹೋತ್ಸವ, ಈವಿವಿ, ಜ್ಞಾನ ಸರೋವರ ಸಂಚಾಲಕಿ ಬಿ.ಕೆ.ಶಾರದಾಜಿ ಅವರಿಂದ ಶಿವ ಜಯಂತಿಯ ಆಧ್ಯಾತ್ಮಿಕ ರಹಸ್ಯಗಳು ಕುರಿತು ಪ್ರವಚನ, ರಮೇಶ್ ಮತ್ತು ತಂಡದಿಂದ ಶಿವಪಾರ್ವತಿ ನೃತ್ಯ ಮತ್ತು ಇನ್ನಿತರ ವಿಶೇಷ ನೃತ್ಯಗಳು, ಸ್ಥಳ: ಓಂ ಶಾಂತಿ ಮಂಟಪ, ಕಾಳಿದಾಸ ರಸ್ತೆ, ಸಂಜೆ 6ರಿಂದ.

ನಗರದ ವಿವಿಧೆಡೆ ಮಹಾಶಿವರಾತ್ರಿ ವಿಶೇಷ ಪೂಜೆ

■ **ಶ್ರೀಕ್ಷೇತ್ರ ಶ್ರೀ ಭೋಗೇಶ್ವರ ಶ್ರೀ ಸಪ್ತ ಮಾತೃಕಾ ಹಿರಿದೇವಮ್ಮ ದೇವಸ್ಥಾನ:** ಮಹಾಶಿವರಾತ್ರಿ ಜಾತ್ರಾ ಮಹೋತ್ಸವ, ಬೆಳಗ್ಗೆ 5 ಗಂಟೆಯಿಂದ ಸಂಕಲ್ಪ, ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಶಿವ ಸಹಸ್ರನಾಮಾರ್ಚನೆ, ಅಷ್ಟೋತ್ತರ ಹಾಗೂ ದಿನಪೂರ್ತಿ ಭಸ್ಮಾರ್ಚನೆ–ರುದ್ರಾಭಿಷೇಕ, ಶಿವ ಪಂಚಾಕ್ಷರಿ, ತ್ರಿಶತಿ ಹೋಮ, ಪೂರ್ಣಾಹುತಿ ಹಾಗೂ 4ರಿಂದ ಪೂಜೆ ರಾತ್ರಿ 6 ಗಂಟೆ, 9 ಗಂಟೆ, 12 ಗಂಟೆ, ಮಧ್ಯರಾತ್ರಿ 3 ಗಂಟೆಗೆ ವಿಶೇಷ ಪೂಜಾ ಸೇವೆ ಹಾಗೂ ಇಡೀ ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಶ್ರೀ ಸಪ್ತಮಾತೃಕಾ ಹಿರಿದೇವಮ್ಮ ದೇವಸ್ಥಾನ, ಬೋಗಾದಿ ರಿಂಗ್ ರಸ್ತೆ.



■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಮಹಾಶಿವರಾತ್ರಿ ಕಾರ್ಯಕ್ರಮಗಳು, ಬೆಳಗ್ಗೆ 6ಕ್ಕೆ ಮಹಾರುದ್ರ ಹೋಮ, 9ಕ್ಕೆ ಶ್ರೀಚಕ್ರ ಪೂಜೆ, ಮಹಾರುದ್ರಹೋಮ, ಪೂರ್ಣಾಹುತಿ, ಭಕ್ತಾದಿಗಳಿಂದ ಮಹಾರುದ್ರಾಭಿಷೇಕ, ಮ.3ಕ್ಕೆ ಮೂಲಿಕೇಶ್ವರಿಗೆ ಪೂಜೆ, ಸಂಜೆ 6.30ಕ್ಕೆ ಶ್ರೀ ಸ್ವಾಮೀಜಿಯವರಿಂದ ಸಚ್ಚಿದಾನಂದೇಶ್ವರ ಶಿವಲಿಂಗಕ್ಕೆ ರುದ್ರಾಭಿಷೇಕ, 7ಕ್ಕೆ ಭಕ್ತರಿಂದ ಶಿವಲಿಂಗಕ್ಕೆ ಸಹಸ್ರ ಕಳಶಾಭಿಷೇಕ, ರಾತ್ರಿ 10ಕ್ಕೆ ಸಚ್ಚಿದಾನಂದೇಶ್ವರ ಶಿವಲಿಂಗಕ್ಕೆ 11 ಬಾರಿ ರುದ್ರಾಭಿಷೇಕ, ವಿವಿಧ ಅಲಂಕಾರಗಳು, ಸಂಜೆ 7ಕ್ಕೆ ವಿದ್ವಾನ್ ಕೆ.ಎಸ್.ವಿಷ್ಣುದೇವ್ ಅವರಿಂದ ಕರ್ನಾಟಕ ಸಂಗೀತ ಗಾಯನ, ಸಂಜೆ 10ಕ್ಕೆ ವಿದುಷಿ ಸುಕನ್ಯಾ ರಾಮಗೋಪಾಲ್ ಅವರಿಂದ ಸ್ತ್ರೀ ತಾಲ್ ತರಂಗ್, ರಾತ್ರಿ 11.30 ರಿಂದ ಶಿವಾಮೃತಂ ಮತ್ತು ಹನುಮಾನ್ ಚಾಲೀಸ, ಬೆಳಗ್ಗೆ 9ಕ್ಕೆ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರಿಂದ ಶಿವ ಭಜನೆ, ದಿವ್ಯನಾಮ ಸಂಕೀರ್ತನೆ, ಉಪನ್ಯಾಸ, ಬೆಳಗ್ಗೆ 6ಕ್ಕೆ ಸಚ್ಚಿದಾನಂದೇಶ್ವರ ಶಿವಲಿಂಗಕ್ಕೆ ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಕೆ.ಹೆಮ್ಮನಹಳ್ಳಿ ಶ್ರೀ ಮಹಾಲಿಂಗೇಶ್ವರ ದೇವಾಲಯ:** ಮಹಾಶಿವರಾತ್ರಿ ಪ್ರಯುಕ್ತ 30ನೇ ಜಾತ್ರಾ ಮಹೋತ್ಸವ, ಬೆಳಗ್ಗೆಯಿಂದ ಪ್ರತಿ ಆರು ಗಂಟೆಗೊಂದರಂತೆ ರುದ್ರಾಭಿಷೇಕ, ಅಲಂಕಾರ, ಪ್ರಸಾದ ವಿತರಿಸಲಾಗುವುದು. ಬೆಳಗ್ಗೆ 10ಕ್ಕೆ ಗ್ರಾಮೀಣ ಮಕ್ಕಳು, ಹಿರಿಯರಿಂದ ಜನಪದ ಗೀತೆ, ನೃತ್ಯ, ರಂಗ ಗೀತೆ ಇತ್ಯಾದಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ರಾತ್ರಿ 7ಕ್ಕೆ 'ಭಗೀರಥ' ಪೌರಾಣಿಕ ನಾಟಕದ ಪುಸ್ತಕದ ಲೋಕಾರ್ಪಣೆ ಹಾಗೂ ಗ್ರಾಮೀಣ ರಂಗ ಪ್ರತಿಭೆಗಳಾದ ಚಾಮಶೆಟ್ಟಿ, ವರದರಾಜು (ಅಂಧ ಕಲಾವಿದ) ಮತ್ತು ಆರ್. ಮಂಜುನಾಥ ಅವರನ್ನು ಸನ್ಮಾನಿಸಲಾಗುವುದು. ನಂತರ ಹೆಮ್ಮರಗಾಲದ ಶ್ರೀ ಮಲ್ಲಿಕಾರ್ಜುನ ಡ್ರಾಮಾ ಸೀನರಿಯಿಂದ ಹೆಮ್ಮನಹಳ್ಳಿಯ ಶ್ರೀ ಮಹಾಲಿಂಗೇಶ್ವರ ಕೃಪಾಪೋಷಿತ ನಾಟಕ ಮಂಡಳಿಯ ಕಲಾವಿದರಿಂದ ಬೇಳ್ಕಾವೆ ನರಹರಿಶಾಸ್ತ್ರಿ ವಿರಚಿತ ಸಂಪೂರ್ಣ ರಾಮಾಯಣ ಪೌರಾಣಿಕ ನಾಟಕ ಸೂರ್ಯೋದಯದವರೆಗೆ, ಸ್ಥಳ: ದೇವಾಲಯ, ಕೆ. ಹೆಮ್ಮನಹಳ್ಳಿ, ಬೋಗಾದಿ ರಸ್ತೆ.



ಇಂದಿನ ಪಂಚಾಂಗ

8.3.2024 ಶುಕ್ರವಾರ, ಮಳೆ ನಕ್ಷತ್ರ: ಪೂರ್ವಭಾದ್ರ 4.03.2024ರಿಂದ 16.03.2024 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ತ್ರಯೋದಶಿ, ನಕ್ಷತ್ರ: ಶ್ರವಣ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಕೆ.ಹೆಮ್ಮನಹಳ್ಳಿಯ ಶ್ರೀ ಶಂಕರೇಶ್ವರ ಸ್ವಾಮಿ ಹಾಗೂ ಶ್ರೀ ಶಂಕರ ನಾರಾಯಣ ದೇವಸ್ಥಾನ:** ಶಿವರಾತ್ರಿ ಮಹೋತ್ಸವ, ಮುಖ್ಯ ಅತಿಥಿಗಳು: ಶಾಸಕರಾದ ಜಿ.ಟಿ.ದೇವೇಗೌಡ, ಜಿ.ಡಿ.ಹರೀಶ್‌ಗೌಡ, ಮಾಜಿ ಜಿಪಂ ಸದಸ್ಯ ಮರಿಜೋಗೇಗೌಡ, ಸ್ಥಳ: ದೇವಸ್ಥಾನ, ಕೆ. ಹೆಮ್ಮನಹಳ್ಳಿ, ಬೆಳಗ್ಗೆಯಿಂದ.

■ **ಶ್ರೀ ಬಲಮುರಿ ದೇವಾಲಯಗಳ ಅಭಿವೃದ್ಧಿ ಸಮಿತಿ ಹಾಗೂ ಬೆಳಗೊಳ ಗ್ರಾಮಸ್ಥರು:** ಶ್ರೀ ಬಲಮುರಿ ಕ್ಷೇತ್ರ ಸಪರಿವಾರ ಶ್ರೀ ಅಗಸ್ತ್ಯೇಶ್ವರ ಸ್ವಾಮಿಯವರ ಮಹಾರಥೋತ್ಸವ, ಸಂಜೆ ಗುರುಪ್ರಾರ್ಥನೆ, ಗಣಪತಿ ಪೂಜೆ, ಮಹಾಸಂಕಲ್ಪ, ಪುಣ್ಯಾಹವಾಚನ, ಪಂಚಗವ್ಯ, ಮಂಟಪೋತ್ಸವ, ರಥಬಲಿ, ರಥೋತ್ಸವಕ್ಕೆ ಚಾಲನೆ: ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಆಚಾರ್ಯ ಶ್ರೀ ಲಕ್ಷ್ಮಿ ನಾರಾಯಣನ್ ಅವರಿಗೆ ಪೂರ್ಣಕುಂಭ ಸ್ವಾಗತ, ರಥಮಂದಿರ ಉದ್ಘಾಟನೆ: ಶಾಸಕ ರಮೇಶ್ ಬಂಡಿಸಿದ್ದೇಗೌಡ, ಅಧ್ಯಕ್ಷತೆ : ಸಮಿತಿ ಅಧ್ಯಕ್ಷ ಬಿ.ಸಿ.ಸುಧಾಕರ್, ಮುಖ್ಯ ಅತಿಥಿಗಳು: ಸಂಸದರಾದ ಸುಮಲತಾ ಅಂಬರೀಷ್, ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ, ಬಿಜೆಪಿ ಮುಖಂಡ ಸಚ್ಚಿದಾನಂದ, ಮುಖಂಡರಾದ ನಂಜುಂಡೇಗೌಡ, ಶ್ರೀನಿವಾಸೇಗೌಡ, ವಿಷಕಂಠೇಗೌಡ, ಸಂಜೆ 7ಕ್ಕೆ ಪ್ರಸಾದ ವಿನಿಯೋಗ, ಸಂಪೂರ್ಣ ರಾಮಾಯಣ ಪೌರಾಣಿಕ ನಾಟಕ ಪ್ರದರ್ಶನ, ಸ್ಥಳ: ದೇವಸ್ಥಾನ, ಬೆಳಗೊಳ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ :** ಮಹಾಶಿವರಾತ್ರಿ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆಯಲ್ಲಿ ಬೆಳಗ್ಗೆ 6.30ಕ್ಕೆ ಮಹಾರುದ್ರಾಭಿಷೇಕ, ಶ್ರೀಗಳ ಇಷ್ಟಲಿಂಗಪೂಜೆ, ಪ್ರಾಕಾರೋತ್ಸವ, ಸಂಜೆ 7ಕ್ಕೆ ಶಿವದೀಕ್ಷೆ, ಮಹಾಮಂಗಳಾರತಿ, ಬೆಳ್ಳಿರಥ ಪ್ರಾಕಾರೋತ್ಸವ, ರಾತ್ರಿ 12ಕ್ಕೆ ದ್ವಿತೀಯ ಪೂಜೆ, ಅಭಿಷೇಕ, ಅಷ್ಟೋತ್ತರ, ಮಹಾಮಂಗಳಾರತಿ, ರಾತ್ರಿ 3ಕ್ಕೆ ತೃತೀಯ ಪೂಜೆ, ಅಭಿಷೇಕ, ಅಷ್ಟೋತ್ತರ, ಮಹಾಮಂಗಳಾರತಿ, ಬೆಳಗ್ಗೆ 6ಕ್ಕೆ ಚತುರ್ಥ ಪೂಜೆ, ಇಡೀ ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮಗಳು, ಅಖಂಡ ಭಜನೆ, ಸ್ಥಳ: ಸುತ್ತೂರು ಶ್ರೀಕ್ಷೇತ್ರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬಣ್ಣದ ಬಾನಾಡಿಗಳು–ಬಾನುಲಿ ಸರಣಿ, ರಚನೆ–ಲೀಲಾ ಅಪ್ಪಾಜಿ, ಪ್ರಸ್ತುತಿ–ಜಿ.ಶಾಂತಕುಮಾರ್, 6.40 ಕರಾಮುವಿವಿ ಮುಕ್ತವಾಣಿ– ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ.ಭಾಗವಹಿಸುತ್ತಾರೆ. ಡಾ.ಲಕ್ಷ್ಮೀ, ಡೀನ್–ಶೈಕ್ಷಣಿಕ. ಪ್ರಸ್ತುತಿ–ಎನ್.ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 KABI-ಕರ್ನಾಟಕ ಮೆದುಳು ಆರೋಗ್ಯ–NIMHAN ಪ್ರಾಯೋಜಿತ ಕಾರ್ಯಕ್ರಮ, 9.00 ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಆರ್.ಕೆ.ಪದ್ಮನಾಭ–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಮಧ್ಯಾಹ್ನ: 12.30 ದೇವರನಾಮ–ವಿದ್ಯಾಭೂಷಣ, ಅನಂತ ಕುಲಕರ್ಣಿ, 12.45 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಭಾವಗೀತೆ–ಎಸ್.ಮಂಜುಳಾ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಆರ್.ಪ್ರಸನ್ನ–ಗಿಟಾರ್ ವಾದನ, 4.00 ಮಹಿಳಾರಂಗ–ಮಹಿಳಾ ಸುರಕ್ಷತೆ, ಸಾಮಾಜಿಕ ಜವಾಬ್ದಾರಿ ಹಾಗೂ ಕಾನೂನು ಕುರಿತು ಚರ್ಚೆ. ಭಾಗವಹಿಸುವವರು ಡಾ.ಚಂದ್ರಮತಿ ಸೋಂದಾ, ಡಾ.ಸ್ವರ್ಣ ಮಾಲಾ ಶಿರಸಿ ಹಾಗೂ ಕೆ.ಎಸ್.ಸುರೇಶ್ ನಡೆಸಿಕೊಡುತ್ತಾರೆ ಡಾ.ಶೈಲಾ, 4.30 ವೃತ್ತಿ ಮಾರ್ಗದರ್ಶನ–ಜಾನಪದ ಅಧ್ಯಯನ ವಿಷಯದಲ್ಲಿ ಇರುವ ಅಧ್ಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಅಂಬಳಿಕೆ ಹಿರಿಯಣ್ಣ ಅವರೊಂದಿಗೆ ಮಾತುಕತೆ, 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ–ಕೃಷಿ ಲೋಕ, ಪ್ರಸುತಿ–ಆರ್.ಲೋಕೇಶ್ವರಿ, 8.00 ಕನ್ನಡ ಭಾರತಿ–Englishನಲ್ಲಿ ಅವತರಿಸಿದ ಕುಮಾರವ್ಯಾಸ–ಡಾ. ಕೃಷ್ಣಮೂರ್ತಿ ಹನೂರು ಅವರೊಂದಿಗೆ ಸಂವಾದ. ನಡೆಸಿಕೊಡುತ್ತಾರೆ ದಿವಾಕರ ಹೆಗಡೆ, 9.30 ಆರ್.ಗಣೇಶ್ ಮತ್ತು ಆರ್.ಕುಮಾರೇಶ್–ಯುಗಳ ವಯೋಲಿನ್ ವಾದನ, 10.00 ಹಳ್ಳಿ ಹಾಡು, ಪ್ರಸ್ತುತಿ–ಡಾ.ಮೈಸೂರು ಉಮೇಶ್, 10.30 ಸವಿನೆನಪು

■ **ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** ಮಹಾಶಿವರಾತ್ರಿ ಪೂಜಾ ಮಹೋತ್ಸವ, ಬೆಳಗ್ಗೆ 6ಕ್ಕೆ ಮಹಾರುದ್ರಾಭಿಷೇಕ, ಹಾಲಭಿಷೇಕ, ಬಿಲ್ವಾರ್ಚನೆ, ನಿವೇದನೆ, ದೂಪದಾರತಿ, ತುಪ್ಪದಾರತಿ, ವಿಶೇಷ ಹೂವಿನ ಅಲಂಕಾರ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6ಕ್ಕೆ ಶ್ರೀ ಮಹದೇಶ್ವರ ಸ್ವಾಮಿಯವರ ಪ್ರಾಣಲಿಂಗಕ್ಕೆ ವಿಶೇಷ ಮಹಾರುದ್ರಾಭಿಷೇಕ, ಸಂಜೆ 7ಕ್ಕೆ ಶ್ರೀ ಸ್ವಾಮಿಯವರ ಉತ್ಸವಮೂರ್ತಿ, ಸುವರ್ಣ ಕೊಳಗದ ಮೆರವಣಿಗೆ, ಸ್ಥಳ: ದೇವಸ್ಥಾನ.

■ **ಶ್ರೀ ಕಾಮೇಶ್ವರ ಕಾಮೇಶ್ವರಿ ದೇವಸ್ಥಾನ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕೈಂಕರ್ಯ ಸಭಾ, ಅರಮನೆ ಮುಜರಾಯಿ ಸಂಸ್ಥೆಗಳು :** ಮಹಾಶಿವರಾತ್ರಿ ವಿಶೇಷ ಪೂಜೆ, ಬೆಳಗ್ಗೆ 8.30ಕ್ಕೆ ಏಕಾದಶವಾರ ರುದ್ರಾಭಿಷೇಕ, ಮ. 12ಕ್ಕೆ ದೇವಸ್ಥಾನದಲ್ಲಿ ಪ್ರಾಕಾರೋತ್ಸವ, ಮ.12.30ಕ್ಕೆ ಮಹಾಮಂಗಳಾರತಿ, ಸ್ಥಳ: ದೇವಸ್ಥಾನ, ರಾಮಾನುಜ ರಸ್ತೆ.

■ **ಶ್ರೀ ಕೊರಗಜ್ಜ ದೇವಸ್ಥಾನ :** ಬೆಳಗ್ಗೆ 8ರಿಂದ ಮಹಾಶಿವರಾತ್ರಿ ವಿಶೇಷ ಪೂಜೆಗಳು, ಸ್ಥಳ: ಕೇರ್ಗಳ್ಳಿ, ಆರ್.ಟಿ. ನಗರ, ಸ್ವಾಮಿ ಶ್ರೀ ಕೊರಗಜ್ಜ ದೇವಸ್ಥಾನ.

■ **ಶ್ರೀ ಮುಕ್ಕಣ್ಣೇಶ್ವರಸ್ವಾಮಿ ದೇವಸ್ಥಾನ :** ಮಹಾಶಿವರಾತ್ರಿ ಪೂಜಾ ಮಹೋತ್ಸವ, ಶ್ರೀ ಗಣಪತಿ ಪೂಜೆ, ಕಳಸ ಸ್ಥಾಪನೆ, ನವಗ್ರಹ ಪೂಜೆ, ಶ್ರೀ ಮುಕ್ಕಣ್ಣೇಶ್ವರಸ್ವಾಮಿಗೆ ಪಂಚಾಮೃತ, ರುದ್ರಾಭಿಷೇಕ, ಅರ್ಚನೆ, ಮಹಾಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸಂಜೆ 4.30ಕ್ಕೆ ಶ್ರೀ ಮುಕ್ಕಣ್ಣೇಶ್ವರಸ್ವಾಮಿಯವರ ಉತ್ಸವ, ಸಂಜೆ 7.30 ರಿಂದ ಇಡೀ ರಾತ್ರಿ ಅಖಂಡ ಭಜನೆ, ಸ್ಥಳ: ದೇವಸ್ಥಾನ ಅಶೋಕ ರಸ್ತೆ.

■ **ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನ :** ಮಹಾಶಿವರಾತ್ರಿ ಪೂಜೆ, ಸಂಜೆ 6 ರಿಂದ ಶ್ರೀ ಅಮೃತೇಶ್ವರಸ್ವಾಮಿಗೆ ಪಂಚಾಮೃತ ಪುರಸ್ಸರ ರುದ್ರಾಭಿಷೇಕ, ಪಾರ್ಥಿವ ಲಿಂಗಪೂಜೆ, ರಾತ್ರಿ 9ಕ್ಕೆ ರಾಶಿ ಪೂಜೆ, ರಂಗಪೂಜೆ, ಶಿಖರ ದೀಪಾರಾಧನೆ, ಸ್ಥಳ: ದೇವಸ್ಥಾನ, ದಿವಾನ್ಸ್ ರಸ್ತೆ, ದೇವರಾಜ ಮೊಹಲ್ಲಾ.

ಬಹುರೂಪಿ ನಾಟಕೋತ್ಸವದಲ್ಲಿಂದು

ಕಿಂದರಿಜೋಗಿ (ಸಂಜೆ 5.30ಕ್ಕೆ)



ವೀರಗಾಸೆ : ಬಸವಜ್ಯೋತಿ ಮಹಿಳಾ ವೀರಗಾಸೆ ಕಲಾತಂಡ, ಚಿಕ್ಕಮಗಳೂರು

ಮಹಿಳಾ ಪೂಜಾ ಕುಣಿತ : ಕೀರ್ತನ, ಕ್ಯಾತಗಟ್ಟ ಪೋಸ್ಟ್, ಮದ್ದೂರು

ಕಿರು ರಂಗಮಂದಿರ (ಸಂಜೆ 6ಕ್ಕೆ)

ದ್ರೋಪದಿ ಹೇಳ್ತವ್ಳೆ (ಕನ್ನಡ), ರಚನೆ : ಕುಮಾರವ್ಯಾಸ ಭಾರತ ಮತ್ತು ಜನಪದ ಮಹಾಭಾರತ

ನಿರ್ದೇಶನ : ಗಣೇಶ್ ಮಂದಾರ್ತಿ, ತಂಡ : ರಂಗಾಸ್ಥೆ, ಬೆಂಗಳೂರು.

ಭೂಮಿಗೀತ (ಸಂಜೆ 6.30ಕ್ಕೆ)

ದುಖ್ವಾ ಮೇ ಬೀತಲ್ ರತಿಯಾ (ಹಿಂದಿ), ರಚನೆ : ರಾಮೇಶ್ವರ್ ಉಪಾಧ್ಯಾಯ್, ರೂಪಾಂತರ : ಲಲಿತ್ ಸಿಂಹ ಪೊಖರಿಯಾ, ನಿರ್ದೇಶನ :ಪ್ರಸೂನ್ ನರೇನ್ ಶ್ರೀವತ್ಸವ್, ತಂಡ : ಕಮಲಾಶಂಕರ್ ಧನವಂತಿದೇವಿ ಫೌಂಡೇಷನ್, ಉತ್ತರ ಪ್ರದೇಶ

ವನರಂಗ (ಸಂಜೆ 7ಕ್ಕೆ)

ಸೀತೆಯ ವ್ಯಥೆ (ಕನ್ನಡ) ಯಕ್ಷಗಾನ ಪ್ರಸಂಗ, ತಂಡ : ಥಿಯೇಟರ್ ಯಕ್ಷ, ಉಡುಪಿ, ನಿರ್ದೇಶನ : ಪೃಥ್ವಿರಾಜ ಕವತ್ತಾರು.

ಕಲಾಮಂದಿರ (ಸಂಜೆ 7.30ಕ್ಕೆ)

ಕಲ್ಯಾಣದ ಬಾಗಿಲು (ಕನ್ನಡ), ರಚನೆ : ಡಾ. ನಟರಾಜ್ ಬೂದಾಳು, ನಿರ್ದೇಶನ : ಸಿ. ಬಸವಲಿಂಗಯ್ಯ

ತಂಡ : ಶಿವಕುಮಾರ ಕಲಾ ಸಂಘ, ಸಾಣೇಹಳ್ಳಿ

ಬಹುರೂಪಿ ಚಲನಚಿತ್ರೋತ್ಸವ

ಶ್ರೀರಂಗ (10.30 ರಿಂದ ಮ. 12)

ಅಕ್ಕಮಹಾದೇವಿ (ಕನ್ನಡ), ವಚನಕಾರ್ತಿಯರು (ಕನ್ನಡ), ನಿರ್ದೇಶನ : ವೀರಪ್ಪ ಮರಳವಾಡಿ

ಮ. 12 ರಿಂದ ಮ. 1.30

ದಿ ಬಾಬುಸ್ಕಸ್ ಆಫ್ ಚೆರ್ನೋಬಿಲ್ (ಇಂಗ್ಲಿಷ್) ನಿರ್ದೇಶನ : ಹೋಲಿ ಮಾರಿಸ್, ಅನ್ನೆ ಬೋಗಾರ್ಟ್

ಮ. 2 ರಿಂದ ಸಂಜೆ 4.30 ರವರೆಗೆ

ಗೆಜ್ಜೆಪೂಜೆ (ಕನ್ನಡ) ನಿರ್ದೇಶನ : ಪುಟ್ಟಣ್ಣ ಕಣಗಾಲ್

ಮೈಸೂರು ಹಾಗೂ ಸುತ್ತಮುತ್ತ ನಾಳೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ವ್ಯವಸ್ಥಾಪಕರು :** ಶನಿದೇವರು ಮತ್ತು ಚಾಮುಂಡಮ್ಮನ ಶಂಕುಸ್ಥಾಪನೆ, ಸ್ಥಳ: 4ನೇ ಕ್ರಾಸ್, ಚಾಮುಂಡಮ್ಮನ ದೇವಸ್ಥಾನದ ಹತ್ತಿರ, ಸುಣ್ಣದಕೇರಿ, ಬೆಳಗ್ಗೆ 10ಕ್ಕೆ.

■ **ವಾಸನ್ ಕಣ್ಣಿನ ಆಸ್ಪತ್ರೆ :** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಮುಖ್ಯ ಅತಿಥಿಗಳು : ಮೈಸೂರು ಲಿಟರೇಚರ್ ಫೆಸ್ಟಿವಲ್ ಅಧ್ಯಕ್ಷೆ ಶುಭಾ ಸಂಜಯ್ ಅರಸ್, ತಾಲೂಕು ಆರೋಗ್ಯಾಧಿಕಾರಿ ಡಾ. ಪುಟ್ಟತಾಯಮ್ಮ, ಸ್ಥಳ: ವಾಸನ್ ಕಣ್ಣಿನ ಆಸ್ಪತ್ರೆ, ಲಕ್ಷ್ಮೀಪುರಂ, ಬೆಳಗ್ಗೆ 10.30ಕ್ಕೆ.

■ **ಶ್ರೀ ಮುಕ್ಕಣ್ಣೇಶ್ವರಸ್ವಾಮಿ ದೇವಸ್ಥಾನ :** ಮಹಾಶಿವರಾತ್ರಿ ಪೂಜಾ ಮಹೋತ್ಸವ, ಅಭಿಷೇಕ, ಸಹಸ್ರನಾಮ, ತೀರ್ಥಪ್ರಸಾದ ವಿನಿಯೋಗ, ಮ.12ಕ್ಕೆ ಮಹಾಮಂಗಳಾರತಿ, ತೀರ್ಥ ಪ್ರಸಾದ, ಅನ್ನಸಂತರ್ಪಣೆ, ಸ್ಥಳ: ದೇವಸ್ಥಾನ ಅಶೋಕ ರಸ್ತೆ.

■ **ಕಲಾಸುರುಚಿ, ಕುತೂಹಲಿ–ಕನ್ನಡ ಮತ್ತು ದಿ ಅಕಾಡೆಮಿ ಟ್ರಸ್ಟ್, ಸುರುಚಿ ರಂಗಮನೆ:** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ– 818, ಕಥೆ ಹೇಳುವವರು: ಆನಂದ್, ಕನ್ನಡ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ವಿನಾಯಕನಗರ. ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಸಂಜೆ 4.30

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಸಂಜೆ 6ಕ್ಕೆ.

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್:** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಮುಖ್ಯ ಅತಿಥಿಗಳು : ಡಿಆರ್‌ಸಿ ಸಿನಿಮಾಸ್ ಮ್ಯಾನೇಜಿಂಗ್ ಪಾರ್ಟನರ್ ವೈಶಾಲಿ ಹನುಮಂತ್, ಅಧ್ಯಕ್ಷತೆ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ.ಆರ್.ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಸಂಜೆ 6ಕ್ಕೆ



ನಾಳಿನ ಪಂಚಾಂಗ

9.3.2024 ಶನಿವಾರ, ಮಳೆ ನಕ್ಷತ್ರ: ಪೂರ್ವಭಾದ್ರ 4.03.2024ರಿಂದ 16.03.2024 ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ:** 88ನೇ ತ್ರಿಮೂರ್ತಿ ಶಿವಜಯಂತಿ ಮಹೋತ್ಸವ, ಮುಖ್ಯ ಅತಿಥಿಗಳು: ಮುಡಾ ಅಧ್ಯಕ್ಷ ಕೆ.ಮರಿಗೌಡ, ಅತಿಥಿಗಳು: ಶ್ರೀಮತಿ ಬಿ.ಎಲ್.ವೇದಪ್ರದ, ಬಿ.ಕೆ.ಮೋಹನ ಕುಮಾರಿ ಅವರಿಂದ ಮಕ್ಕಳ ಮನಸ್ಸನ್ನು ಪೋಷಕರು ಅರ್ಥ ಮಾಡಿಕೊಳ್ಳುವುದು ಹೇಗೆ ಕುರಿತು ಪ್ರವಚನ, ನಂಜನಗೂಡು ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಭರತನಾಟ್ಯ, ಸ್ಥಳ: ಓಂ ಶಾಂತಿ ಮಂಟಪ, ಕಾಳಿದಾಸ ರಸ್ತೆ, ಚಂದ್ರಕಲಾ ಆಸ್ಪತ್ರೆ ಬಳಿ, ಸಂಜೆ 6 ರಿಂದ.

■ **ಶ್ರೀ ಅಮೃತೇಶ್ವರಸ್ವಾಮಿ ದೇವಸ್ಥಾನ:** ಮಹಾಶಿವರಾತ್ರಿ ಪೂಜೆ, ರುದ್ರಹೋಮ, ಶನ್ಯೈಶ್ವರ ಜಯಂತಿ, ಸ್ಥಳ: ದೇವಸ್ಥಾನ, ದಿವಾನ್ಸ್ ರಸ್ತೆ, ದೇವರಾಜ ಮೊಹಲ್ಲಾ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಸಿಎಫ್‌ಟಿಆರ್‌ಐ ಶೋಧ ಅನುಶೋಧ–ಪ್ರಾಯೋಜಿತ ಕಾರ್ಯಕ್ರಮ, 6.40 ಪದಸಂಸ್ಕೃತಿ–ಪರಮೇಶ್ವರ ವಿ.ಭಟ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಮಂಜುಳಾ ಗುರುರಾಜ್, ಕೆ.ಎಸ್.ಸುರೇಖಾ. ಶ್ರೀ ರಕ್ಷಾ ಅರವಿಂದ್, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ–ಭಾಗವಹಿಸುವವರು ಸಂಗೀತ ಪರಿಚಾರಕ ಸಿ.ಆರ್.ಹಿಮಾಂಶು, 10.00 ಎಲ್.ಅರ್ಚನಾ–ಹಾಡುಗಾರಿಕೆ **ಮಧ್ಯಾಹ್ನ:** 12.45 ಜನಪದ ಸಂಗೀತ, 1.20 ಭಾವಗೀತೆ–ಆರ್.ವಿ.ಅನುಪಮಾ, 3.30 ಮಕ್ಕಳ ಮಂಟಪ–ಹಾಡುವ ಪ್ರತಿಭೆ ಶ್ರದ್ಧಾ ಪರಿಚಯ, ಪ್ರಸ್ತುತಿ– ಎಂ.ಎಸ್.ಭಾರತಿ, 4.00 ನಾಟಕ, 4.30 ನೆನಪಿನಂಗಳ, 6.50 ಕೃಷಿರಂಗ–ತೋರಣ ಹೂರಣ, ವಾರದ ಗ್ರಾಮೀಣ ಕಾರ್ಯಕ್ರಮ ಸಮಸ್ಯಾತ್ಮಕ ಮಣ್ಣಿನ ನಿರ್ವಹಣೆ ಕುರಿತು ಡಾ. ಅತೀಪಾ ಮುನಾವರಿ ಹಾಗೂ ಜೆ.ಕೆ. ಬಸವರಾಜು ಅವರೊಂದಿಗೆ ಸಂವಾದ, 8.00 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ– ಸುನಂದೋ ಮುಖರ್ಜಿ–ಸರೋಡ್ ವಾದನ

■ **ಕಲಾಸುರುಚಿ, ಕುತೂಹಲಿ–ಕನ್ನಡ ಮತ್ತು ದಿ ಅಕಾಡೆಮಿ ಟ್ರಸ್ಟ್, ಸುರುಚಿ ರಂಗಮನೆ:** ಸೈನ್ಸ್ ಸಂಜೆ ಕಾರ್ಯಕ್ರಮ, ಪ್ರೊ.ಗೋಪಾಲ್ ಮರಾಠೆ ಯವರಿಂದ ಕೊಲೆಸ್ಟ್ರಾಲ್: ಸತ್ಯ ಮಿಥ್ಯೆಗಳು ಕುರಿತು ಭಾಷಣ, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 6.30 ರಿಂದ.

ಬಹುರೂಪಿ ನಾಟಕೋತ್ಸವದಲ್ಲಿ ನಾಳೆ

ಕಿಂದರಿಜೋಗಿ (ಸಂಜೆ 5.30ಕ್ಕೆ)

ಡೊಳ್ಳು ಕುಣಿತ : ಕೆ.ಎಂ. ಅನ್ನಪ್ಪ ಮತ್ತು ತಂಡ, ಹಡಗಲು, ಕಡೂರು



ಪಟ ಕುಣಿತ : ರವಿ ಮತ್ತು ತಂಡ, ಕಡಲಗೆರೆ ಗ್ರಾಮ, ಪಾಂಡವಪುರ

ಕಿರು ರಂಗಮಂದಿರ (ಸಂಜೆ 6ಕ್ಕೆ)

ಗ್ಲಾನಿ (ಕನ್ನಡ), ರಚನೆ : ಜಿ.ಎಸ್. ಭಟ್ ಸಾಗರ, ನಿರ್ದೇಶನ : ಚಿದಂಬರರಾವ್ ಜಂಬೆ, ತಂಡ : ಉದಯ ಕಲಾವಿದರು, ಸಾಗರ

ಭೂಮಿಗೀತ (ಸಂಜೆ 6.30ಕ್ಕೆ)

ಜಂಪ್ (ಹಿಂದಿ), ರಚನೆ ಮತ್ತು ನಿರ್ದೇಶನ : ಮನೀಶ್ ವರ್ಮ

ತಂಡ : ಕಲೆಕ್ಟೀವ್ ಮ್ಯಾಡ್‌ನೆಸ್ ಸ್ಟುಡಿಯೋಸ್, ಮುಂಬೈ

ವನರಂಗ (ಸಂಜೆ 7ಕ್ಕೆ)

ಖಟಾರ (ಮರಾಠಿ), ರಚನೆ ಮತ್ತು ನಿರ್ದೇಶನ: ಅಮೋಲ್ ದೇವಿದಾಸ್ ಸಾಲ್ವೆ ತಂಡ : ಆಪ್ಲಫರ್, ಅಹಮದನಗರ, ಮಹಾರಾಷ್ಟ್ರ

ಕಲಾಮಂದಿರ (ಸಂಜೆ 7.30ಕ್ಕೆ)

ಚಾವುಂಡರಾಯ (ಕನ್ನಡ), ರಚನೆ : ಜಯರಾಂ ರಾಯಪುರದ

ನಿರ್ದೇಶನ : ಹೆಚ್.ಕೆ. ಶ್ವೇತಾರಾಣಿ, ತಂಡ : ಶ್ರೀ ಗಜಾನನ ಯುವಕ ಮಂಡಳಿ, ಶೇಷಗಿರಿ

ಬಹುರೂಪಿ ಚಲನಚಿತ್ರೋತ್ಸವ

ಶ್ರೀರಂಗ (10.30 ರಿಂದ ಮ. 12)

ಗಾಜಾ (2019, ಇಂಗ್ಲಿಷ್) ನಿರ್ದೇಶನ : ಗ್ಯಾರಿ ಕೀನ್, ಆಂಡ್ರ್ಯೂ ಮ್ಯಾಕೆನಲ್

ಮ. 12 ರಿಂದ ಮ. 1.30

ಆಫ್ಟರ್ ಸೆಲ್ಮಾ (2019 ಇಂಗ್ಲೀಷ್), ನಿರ್ದೇಶನ : ಲೋಕಿ ಮುಲ್‌ಹಾಲೆಂಡ್

ಮ. 2 ರಿಂದ ಸಂಜೆ 4.30 ರವರೆಗೆ

ಎಟ್ಜ್ ಲಿಮಾನ್ (ಅರೇಬಿಕ್/ಹೆಬ್ರ್ಯೂ) ನಿರ್ದೇಶನ : ಎರನ್ ರಿಕ್ಲಿಸ್



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮಾರ್ಚ್ 8 ಶುಕ್ರವಾರ 2024

ಸಂಪುಟ: 44 | ಸಂಚಿಕೆ: 320 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಬಿಡುವು

ಮಹಾಶಿವರಾತ್ರಿ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 9.3.2024ರ ಶನಿವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು

5, 8, 9, 11ನೇ ತರಗತಿ ಪಬ್ಲಿಕ್ ಪರೀಕ್ಷೆಗೆ 'ಹೈ' ವಿಭಾಗೀಯ ಪೀಠ ಅಸ್ತು

ಬೆಂಗಳೂರು, ಮಾ.7– ರಾಜ್ಯ ಸರ್ಕಾರ 5,8,9 ಮತ್ತು 11ನೇ ತರಗತಿಗಳಿಗೆ ನಡೆಸಲು ಉದ್ದೇಶಿಸಿದ್ದ ಪಬ್ಲಿಕ್ ಪರೀಕ್ಷೆ ರದ್ದುಪಡಿಸಿದ ರಾಜ್ಯ ಹೈಕೋರ್ಟ್‌ನ ಏಕಸದಸ್ಯ ಪೀಠದ ಆದೇಶದ ವಿರುದ್ಧ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಹೈಕೋರ್ಟ್‌ನ ವಿಭಾಗೀಯ ಪೀಠ, ಪರೀಕ್ಷೆಗೆ ಅಸ್ತು ಎಂದಿದೆ. ಹೀಗಾಗಿ ಮಾ.11ರ ಸೋಮವಾರದಿಂದ ಆರಂಭವಾಗಬೇಕಾಗಿದ್ದ ಪಬ್ಲಿಕ್ ಪರೀಕ್ಷೆಗಳು ಎಂದಿನಂತೆ ನಡೆಯಲಿವೆ.

ಕರ್ನಾಟಕ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಮತ್ತು ಸರ್ಕಾರ ಜಂಟಿಯಾಗಿ ಹೊರಡಿಸಿದ್ದ ಪಬ್ಲಿಕ್ ಪರೀಕ್ಷೆ ಸುತ್ತೋಲೆಯನ್ನು ಎರಡು ದಿನಗಳ ಹಿಂದೆ ಹೈಕೋರ್ಟ್ ಏಕಸದಸ್ಯ ಪೀಠ ರದ್ದುಪಡಿಸಿತ್ತು. ಅದನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಮತ್ತು ಶಿಕ್ಷಣ ಇಲಾಖೆಗಳು ಮೇಲ್ಮನವಿ ಸಲ್ಲಿಸಿದ್ದವು.





ಮೇಲ್ಮನವಿಯಲ್ಲಿ ಸರ್ಕಾರದ ವಾದ: ಹೈಕೋರ್ಟ್ ಆದೇಶ ಪ್ರಶ್ನಿಸಿ ವಿಭಾಗೀಯ ಪೀಠಕ್ಕೆ ಸರ್ಕಾರ ಸಲ್ಲಿಸಿದ ಮೇಲ್ಮನವಿಯಲ್ಲಿ, 53,680 ಸರ್ಕಾರಿ, ಅನುದಾನಿತ ಶಾಲೆಗಳಲ್ಲಿ ಪರೀಕ್ಷೆ ನಡೆಯುತ್ತಿದೆ. ಖಾಸಗಿ ಶಾಲೆಗಳಷ್ಟೇ ಪಬ್ಲಿಕ್ ಪರೀಕ್ಷೆಗೆ ತಕರಾರು ಎತ್ತಿವೆ. ಸ್ವಹಿತಾಸಕ್ತಿಗಾಗಿ ಖಾಸಗಿ ಶಾಲೆಗಳು ರಿಟ್ ಸಲ್ಲಿಸಿವೆ. ಪೋಷಕರಾಗಲೀ, ಮಕ್ಕಳಾಗಲೀ ಬೋರ್ಡ್ ಪರೀಕ್ಷೆಗೆ ಆಕ್ಷೇಪಿಸಿಲ್ಲ. ಬೋರ್ಡ್ ಪರೀಕ್ಷೆಯಿಂದ ಖಾಸಗಿ ಶಾಲೆಗಳ ಮೌಲ್ಯಮಾಪನವಾಗಲಿದೆ ಎಂದು ತಿಳಿಸಿತ್ತು. ಸರ್ಕಾರದ ಪರವಾಗಿ ಹೆಚ್ಚುವರಿ ಅಡ್ವೋಕೇಟ್ ಜನರಲ್ ವಿಕ್ರಮ್ ಹುಯಿಲ ಗೋಳ್ ವಾದಿಸಿದರು. ಸರ್ಕಾರದ ಮನವಿಗೆ ಖಾಸಗಿ ಶಾಲೆಗಳ ಸಂಘವೂ ಆಕ್ಷೇಪ ವ್ಯಕ್ತಪಡಿಸಿತು. ಅಂತಿಮವಾಗಿ ಕೋರ್ಟ್ ಪಬ್ಲಿಕ್ ಪರೀಕ್ಷೆಗೆ ಅವಕಾಶ ಮಾಡಿಕೊಟ್ಟಿದೆ.

ವಿವಾದವೇನು?: ಬಿಜೆಪಿ ಸರ್ಕಾರದಲ್ಲಿ ಶಿಕ್ಷಣ ಸಚಿವರಾಗಿದ್ದ ಬಿ.ಸಿ.ನಾಗೇಶ್ 5ನೇ ತರಗತಿ ಮತ್ತು 8ನೇ ತರಗತಿ ವಿದ್ಯಾರ್ಥಿಗಳಿಗೆ ಪಬ್ಲಿಕ್ ಮಾದರಿಯ ಮೌಲ್ಯಾಂಕನ ಪರೀಕ್ಷೆ ಜಾರಿಗೆ ತಂದಿದ್ದರು. ಕಾಂಗ್ರೆಸ್ ಸರ್ಕಾರ ಬಂದ ಮೇಲೆ 9ನೇ ತರಗತಿ ಮತ್ತು 11ನೇ ತರಗತಿ ವಿದ್ಯಾರ್ಥಿಗಳಿಗೂ ಪಬ್ಲಿಕ್ ಪರೀಕ್ಷೆ ನಡೆಸುವ ಚಿಂತನೆ ಮಾಡಲಾಗಿತ್ತು.

● 6ನೇ ಪುಟಕ್ಕೆ

ಮೂವರು ಯುವಕರು ಕಾವೇರಿ ಪಾಲು

ಓರ್ವನ ದೇಹ ಪತ್ತೆ, ಮತ್ತಿಬ್ಬರಿಗಾಗಿ ಹುಡುಕಾಟ



ಕುಶಾಲನಗರ, ಮಾ.7–ಕಾವೇರಿ ನದಿಗೆ ಸ್ನಾನಕ್ಕಿಳಿದ ಮೂವರು ಯುವಕರು ನೀರಿನಲ್ಲಿ ಮುಳುಗಿ ಮೃತಪಟ್ಟ ಘಟನೆ ಹಳೇ ಕೂಡಿಗೆ ಬಳಿ ಗುರುವಾರ ನಡೆದಿದೆ. ಚಿಕ್ಕತ್ತೂರು ಗ್ರಾಮದ ಶ್ರೀನಿವಾಸ್ ಅಲಿಯಾಸ್ ಅಪ್ಪು(23), ಕಣಿವೆಯ ಹಕ್ಕೆ ಸಚಿನ್(22) ಹಾಗೂ ಮುಳ್ಳುಸೋಗೆ ಗ್ರಾಮದ ಜನತಾ ಕಾಲೋನಿ ನಿವಾಸಿ ವಿನೋದ್ (23) ಮೃತರು. ಇಂದು ಮಧ್ಯಾಹ್ನ ಐವರು ಸ್ನೇಹಿತರು ಕೂಡಿಗೆಯ ಕಾವೇರಿ ನದಿ ಬಳಿ ಕಾರು ನಿಲ್ಲಿಸಿ ಸ್ನಾನಕ್ಕೆ ಇಳಿದಿದ್ದಾರೆ.



ಶ್ರೀನಿವಾಸ್

ಈ ವೇಳೆ ಒಬ್ಬ ಸುಳಿಗೆ ಸಿಲುಕಿ ಮುಳುಗಿದ್ದಾನೆ. ಆತನನ್ನು ರಕ್ಷಿಸಲು ತೆರಳಿದ ಮತ್ತೊಬ್ಬನು ಮುಳುಗಿದ್ದಾನೆ. ಇದನ್ನು ಕಂಡು ಇನ್ನೊಬ್ಬ ಸ್ನೇಹಿತ ಅವರನ್ನು ರಕ್ಷಿಸಲು ಮುಂದಾದಾಗ ಅವನೂ ಅವರ ದಾರಿ ಹಿಡಿದಿದ್ದಾನೆ. ಹೀಗೆ ಮೂವರು ನೀರಿನಲ್ಲಿ ಮುಳುಗಿದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ವಿಷಯ ತಿಳಿದ ಕುಶಾಲನಗರ ಅಗ್ನಿ ಶಾಮಕ ದಳದ ಸಿಬ್ಬಂದಿ ಮತ್ತು ಗ್ರಾಮಾಂತರ ಠಾಣೆ ಪೊಲೀಸರು ಸ್ಥಳಕ್ಕೆ ತೆರಳಿ ಶೋಧ ಕಾರ್ಯ ನಡೆಸಿದರು. ಈ ವೇಳೆ ಶ್ರೀನಿವಾಸ್ ದೇಹ ಪತ್ತೆಯಾಗಿದೆ. ಉಳಿದಿಬ್ಬರ ದೇಹಕ್ಕೆ ಶೋಧ ನಡೆದಿದೆ.

ಮುಡಾಗೆ 6.3 ಕೋಟಿ ಉಳಿತಾಯ ಬಜೆಟ್



ಮುಡಾ ಅಧ್ಯಕ್ಷ ಕೆ. ಮರಿಗೌಡರ ಅಧ್ಯಕ್ಷತೆಯ ಸಭೆಯಲ್ಲಿ ಗುರುವಾರ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಆಯವ್ಯಯ ಮಂಡಿಸಿದರು. ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಮಾ.7(ಆರ್‌ಕೆ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ 2024–25ನೇ ಸಾಲಿಗೆ 6.3 ಕೋಟಿ ರೂ. ಉಳಿತಾಯ ಬಜೆಟ್ ಮಂಡನೆ ಮಾಡಲಾಗಿದೆ. ಮುಡಾ ಕಚೇರಿ ಸಭಾಂಗಣದಲ್ಲಿ ಪ್ರಾಧಿಕಾರದ ನೂತನ ಅಧ್ಯಕ್ಷ ಕೆ.ಮರೀಗೌಡರ ಅಧ್ಯಕ್ಷತೆಯ ಮೊದಲ ಸಭೆಯಲ್ಲಿ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಪ್ರಸಕ್ತ ಸಾಲಿನ ಆಯವ್ಯಯವನ್ನು ಮಂಡಿಸಿದರು. ವಿವಿಧ ಮೂಲಗಳಿಂದ 83,180.06 ಲಕ್ಷ ರೂ. ಸಂಪನ್ಮೂಲ ಕ್ರೋಢೀಕರಿಸಲು ಉದ್ದೇಶಿಸಲಾಗಿದ್ದು, ಪ್ರಾಧಿಕಾರದಿಂದ ಮೈಸೂರು ನಗರದ ಅಭಿವೃದ್ಧಿ ಯೋಜನೆಗಳಿಗೆ 82,577 ಲಕ್ಷ ರೂ. ಖರ್ಚು ಮಾಡಲು ನಿರ್ಧರಿಸಿರುವುದರಿಂದ ಪ್ರಸಕ್ತ ಸಾಲಿಗೆ 603.06 ಲಕ್ಷ ರೂ. ಹೆಚ್ಚುವರಿ ಉಳಿತಾಯ ಬಜೆಟ್ ಮಂಡಿಸಲಾಗಿದೆ.

ಆದಾಯದ ಮೂಲ: ಮನೆ ಮತ್ತು ನಿವೇಶನಗಳ ಕಂದಾಯದಿಂದ 200 ಕೋಟಿ ರೂ., ಖಾತೆ ವರ್ಗಾವಣೆಯಿಂದ 150 ಕೋಟಿ ರೂ.,

● 6ನೇ ಪುಟಕ್ಕೆ

ಮುಡಾ ಕಾರ್ಯವೈಖರಿಗೆ ಸದಸ್ಯರ ತೀವ್ರ ಆಕ್ಷೇಪ

ಕಳೆದ ಬಜೆಟ್ ಪ್ರಸ್ತಾಪಗಳೇ ಜಾರಿಯಾಗಿಲ್ಲ; ಇನ್ನು ಈ ಬಜೆಟ್ ಊರ್ಜಿತವೇ...?

ಮೈಸೂರು:ಇಂದು ಮಂಡಿಸಲಾದ ಮುಡಾ ಆಯ–ವ್ಯಯ ಮಾತ್ರವಲ್ಲ ಕಾರ್ಯವೈಖರಿಗೂ ಪ್ರಾಧಿಕಾರದ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬಹಿಷ್ಕಾರ ಹಾಕುತ್ತಿದ್ದೆವು: ಇಂದಿನ ನೀರಸ ಹಾಗೂ ನಿರಾಶಾದಾಯಕ ಬಜೆಟ್ ಸಭೆಗೆ ಬಹಿಷ್ಕಾರ ಹಾಕುತ್ತಿದ್ದೆವು. ನೀವು ಈಗ ತಾನೇ ಪ್ರಾಧಿಕಾರದ ಅಧ್ಯಕ್ಷರಾಗಿದ್ದೀರೆಂಬ ಕಾರಣಕ್ಕೆ ನಾವು ಸಭೆಯಲ್ಲಿ ಕುಳಿತಿದ್ದೇವೆ ಎಂದು ಶಾಸಕ ಜಿ.ಟಿ.ದೇವೇಗೌಡರು ಕೆ.ಮರೀಗೌಡರಿಗೆ ತಿಳಿಸಿದರು.

ಕಳೆದ ಬಾರಿ ಮಂಡಿಸಿದ ಬಜೆಟ್‌ನ ಯಾವುದೇ ಯೋಜನೆ ಅನುಷ್ಠಾನವಾಗಲಿಲ್ಲ. ಪ್ರಾಧಿಕಾರ ಹಾಗೂ ಖಾಸಗಿ ಬಡಾವಣೆಗಳಿಗೆ ರಸ್ತೆ, ನೀರು, ಚರಂಡಿ, ವಿದ್ಯುತ್ ಸೌಲಭ್ಯ ಕಲ್ಪಿಸದೇ

● 6ನೇ ಪುಟಕ್ಕೆ

ಮುಡಾ ಮುಚ್ಚಿ ಬಿಡಿ...!

ಬಜೆಟ್ ಮೇಲಿನ ಚರ್ಚೆ ವೇಳೆ ಕಾಂಗ್ರೆಸ್ ಹಿರಿಯ ಶಾಸಕ ತನ್ವೀರ್ ಸೇಠ್ ಪ್ರತಿಕ್ರಿಯೆ

ಮೈಸೂರು, ಮಾ.7(ಆರ್‌ಕೆ)–ಮೂಲ ಉದ್ದೇಶ ಮರೆತು ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಾಗದಿರುವುದರಿಂದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವನ್ನು ಮುಚ್ಚುವುದು ಒಳ್ಳೆಯದು ಎಂದು ಮೈಸೂರಿನ ಹಿರಿಯ ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್ ಅವರು ಅಭಿಪ್ರಾಯಪಟ್ಟಿದ್ದಾರೆ. ಮುಡಾ ಕಚೇರಿಯಲ್ಲಿ ಇಂದು ಮಂಡನೆ ಮಾಡಿದ ಪ್ರಸಕ್ತ ಸಾಲಿನ ಬಜೆಟ್ ಮೇಲಿನ ಚರ್ಚೆ ಸಂದರ್ಭ 'ಮೈಸೂರು ಮಿತ್ರ'ನ ಸೋದರ ಪತ್ರಿಕೆ 'ಸ್ಟಾರ್ ಆಫ್ ಮೈಸೂರ್'ನಲ್ಲಿ

● 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಮನೆಯಾಕೆ : (ಹಾಲಿನವನೊಡನೆ) ಏನಯ್ಯ ಇವತ್ತು ಹಾಲು ತುಂಬಾ ನೀರಾಗಿದೆ?

ಹಾಲಿನವ : ಏನಿಲ್ಲ ತಾಯಿ, ರಾತ್ರಿ ಮಳೆಯಲ್ಲಿ ನಮ್ಮ ಹಸು ಚೆನ್ನಾಗಿ ನೆನೆದಿತ್ತು!

ಮೈಸೂರು ಮಿತ್ರ

ಶುಕ್ರವಾರ, 8 ಮಾರ್ಚ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಏನನ್ನೂ ನೀಡಲಾಗದಿದ್ದರೂ ಒಳ್ಳೆಯ ಮಾತುಗಳಿಂದಾದರೂ ಸತ್ಕರಿಸು. – ಹಿತೋಪದೇಶ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತಪ್ಪು ಮಾಡದವರಿಲ್ಲ, ತುಪ್ಪ ಉಣದವರಿಲ್ಲ

ನಿಮ್ಮ ಪತ್ರಗಳು

■ ಶ್ರೀ ರಾಘವೇಂದ್ರಸ್ವಾಮಿ ಮಠದ ರಸ್ತೆಗೆ ರಸ್ತೆ ವಿಭಜಕಗಳನ್ನು ಅಳವಡಿಸಿ

ಮಾನ್ಯರೆ,



ಮೈಸೂರಿನ ಚಾಮರಾಜ ಕ್ಷೇತ್ರದ ಹಾಲಿ ಶಾಸಕರು ಹಾಗೂ ಡಿಸಿಪಿ (ಟ್ರಾಫಿಕ್) ಅವರ ಗಮನಕ್ಕೆ ತರುತ್ತಿರುವ ಟ್ರಾಫಿಕ್ ಸಮಸ್ಯೆ ಎಂದರೆ, ಮೈಸೂರು ಹೃದಯಭಾಗದ ನಾರಾಯಣಶಾಸ್ತ್ರಿ ರಸ್ತೆಯಲ್ಲಿ ಶಾಂತಲಾ ಟ್ರಾಫಿಕ್ ಸಿಗ್ನಲ್‌ನಿಂದ ಹಿಡಿದು ಸದ್ವಿದ್ಯಾ ಶಾಲೆ ಸರ್ಕಲ್‌ವರೆಗೆ ಬೆಳಗ್ಗೆಯಿಂದ ರಾತ್ರಿವರೆಗೂ ಸಿಕ್ಕಾಪಟ್ಟೆ ವಾಹನಗಳ ದ್ವಿಮುಖ ಸಂಚಾರವಿದೆ. ರಸ್ತೆ ವಿಭಜಕಗಳು ಇಲ್ಲಾ. ಈ ರಸ್ತೆ ಹತ್ತಿರವೇ ಬಹಳ ಶಾಲಾ ಕಾಲೇಜುಗಳಿದ್ದು, ಬಹಳ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ನಡೆದುಕೊಂಡು ಓಡಾಡುತ್ತಾರೆ. ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ದೇವಸ್ಥಾನ ಕೂಡ ಈ ರಸ್ತೆಯಲ್ಲೇ ಇದೆ. ಗುರುವಾರ ಮತ್ತು ಹಬ್ಬದ ದಿನಗಳಂದು ಸಾವಿರಾರು ಭಕ್ತರು ಈ ಮಠಕ್ಕೆ ಬರುತ್ತಾರೆ. ಸುತ್ತಮುತ್ತ ವಾಸ ಮಾಡೋ ನಿವಾಸಿಗಳು, ವಯೋವೃದ್ಧರು, ಮಕ್ಕಳಿಗೆ ಈ ದೇವಸ್ಥಾನದ ಎದುರು ರಸ್ತೆ ದಾಟುವುದೇ ಕಷ್ಟವಾದ, ಅಪಾಯಕಾರಿ ವಿಷಯವಾಗಿದೆ. ಕಾರಣ ರಸ್ತೆ ವಿಭಜಕಗಳು ಇಲ್ಲದೇ ಇರೋದು. ಮೂರು ವಾರಗಳ ಹಿಂದೆ ರಾಘವೇಂದ್ರ ಸ್ವಾಮಿಗಳ ಮಠದ ಎದುರು ಭಾಗದಲ್ಲಿ ಹತ್ತಿರದಲ್ಲೇ ವಾಸ ಮಾಡುತ್ತಿದ್ದ 80 ವರ್ಷದ ವೃದ್ಧರಿಗೆ ರಸ್ತೆ ದಾಟುತ್ತಿದ್ದಾಗ ವೇಗವಾಗಿ ಬಂದ ಆಟೋ ಡಿಕ್ಕಿ ಹೊಡೆದು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ತಾವು ಈ ಭಾಗದ ರಸ್ತೆಯಲ್ಲಿ ಸಿಕ್ಕಾಪಟ್ಟೆ Two Way Traffic ಇರೋದನ್ನು ಫೋಟೋಗಳಲ್ಲಿ ಕಾಣಬಹುದು. ಆದ್ದರಿಂದ ವಯೋವೃದ್ಧರು ಹಾಗೂ ಸಾವಿರಾರು ಶಾಲಾ ಕಾಲೇಜು ವಿದ್ಯಾರ್ಥಿಗಳ ಸುರಕ್ಷತೆ ದೃಷ್ಟಿಯಿಂದ ಶಾಂತಲಾ ಟ್ರಾಫಿಕ್ ಸಿಗ್ನಲ್ ಪಾಯಿಂಟ್‌ನಿಂದ ಸದ್ವಿದ್ಯಾ ಶಾಲೆ ಸರ್ಕಲ್ ತನಕ ರಸ್ತೆ ವಿಭಜಕಗಳನ್ನು ಅಳವಡಿಸಬೇಕೆಂದು ಈ ಮೂಲಕ ಮನವಿ.

– ಎಂ.ಎಸ್‌ಎಸ್. ಶರ್ಮ, ಸಾಮಾಜಿಕ ಕಾರ್ಯಕರ್ತ, ಮೈಸೂರು.

■ ಮತದಾರರ ದಾರಿ ತಪ್ಪಿಸುತ್ತಿರುವ ಸಮೀಕ್ಷೆಗಳು

ಮಾನ್ಯರೆ,

ನಿನ್ನೆ (ಮಾ.5) ಖಾಸಗಿ ಟಿವಿ ಚಾನೆಲ್‌ವೊಂದು, ಮುಂಬರುವ ಲೋಕಸಭಾ ಚುನಾವಣಾ ಫಲಿತಾಂಶದ ಸಮೀಕ್ಷೆಗಳನ್ನು ಪ್ರಸಾರ ಮಾಡಿತು. ಅದರಂತೆ ಕರ್ನಾಟಕದಲ್ಲಿ ಕಾಂಗ್ರೆಸ್ 4 ರಿಂದ 5 ಸ್ಥಾನಗಳನ್ನು, ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಕೂಟ 20 ರಿಂದ 24 ಸ್ಥಾನಗಳನ್ನು ಗಳಿಸುತ್ತದೆ ಎಂದು ಪ್ರಸಾರ ಮಾಡಿತು.

ಲೋಕಸಭಾ ಚುನಾವಣೆ ನಡೆದು, ಫಲಿತಾಂಶ ಹೊರಬೀಳಲು ಕನಿಷ್ಠ ಇನ್ನೂ ಎರಡು ತಿಂಗಳಾದರೂ ಬೇಕು. ಈಗಾಗಲೇ ಚುನಾವಣಾ ಫಲಿತಾಂಶದ ಸಮೀಕ್ಷೆಗಳನ್ನು ಹೇಳುತ್ತಿರುವುದು ಒಂದು ರೀತಿಯಲ್ಲಿ ಮತದಾರರನ್ನು ದಾರಿ ತಪ್ಪಿಸುವ ಕೆಲಸ ಮಾಡುವಂತಿದೆ. ಇವು ಒಂದು ರೀತಿಯಲ್ಲಿ ಮತದಾರರಿಗೆ ತಮಾಷೆಯಾಗಿಯೂ ಕಾಣುತ್ತಿವೆ. ಏಕೆಂದರೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪೂರ್ವ ಸಮೀಕ್ಷೆಗಳ ಪ್ರಕಾರ ಕಾಂಗ್ರೆಸ್ 80 ಸ್ಥಾನಕ್ಕಿಂತ ಹೆಚ್ಚು ಗೆಲ್ಲಲು ಸಾಧ್ಯವಿಲ್ಲ. ಈ ಬಾರಿಯು ಸಮ್ಮಿಶ್ರ ಸರ್ಕಾರವೇ ಗ್ಯಾರಂಟಿ ಎಂದು ಹೇಳುತ್ತಿದ್ದವು. ಕಡೆಗೆ ಅಂತಿಮ ಫಲಿತಾಂಶ ಹೊರ ಬಂದಾಗ ಏನಾಯಿತು ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಚುನಾವಣಾ ಆಯೋಗ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲವೇ?

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖಿ

ಸರ್ವವೂ ಶಿವಮಯ...

ಇಂದು ಮಹಾ ಶಿವರಾತ್ರಿ





"ಶಿವನೆ ನಿನ್ನ ನೆನೆಯಲೆನ್ನ ಜನ್ಮ ಪಾವನ" ಸ್ಮರಿಸುತ್ತಾ "ಜಗದೊಳು ಎಲ್ಲಾ ಶಿವಮಯವು" ಎಂದು ಜಪಿಸುತ್ತಾ "ಶರಣು ಶಂಕರ ಶಂಭೋ, ಓಂಕಾರನಾದರೂಪ ಮೊರೆಯ ಕೇಳಿ ಪೊರೆಯೋ ಪರಮೇಶ್ವರ" ಎಂದು ಪ್ರಾರ್ಥಿಸುತ್ತಾ ಶಿವಪೂಜೆ ಮಾಡುವ ಮಂದಿ ಶಿವಧ್ಯಾನಾಮೃತದಲ್ಲಿ ಮುಳುಗಿ ಹೋಗುವುದು ಮಹಾಶಿವರಾತ್ರಿಯ ವೈಶಿಷ್ಟ್ಯ.

ನಾವು ಭಾರತೀಯರು. ಇಡೀ ವರ್ಷ ಒಂದಲ್ಲ ಒಂದು ಹಬ್ಬ ಆಚರಿಸುವ ಸಂಭ್ರಮಿಸುವ ಸಂಸ್ಕೃತಿ ನಮ್ಮದು. ನಾವು ಭಾರತೀಯರೇ ಹಾಗೆ ಹಬ್ಬಗಳೆಂದರೆ ಅಬ್ಬಬ್ಬಾ ಎನ್ನುವಷ್ಟು ಖುಷಿಪಡುವವರು. ಅದಕ್ಕೆ ತಕ್ಕ ಹಾಗೆ ನಮ್ಮಲ್ಲಿ ಸಾಲು ಸಾಲು ಹಬ್ಬಗಳುಂಟು. ಅದರಲ್ಲೂ ಹಿಂದು ಧರ್ಮೀಯರಿಗೆ ಹಬ್ಬಗಳು ತುಸು ಹೆಚ್ಚೇ ಎನ್ನಬಹುದು. ಅವುಗಳಲ್ಲಿ ಶಾಲಿವಾಹನ ಶಕೆ ಮಾಘ ಮಾಸ ಅಥವಾ ವಿಕ್ರಮ ಸಂವತ್ಸರದ ಫಾಲ್ಗುಣ ಮಾಸದ ಕೃಷ್ಣಪಕ್ಷ ಚತುರ್ದಶಿ ದಿನದಂದು ಬರುವ ಶಿವನ ಆರಾಧನೆಯ ಮಹಾಶಿವರಾತ್ರಿ ಅತ್ಯಂತ ವಿಶೇಷವಾದ ಹಬ್ಬವಾಗಿದೆ. ಅಂದು ಶಿವಭಕ್ತರ ಸಂಭ್ರಮಕ್ಕೆಣೆಯೇ ಇಲ್ಲ.

**"ಮಾಘ ಕೃಷ್ಣ ಚತುರ್ದಶ್ಯಾಂ
ಆದಿದೇವೋ ಮಹಾನಿಶಿ
ಶಿವಲಿಗತಯೋದ್ಭೂತಃ
ಕೋಟಿಸೂರ್ಯ ಸಮಪ್ರಭಃ॥
ತತ್ಕಾಲ ವ್ಯಾಪಿನೀಗ್ರಾಹ್ಯಾ
ಶಿವರಾತ್ರಿವ್ರತೇತಿಥೀಃ"**

"ಶಿವ ಶಿವ ಎಂದರೆ ಭಯವಿಲ್ಲ ಶಿವನಾಮಕೆ ಸಾಟಿ ಬೇರಿಲ್ಲ" ಎಂದು ಹಾಡುತ್ತಾ, "ಶಿವನೆ ನಿನ್ನ ನೆನೆಯಲೆನ್ನ ಜನ್ಮ ಪಾವನ' ಸ್ಮರಿಸುತ್ತಾ "ಜಗದೊಳು ಎಲ್ಲಾ ಶಿವಮಯವು" ಎಂದು ಜಪಿಸುತ್ತಾ 'ಶರಣು ಶಂಕರ ಶಂಭೋ, ಓಂಕಾರನಾದರೂಪ ಮೊರೆಯ ಕೇಳಿ ಪೊರೆಯೋ ಪರಮೇಶ್ವರ" ಎಂದು ಪ್ರಾರ್ಥಿಸುತ್ತಾ ಶಿವಪೂಜೆ ಮಾಡುವ ಮಂದಿ ಶಿವಧ್ಯಾನಾಮೃತದಲ್ಲಿ ಮುಳುಗಿ ಹೋಗುವುದು ಮಹಾಶಿವರಾತ್ರಿಯ ವೈಶಿಷ್ಟ್ಯ. ಜಗತ್ತಿನ ಎಲ್ಲಾ ಶಿವಾಲಯಗಳೂ ಅಂದು ಜಗಮಗಿಸುತ್ತವೆ.

ಮಹಾಶಿವರಾತ್ರಿಗೆ ಸಂಬಂಧಿಸಿದಂತೆ ಬಹಳಷ್ಟು ಪುರಾಣ ಕಥೆಗಳುಂಟು. ಒಂದು ಕಥೆಯ ಪ್ರಕಾರ ಶಿವ–ಪಾರ್ವತಿಯರು ವಿವಾಹವಾದ ಶುಭದಿನವೇ ಮಹಾಶಿವರಾತ್ರಿ. ಮತ್ತೊಂದು ಕಥೆಯ ಪ್ರಕಾರ ಶಿವನು ತಾಂಡವ ನೃತ್ಯ ಮಾಡಿದ ದಿನವೇ ಮಹಾಶಿವರಾತ್ರಿ. ಇನ್ನೊಂದು ಕಥೆಯ ಪ್ರಕಾರ ಪ್ರಳಯದಿಂದ ಇಡೀ ಪ್ರಪಂಚವೇ ನಾಶವಾಗುತ್ತಿದ್ದಾಗ ಪಾರ್ವತಿಯು ಅಂತರಿಕ್ಷದಲ್ಲಿ ಜೀವಕಣಗಳನ್ನು ಉಳಿಸುವುದಕ್ಕಾಗಿ ಶಿವನಲ್ಲಿ ಮೊರೆ ಹೊಕ್ಕು ಅಹೋರಾತ್ರಿ ಪ್ರಾರ್ಥಿಸಿದಳಂತೆ, ಹೀಗೆ ಪಾರ್ವತಿಯು ಶಿವನಲ್ಲಿ ಪ್ರಾರ್ಥಿಸಿದ ಆ ರಾತ್ರಿಯೇ ಮಹಾಶಿವರಾತ್ರಿ. ಇದು ಶಿವನಿಗೆ ಅತ್ಯಂತ ಪ್ರೀತಿ ಪಾತ್ರವಾದ ದಿನವಂತೆ. ಮಗದೊಂದು ಕಥೆಯ ಪ್ರಕಾರ ಶಿವನು ತ್ರಿಲೋಕ ಸಂಚಾರಿ ಮತ್ತು ಬ್ರಹ್ಮಸ್ವರೂಪಿ ಎಂದು ಜಗತ್ತಿಗೆ ತೋರಿಸಲು ಪ್ರಪ್ರಥಮವಾಗಿ ಭೂಮಿಯಿಂದ ಆಕಾಶದೆತ್ತರಕೆ ಲಿಂಗರೂಪದಲ್ಲಿ ಜ್ಯೋತಿಯಾಗಿ ನಿಂತಂತಹ ಮಹಾದಿನವೇ ಮಹಾಶಿವರಾತ್ರಿ. ಹಾಗೆಯೇ ಆದಿ ಶಿವನಾದ ಪರಶಿವನು ವಿಷ್ಣು–ಬ್ರಹ್ಮರಿಗೆ ಭಗವತ್ಜ್ಯೋಧನೆ ಮಾಡಿದ ಮಹಾದಿನವೇ ಮಹಾಶಿವರಾತ್ರಿ. ಹೀಗೆ ಮಹಾಶಿವರಾತ್ರಿ ಕುರಿತು ಅನೇಕ ಕಥೆಗಳಿದ್ದರೂ ಆಚರಣೆ ಮಾತ್ರ ಒಂದೇ. ಮಹಾಶಿವರಾತ್ರಿಯದು ಐದು ವಿಧ. ಒಂದು ನಿತ್ಯ ಶಿವರಾತ್ರಿ, ಎರಡು ಪಕ್ಷ ಶಿವರಾತ್ರಿ, ಮೂರು ಮಾಸ ಶಿವರಾತ್ರಿ, ನಾಲ್ಕು ಯೋಗ ಶಿವರಾತ್ರಿ, ಐದು ಮಹಾ ಶಿವರಾತ್ರಿ. ಇಡೀ ದಿನ ಉಪವಾಸವಿದ್ದು ಇಡೀ ರಾತ್ರಿ ಜಾಗರಣೆ ಮಾಡಿ ಶಿವಪೂಜೆ ಮಾಡುವ ಮಹಾ ಶಿವರಾತ್ರಿ ಹಬ್ಬದ ಪರಿಯೇ ಒಂದು ಅದ್ಭುತ. ವಾಸ್ತವವಾಗಿ ಶಿವನ ಪರಿಕಲ್ಪನೆಯೇ ಒಂದು ಮಹಾ ವಿಸ್ಮಯ! ಮಹಾಶಿವರಾತ್ರಿ ಪೂಜೆಗೆ ಮಂಟಪ ನಿರ್ಮಿಸಬೇಕಿಲ್ಲ. ಅದ್ದೂರಿ ಮೆರ ವಣಿಗೆಯೂ ಆಗಬೇಕಿಲ್ಲ. ಒಂದು ತಂಬಿಗೆ ಶುದ್ಧ ವಾದ ನೀರು, ಒಂದಷ್ಟು ಬಿಲ್ವಪತ್ರೆ ಸಾಕು ಶಿವಪೂಜೆಗೆ. ಉಪವಾಸ ಮತ್ತು ಜಾಗರಣೆ ಇದ್ದರಾಯಿತು ಶಿವ ಸಂತೃಪ್ತ. ಇಲ್ಲಿ ಮೂರ್ತಿ ರೂಪದ ಶಿವನಿಗಿಂತ ಲಿಂಗ ರೂಪಿ ಶಿವನಿಗೇ ಹೆಚ್ಚು ಪ್ರಾಶಸ್ತ್ಯ. ಶಿವಲಿಂಗ ಎಂಬುದು ಅವ್ಯಕ್ತ ತತ್ವಗಳ ಸಂಕೇತ. ಸಾಕಾರದಿಂದ ನಿರಾಕಾರದತ್ತ ಸಾಗಲು ಸಾಧನವೇ ಈ ಶಿವಲಿಂಗ. ವಿಶ್ವವೆಲ್ಲವೂ ಒಂದೇ ಎಂದು ಜಗದಗಲ ಸಾರುವುದೇ ಲಿಂಗ ಮಾರ್ಗ. 'ಸರ್ವಂ ಶಿವಲಿಂಗಮಯಂ' ಇದನ್ನೇ ನಾವು ಬ್ರಹ್ಮಾಂಡವೆನ್ನುವುದು. ಶಿವಲಿಂಗದಲ್ಲಿ ಎರಡು ವಿಧ. ಒಂದು ಸ್ವಯಂ ಭೂಲಿಂಗ. ಮತ್ತೊಂದು ಮಾನವ ನಿರ್ಮಿತ ಲಿಂಗ. ಸ್ವಯಂ ಭೂಲಿಂಗ ಪ್ರಕೃತಿಯಲ್ಲಿ ಸಹಜವಾಗಿ ಕಾಣಿಸಿಕೊಳ್ಳುತ್ತದೆ. ಉದಾಹರಣೆಗೆ ಅಮರನಾಥ ಗುಹೆಯಲ್ಲಿರುವ ಹಿಮಲಿಂಗ. ಇನ್ನು ಮಾನವ ನಿರ್ಮಿತ ಬಗೆ ಬಗೆಯ ಶಿವಲಿಂಗಗಳು ಎಲ್ಲರಿಗೂ ತಿಳಿದದ್ದೇ. ತಮಿಳುನಾಡಿನ ಚಿದಂಬರದಲ್ಲಿ ಗಾಳಿಯ ರೂಪದಲ್ಲೂ ಶಿವಲಿಂಗವನ್ನು ಕಾಣಲಾಗುತ್ತದೆ. ಶಿವಲಿಂಗವನ್ನು ಪೂಜಿಸುವುದೆಂದರೆ ಸೃಷ್ಟಿಯನ್ನೇ ಪೂಜಿಸಿದಂತೆ! ಪ್ರಕೃತಿಯೇ ಪರಮೇಶ್ವರನಾಗಿರುವ ಇಂಥ ಅದಮ್ಯ ಚೇತನ ಶಿವನನ್ನು ಬಸವಣ್ಣನವರು ಇಷ್ಟ ಲಿಂಗ ರೂಪದಲ್ಲಿ ಕಾಣುವ ಬಗೆಯಿದು–

**"ಜಗದಗಲ, ಮುಗಿಲಗಲ, ಮಿಗೆಯಗಲ ನಿಮ್ಮಗಲ
ಪಾತಾಳದಿಂದಿತ್ತಣ ನಿಮ್ಮ ಸಿರಿಚರಣ
ಬ್ರಹ್ಮಾಂಡದಿಂದತ್ತಣ ನಿಮ್ಮ ಸಿರಿಮುಕುಟ
ಅಗಮ್ಯ, ಅಗೋಚರ, ಅಪ್ರಮಾಣ ಲಿಂಗವೇ
ನೀವೆನ್ನ ಕರಸ್ಥಲಕ್ಕೆ ಬಂದು ನೆಲಸಿಕುಲಕಾಡಿರಯ್ಯಾ–
ಕೂಡಲಸಂಗಮ"**

ಶಿವ ಮತ್ತು ಶಿವರಾತ್ರಿಯ ವಿಚಾರವಾಗಿ ಸಾಕಷ್ಟು ದಂತಕಥೆಗಳು, ಪುರಾಣ ಕಥೆಗಳು, ಜನಪದ ಕಥಾನಕಗಳಿದ್ದರೂ ಕೂಡ ಮೌಢ್ಯತೆಯನ್ನು ದೂರವಿರಿಸಿ, ಪುರಾಣದ ಹೊದಿಕೆಯನ್ನು ಬದಿಗೆ ಸರಿಸಿ, ದೈವತ್ವದ ಕಲ್ಪನೆಯಲ್ಲಷ್ಟೇ ಉಳಿದುಕೊಳ್ಳದೆ ಅದರಾಚೆಗೆ ಬಂದು ವೈಚಾರಿಕ ಪ್ರಜ್ಞೆಯಿಂದ ಮಹಾ ಶಿವನನ್ನು ಮತ್ತು ಮಹಾಶಿವರಾತ್ರಿಯನ್ನು ನೋಡಿದಲ್ಲಿ ಭಕ್ತಿಯ ಪರಾಕಾಷ್ಟೆಯ ಪರದೆಯೊಳಗೇ ಉಳಿದುಬಿಟ್ಟಿರುವ ಮಹಾ ಶಿವನ ಮಹಾ ವೈಚಾರಿಕ ಪ್ರಭೆಯ ವಾಸ್ತವಗಳ ಮಹಾ ದರ್ಶನವಾಗುತ್ತದೆ.

ಮಹಾಶಿವರಾತ್ರಿ ಮಹಾ ಯೋಗಿಗಳ ದಿನ. ಶಿವನೆಂದರೆ ಬ್ರಹ್ಮಾಂಡ ನಾಯಕ. ಪ್ರಕೃತಿಯ ಪ್ರತಿರೂಪಕ. ವಶೀ ಆದವನು ಯಾರೋ ಅವನೇ ಶಿವ ವಶೀ ಅಂದರೆ ತನ್ನೆಲ್ಲ ಇಂದ್ರಿಯಗಳನ್ನು ತನ್ನ ವಶದಲ್ಲಿಟ್ಟುಕೊಂಡಿರುವವನು. ಪ್ರತಿಯೊಬ್ಬರೊಳಗೂ ಶಿವನುಂಟು. ಶಿವ ಶಕ್ತಿಯುಂಟು ಶಿವಚೇತನವುಂಟು. ಇದೊಂದು ಅಗಾಧ ಚೇತನಶಕ್ತಿ. ಮನುಷ್ಯರೊಳಗೆ ಸುಪ್ತವಾಗಿ ಅಡಗಿರುವ ಇಂಥ ಮಹಾ ಚೇತನವನ್ನು ವರುಷಕ್ಕೊಮ್ಮೆ ಜಾಗೃತಿಗೊಳಿಸುವುದಕ್ಕಾಗಿ ತನ್ನೊಳಗಿರುವ ಪ್ರೌಢ ಪ್ರಜ್ಞೆಯನ್ನು ವರುಷಕ್ಕೊಮ್ಮೆಯಾದರೂ ಅನುಭವಿಸಬೇಕೆಂಬುದು ಮಹಾಶಿವರಾತ್ರಿಯ ಮಹದಾಶಯ. ಇಲ್ಲಿ ಶಿವಶಕ್ತಿ ಜಾಗೃತಿಯ ಜಾಗಟೆ ಆಗಿರುತ್ತದೆ. ಶಿವನೆಂಬುದು ನಮ್ಮೊಳಗಿನ ಅದಮ್ಯ ಚೇತನ. ಅನನ್ಯ ಚೈತನ್ಯ ಅದಕ್ಕೇನೆ ಶಿವನಿಲ್ಲದ ಸೌಂದರ್ಯವೇ ಷಣ್ಮುಖದ ಕಣ್ಣೋ....... ಎಂದರು ನಮ್ಮ ಮಹಾಕವಿ ಕುವೆಂಪು.

ಜಗತ್ತಿನಲ್ಲಿ ಹುಟ್ಟಿದವರೆಲ್ಲರೂ ಸಾಯಲೇಬೇಕು. ಉತ್ಪತ್ತಿ ಆದುದೆಲ್ಲವೂ ನಾಶವಾಗಲೇಬೇಕು. ಇದು ಪ್ರಕೃತಿ ನಿಯಮ. ಇದನ್ನುಂಟು ಮಾಡುವ ಕ್ರಿಯೆಯೇ ಲಯ. ಈ ಲಯಕಾರನೆ ಶಿವ. ತ್ರಿಮೂರ್ತಿಗಳಲ್ಲೊಬ್ಬನಾದ ಶಿವನ ಕೆಲಸ ವಿನಾಶ. ಇದನ್ನು ಧನಾತ್ಮಕವಾಗಿ ಯೋಚಿಸಿ ನೋಡಿದರೆ ಶಿವ ನಾಶ ಮಾಡುವುದು ನಾನು ಎಂಬ 'ಅಹಂ' ಮತ್ತು ನಮ್ಮವರೆಂಬ ಕ್ಷಣಿಕ 'ವ್ಯಾಮೋಹ'ಗಳನ್ನು ಎಂಬ ಸತ್ಯ ಗೋಚರಿಸುತ್ತದೆ. 'ಅಹಂ' ಎಂಬುದು ಅಜ್ಞಾನ ಜನ್ಯವಾದುದು. ನಟ ರಾಜನಾಗಿ ಶಿವ ತನ್ನ ತಾಂಡವ ನೃತ್ಯದಲ್ಲಿ ತುಳಿಯುವುದು ಇದೇ ಅಜ್ಞಾನವೆಂಬ ಅಸುರನನ್ನು. ವಿನಾಶವೆಂದರೆ ಒಂದರ ಅಂತ್ಯದೊಡನೆ ಮತ್ತೊಂದರ ಜನನವೆಂಬುದನ್ನು ನಾವು ಮರೆಯಬಾರದು. ಪ್ರತಿಯೊಂದಕ್ಕೂ ಅಂತ್ಯವೆಂಬುದಿದೆ. ಅದಾದಾಗಲೇ ಹೊಸ ಸೃಷ್ಟಿ ಸಾಧ್ಯವಾಗುವುದು. ಶಿವ ಪ್ರಕೃತಿಯ ಸಹಜ ಕ್ರಿಯೆ ಇದು. ಇದನ್ನರಿತೇ ಇರಬಹುದು ನಮ್ಮ ವರಕವಿ ಬೇಂದ್ರೆ ಅವರು ತಮ್ಮ ಶ್ರಾವಣದ ರುದ್ರರೂಪದಲ್ಲಿ "ಕುಣಿದಾವ ಗಾಳಿ ಭೈರವನ ರೂಪ ತಾಳಿ ...." ಎಂದು ಹಾಡಿರುವುದು. ಹಾಗೆಯೇ ಕವಿ ಸೇಡಿಯಾಪು ಕೃಷ್ಣಭಟ್ಟ ಅವರು ಶಿವನಿರುವ ಬಗೆಯನ್ನು ಹೇಳುವ ಪರಿಯಿದು –

**"ಈಶ್ವರನಿರುವನೋ? ಗೊತ್ತಿಲ್ಲ!
ನಶ್ವರ ಜಗವಿದು ಗೊತ್ತಲ್ಲ?
ಈಶ್ವರ ನಿಷ್ಠೆಯೆ ಭಯಹರವೆಂಬುದು;
ದಿನದಿನಕನುಭವವಹುದಲ್ಲಾ?
ಹಾಗಾದರೆ ಶಿವನಿರುವನಿರುವನಿದ;
ನಂಬುನಂಬು ಸಂಶಯ ಸಲ್ಲ ......"**

ಶಿವನಿಗೆ ಹತ್ತು ಸಾವಿರ ಹೆಸರುಗಳಿವೆ ಎಂಬುದು ವ್ಯಾಸೋಕ್ತಿ. ಆಶ್ಚರ್ಯಪಡುವಷ್ಟರ ಮಟ್ಟಿಗೆ ಈ ಎಲ್ಲಾ ಹೆಸರುಗಳೂ ಶಿವನಿಗೆ ಅನ್ವರ್ಥವಾಗಿದ್ದು ಒಂದೊಂದು ಹೆಸರನ್ನೂ ಪೌರಾಣಿಕದ ಪೊರೆ ಕಳಚಿ, ದೈವತ್ವದ ಕಲ್ಪನೆಗಳನ್ನು ಒತ್ತಟ್ಟಿಗಿಟ್ಟು ವೈಚಾರಿಕ ದೃಷ್ಟಿಯಿಂದ ಮಾತ್ರ ನೋಡಿದಾಗ ಶಿವನ ತಾಂತ್ರಿಕ, ಜೈವಿಕ, ವೈಜ್ಞಾನಿಕ, ವೈಚಾರಿಕ, ಶೈಕ್ಷಣಿಕ, ವೈದ್ಯಕೀಯದ ಅದ್ಭುತ ಲೋಕವೇ ನಮ್ಮ ಕಣ್ಮುಂದೆ ತೆರೆದುಕೊಳ್ಳುತ್ತದೆ.

ಶಿವನೊಬ್ಬ ವಿಜ್ಞಾನಿ, ಶಿವನೊಬ್ಬ ಸಂಶೋಧಕ, ಶಿವನೊಬ್ಬ ಇಂಜಿನಿಯರ್, ಶಿವನೊಬ್ಬ ವೈದ್ಯ, ಶಿವನೊಬ್ಬ ಕಲಾವಿದ, ಕೈಲಾಸ ಪರ್ವತದಲ್ಲಿ ವಾಸಿಸುವ ಶಿವನೊಬ್ಬ ನುರಿತ ಚಾರಣಿಗ, ಶಿವನೊಬ್ಬ ದಾರ್ಶನಿಕ, ಶಿವನೊಬ್ಬ ಶ್ರೇಷ್ಠ ಸಮಾಜ ಸುಧಾರಕ, ಶಿವನೊಬ್ಬ ತತ್ವಜ್ಞಾನಿ, ಶಿವನೊಬ್ಬ ಕಾಲಜ್ಞಾನಿ, ಶಿವನೊಬ್ಬ ಸಂಗೀತಗಾರ, ಶಿವನೊಬ್ಬ ಸಮಾನ ಸಮಾಜದ ಹರಿಕಾರ .... ಹೀಗೆ ಶಿವ ಎಲ್ಲವೂ ಹೌದು, ಶಿವನನ್ನು ಮತ್ತು ಶಿವನ ಸುತ್ತಲಿನ ಕಥೆಗಳನ್ನು ನಾವು ಪೌರಾಣಿಕವಾಗಿ, ದೈವಿಕವಾಗಿ ನೋಡದೆ ವೈಚಾರಿಕ ದೃಷ್ಟಿಯಿಂದ ನೋಡಿದಾಗ ಮಾತ್ರ ಶಿವನಲ್ಲಿ ಇವೆಲ್ಲವನ್ನೂ ನಾವು ಕಾಣಬಹುದು. ಇಷ್ಟೇ ಅಲ್ಲ, ಅರ್ಧಾಂಗಿಗಾಗಿ ತನ್ನ ದೇಹದ ಅರ್ಧ ಭಾಗವನ್ನು ತ್ಯಾಗ ಮಾಡಿ ಅರ್ಧ ನಾರೀಶ್ವರನಾದ ಶಿವ ನಿಜವಾದ ಸ್ತ್ರೀ ಸಮಾನತೆಯ ಪ್ರತಿಪಾದಕ. ಇದು ಸೃಷ್ಟಿ–ಲಯಗಳೆರಡರ ಮಹಾಸಂಗಮ. ಶಿವ ಲಯದ ಪ್ರತೀಕವಾದರೆ ಪಾರ್ವತಿ ಸೃಷ್ಟಿಯ ಪ್ರತೀಕ. ಶಿವತಾಂಡವ ಮತ್ತು ಪಾರ್ವತಿಯ ಲಾಸ್ಯಗಳ ಮಿಶ್ರಣವೇ ಸೃಷ್ಟಿ–ಲಯಗಳು.

ಶಿವನೊಬ್ಬ ಪರಿಣತ ನೃತ್ಯಪಟು. ಅಷ್ಟೇ ಅಲ್ಲ, ಸಕಲ ಕಲಾ ನಾಟ್ಯ ಪ್ರವೀಣ. ಶಿವನ ನಟರಾಜ ರೂಪವೇ ಇದಕ್ಕೆ ಪ್ರತ್ಯಕ್ಷ ಸಾಕ್ಷಿ. ಶಿವನ ನಟರಾಜ ರೂಪದ ನಾಟ್ಯ, ಜಾಗೃತಿ ಮತ್ತು ಕ್ರಿಯಾಶೀಲತೆ ಹಾಗೂ ಕಲಾಭಿವ್ಯಕ್ತಿಯ ಪ್ರತೀಕ.

**"ನೃತ್ಯವೋ ಬಹ್ಮನಟರಾಜನದು ಜಗವೆಲ್ಲ
ಪ್ರತ್ಯೇಕ ಜೀವದೆಶೆಯ ವನಂಗ ಭಂಗಿ
ಸತ್ಯ ಸತ್ತ್ವಜ್ವಾಲೆ, ವಿಶ್ವಮಾಯಾಲೀಲೆ
ಪ್ರತ್ಯಗಾತ್ಮನು ನೀನು ಮಂಕುತಿಮ್ಮ"**

ಶಿವ ನಟರಾಜನ ನಾಟ್ಯದ ಬಗ್ಗೆ ಹೀಗೆ ಹೇಳಿರುವ ದಾರ್ಶನಿಕ ಕವಿ ಡಿವಿಜಿಯವರ ನಾಲ್ಕು ಸಾಲಿನ ಈ ಮುಕ್ತಕದಲ್ಲೇ ಕಾಣಬಹುದು. ಶಿವಶಕ್ತಿಯ ಅದಮ್ಯ ಚೇತನವನ್ನು ನಮ್ಮೊಳಗಿರುವ ಅದ್ಭುತ ಚೇತನವೇ ಮಹಾಪ್ರಭೆಯೇ, ದಿವ್ಯ ಶಕ್ತಿಯೇ ಶಿವ. ವ್ಯಕ್ತಿತ್ವ ವಿಕಸನಗೊಳಿಸುವ ಶಿವ ಸ್ವರೂಪದಲ್ಲಿರುವ ಈ ಎಲ್ಲಾ ದಿವ್ಯ ಶಕ್ತಿಗಳೂ ಸದ್ವಿನಿಯೋಗವಾದಲ್ಲಿ ಅದೇ ನಿಜವಾದ ಶಿವಪೂಜೆ. ಅಷ್ಟೇ ಅಲ್ಲ ನಾವು ಆಚರಿಸಬಹುದಾದ ಮಹಾಶಿವರಾತ್ರಿ.

ಶಿವನ ಆರಾಧನಾ ಸ್ಥಳಗಳಲ್ಲಿ ಅತ್ಯಂತ ಪ್ರಸಿದ್ಧವಾದ ವಿಶ್ವವಿಖ್ಯಾತ ಶಿವಲಿಂಗ ಸ್ಥಳಗಳೆಂದರೆ ಮಹಿಮಾನ್ವಿತ ದ್ವಾದಶ ಜ್ಯೋತಿರ್ಲಿಂಗಗಳು, ಅವುಗಳೆಂದರೆ (1) ಸೌರಾಷ್ಟ್ರದ (ಗುಜರಾತ್) ಸೋಮನಾಥೇಶ್ವರ (2) ಶ್ರೀಶೈಲದ (ಆಂಧ್ರಪ್ರದೇಶ) ಮಲ್ಲಿಕಾರ್ಜುನ (3) ಉಜ್ಜಯಿನಿಯ (ಮಧ್ಯ ಪ್ರದೇಶ) ಮಹಾಕಾಲೇಶ್ವರ (4) ಓಂಕಾರದ (ಮಧ್ಯಪ್ರದೇಶ) ಮಮಲೇಶ್ವರ (5) ಪರಳಿಯ (ಬಿಹಾರ) ವೈದ್ಯನಾಥೇಶ್ವರ (6) ಡಾಕಿಣ್ಯದ (ರಾಜಮಹೇಂದ್ರಿ) ಭೀಮೇಶ್ವರ (7) ರಾಮೇಶ್ವರದ (ತಮಿಳುನಾಡು) ರಾಮೇಶ್ವರ (8) ಧರುವನದ (ಗುಜರಾತ್) ನಾಗೇಶ್ವರ (9) ವಾರಣಾಸಿಯ (ಕಾಶಿ) ವಿಶ್ವನಾಥ (10) ಗೌತಮಿ ತಟದ (ನಾಸಿಕ್) ತ್ರ್ಯಂಬಕೇಶ್ವರ (11) ಹಿಮಾಲಯದ ಕೇದಾರನಾಥ (12) ಔರಂಗಾಬಾದ್ ಬಳಿಯ ಗ್ರೀಷ್ಣೇಶ್ವರ ಮಹಾಶಿವರಾತ್ರಿಯಂದು ಈ ಮಹಿಮಾನ್ವಿತ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದನ್ನಾದರೂ ಸಂದರ್ಶಿಸಬೇಕೆಂಬುದು ಹಲವರ ನಂಬಿಕೆ.

ನಂಜನಗೂಡಿನ ನಂಜುಂಡೇಶ್ವರ, ಧರ್ಮಸ್ಥಳದ ಮಂಜುನಾಥೇಶ್ವರ, ಯಡಿಯೂರಿನ ಸಿದ್ದಲಿಂಗೇಶ್ವರ, ಕೋಲಾರದ ಕೋಟಿಲಿಂಗೇಶ್ವರ, ಶಿವಗಂಗೆಯ ಗವಿಗಂಗಾಧರೇಶ್ವರ, ಗೋಕರ್ಣದ ಮರುಡೇಶ್ವರ, ಮಲೆ ಮಹದೇಶ್ವರ ಬೆಟ್ಟದ ಮಹದೇಶ್ವರ, ಚುಂಚನಗಿರಿಯ ಕಾಲಭೈರವೇಶ್ವರ, ಕೃಷ್ಣರಾಜನಗರದ ಅರ್ಕೇಶ್ವರ, ತಿರುಮಕೂಡಲು ನರಸೀಪುರದ ಅಗಸ್ತ್ಯೇಶ್ವರ ತಲಕಾಡಿನ ಪಂಚಲಿಂಗೇಶ್ವರ, ಮುಂತಾದವು ಕರ್ನಾಟಕದ ಪ್ರಮುಖ ಶಿವಕ್ಷೇತ್ರಗಳು. ಶಿವರಾತ್ರಿ ಹಬ್ಬಕ್ಕೆ ಜಾಗರಣೆಯೇ ಹೆಗ್ಗುರುತು. ರಾತ್ರಿಯಿಡೀ ಶಿವನನ್ನು ಪೂಜಿಸುವ ಭಕ್ತರು ಭಜನೆ, ಭಕ್ತಿಗೀತೆ, ಕೀರ್ತನೆಗಳನ್ನು ಹಾಡಿ ಶಿವಭಕ್ತಿ ಮೆರೆಯುವುದು, ಭಾವಪರವಶರಾಗಿ ಭಕ್ತಿಯಲ್ಲಿ ತಲ್ಲೀನರಾಗುವುದು ಶಿವರಾತ್ರಿ ಆಚರಣೆಯ ವಿಶೇಷ. ಶಿವನೆಂದರೆ ಪ್ರಕೃತಿಯ ಪ್ರತಿ ರೂಪಕ. ಸರ್ವಂ ಶಿವಮಯಂ. ಮಹಾ ಶಿವರಾತ್ರಿಮಯಂ!

ಮಹಿಳಾ ದಿನಾಚರಣೆ ವಿಶೇಷ

ತೊಟ್ಟಿಲ ತೂಗುವ ಕೈ ದೇಶವ ಆಳಬಲ್ಲದು!

ಎ.ಪಿ.ಪ್ರಶಾಂತ್‌ಕುಮಾರ್
ಮೊ: 9844859950



"ಹೆಣ್ಣುಮಕ್ಕಳಿಗೆ ಪೋಷಕರು ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆಯವರೆಗೂ ಉತ್ತಮ ಶಿಕ್ಷಣ ನೀಡಲು ಹೆಚ್ಚಿನ ಒತ್ತು ಕೊಡಬೇಕು. ಮೂಢನಂಬಿಕೆಗಳನ್ನು ತೊರೆದು ಹೆಣ್ಣುಮಕ್ಕಳಿಗೆ ನಿರ್ಭೀತಿಯಿಂದ ಜೀವನ ಸಾಗಿಸಲು ಸಹಕಾರ ನೀಡಬೇಕು. ಪುರುಷರು ಮಾಡುವ ಎಲ್ಲಾ ಕೆಲಸಗಳ ಜೊತೆಗೆ, ಕೆಲವೊಮ್ಮೆ ಅವನಿಗೆ ಸಾಧ್ಯವಾಗದ ಕೆಲಸಗಳನ್ನು ಮಾಡಿ ಜಯಗಳಿಸಿ ತೋರಿಸುತ್ತಾಳೆ

'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ' ಈ ಪವಿತ್ರ ವಾಕ್ಯ ಮನುಸ್ಮೃತಿಯಲ್ಲಿದೆ. ಇದರರ್ಥ, ಎಲ್ಲಿ ಸ್ತ್ರೀಯರನ್ನು ಗೌರವಿಸುತ್ತಾರೋ ಅಲ್ಲಿ ದೇವಾನು ದೇವತೆಗಳು ನೆಲೆಸಿರುತ್ತಾರೆ.

ಯಾವ ದೇಶದಲ್ಲಿ ಪುರುಷರಿಗೆ ಹಾಗೂ ಸ್ತ್ರೀಯರಿಗೆ ಸಮಾನತೆ ಕುಡುಬರುವುದೋ, ಆ ದೇಶ ಎಲ್ಲಾ ಕ್ಷೇತ್ರಗಳಲ್ಲಿಯೂ ಉನ್ನತ ಪ್ರಗತಿಯೊಂದಿಗೆ ಅಭಿವೃದ್ಧಿಯ ಪಥದಲ್ಲಿ ಸಾಗುತ್ತದೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ, ಇಂದು ಮುಂದುವರೆದ ರಾಷ್ಟ್ರಗಳೆಂದು ಗುರುತಿಸಿಕೊಂಡಿರುವ ಅಮೇರಿಕಾ, ರಷ್ಯಾ, ಜಪಾನ್ ಮತ್ತು ಇಂಗ್ಲೆಂಡ್ ದೇಶಗಳಲ್ಲಿ, ಆ ದೇಶಕ್ಕೆ ಸಂಬಂಧಿಸಿದ ಪ್ರತಿಯೊಂದು ಇಲಾಖೆಗಳಲ್ಲಿ ಅಂದರೆ ಸೇನೆ, ಪೊಲೀಸ್, ಆಡಳಿತ, ಶಿಕ್ಷಣ, ವೈದ್ಯಕೀಯ, ವಿಜ್ಞಾನ ಮತ್ತು ತಂತ್ರಜ್ಞಾನ ಇನ್ನಿತರ ಇಲಾಖೆಗಳಲ್ಲಿ ಅಲ್ಲಿನ ಸ್ತ್ರೀಯರಿಗೆ ಪುರುಷರಷ್ಟೇ ಸಮಾನ ಅವಕಾಶ ನೀಡಿದ್ದಾರೆ. ಹಾಗಾಗಿಯೇ ಅಲ್ಲಿನ ಜನಗಳು ಎಲ್ಲಾ ಕ್ಷೇತ್ರಗಳಲ್ಲಿಯೂ ಮುಂದುವರೆದು ಆ ರಾಷ್ಟ್ರಗಳು ಶ್ರೀಮಂತ ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳೆಂದು ಗುರುತಿಸಿಕೊಂಡಿರುವುದು.

ಆದರೆ, ನಮ್ಮ ಸಮಾಜದಲ್ಲಿ ಪ್ರಾಚೀನ ಕಾಲದಿಂದಲೂ ಪುರುಷರಿಗೆ ಪ್ರಾಧಾನ್ಯತೆ ಇದೆ. ಇಂದಿಗೂ ಸಹ ಪುರುಷ ಪ್ರಧಾನ ವ್ಯವಸ್ಥೆ ಹಲವು ಕ್ಷೇತ್ರಗಳಲ್ಲಿ ಕಾಣಸಿಗುತ್ತಿದೆ. ಇದರಿಂದಾಗಿ, ಪ್ರಸ್ತುತ ಸನ್ನಿವೇಶದಲ್ಲಿ ಹೆಣ್ಣು ಹಲವಾರು ಹಕ್ಕುಗಳಿಂದ ವಂಚಿತಳಾಗಿದ್ದಾಳೆ. ಹೆಚ್ಚು ಕಡಿಮೆ ಗಂಡಿನ ಆಶ್ರಯದಲ್ಲೇ ಆಕೆ ಬಾಳಬೇಕಾದ ಪರಿಸ್ಥಿತಿಯಿದೆ.

ಭಾರತ ಹಳ್ಳಿಗಳ ದೇಶ ಎಂಬುದು ಎಲ್ಲರಿಗೂ ತಿಳಿದಿದೆ. ಇಂದಿಗೂ ನಮ್ಮ ದೇಶದ ಹಲವು ಹಳ್ಳಿಗಳಲ್ಲಿ, ಅಲ್ಲಿನ ಜನ ಇಂದಿಗೂ ಹೆಣ್ಣಿನಿಂದ ಏನು ಸಾಧ್ಯ ಎಂದು ಬೆರಳು ತೋರಿಸುತ್ತಾರೆ. ಕೆಲವೊಂದು ನಗರ ಪ್ರದೇಶಗಳಲ್ಲಿಯೂ ಇದು ಚಾಲ್ತಿಯಲ್ಲಿದೆ. ಇಂತಹ ಸಂದರ್ಭದಲ್ಲಿ, ಹೆಣ್ಣು ತಾನು ಕುಗ್ಗದೆ, ನಾಲ್ಕು ಗೋಡೆಗಳ ಮಧ್ಯೆ ಇದ್ದು ಮಕ್ಕಳನ್ನು ಹೆರುವ ಯಂತ್ರವಾಗದೆ, ತಾನು ಸಹ ತಾಯಿಯಾಗಿ, ತಂಗಿಯಾಗಿ, ಅಕ್ಕನಾಗಿ, ಮಡದಿಯಾಗಿ, ಸ್ನೇಹಿತೆಯಾಗಿ, ವಿದ್ಯಾವಂತಳಾಗಿ, ಧೈರ್ಯವಂತಳಾಗಿ, ಅಧಿಕಾರಿಯಾಗಿ ಹೆಣ್ಣಿನ ಬಗ್ಗೆ ಕೀಳರಿಮೆ ಹೊಂದಿರುವ ಜನರನ್ನು ತಿದ್ದಿ ಸರಿಪಡಿಸಿದಾಗ ಮಾತ್ರವೇ ಸ್ತ್ರೀಯರ ಉದ್ಧಾರ ಹಾಗೂ ದೇಶದ ಪ್ರಗತಿ ಸಾಧ್ಯ. ಏಕೆಂದರೆ, ಪುರುಷ ಮತ್ತು ಮಹಿಳೆ ಒಂದೇ ನಾಣ್ಯದ ಎರಡು ಮುಖಗಳು, ಅಭಿನಂದಿಸುವ ಚಪ್ಪಾಳೆ ಇದ್ದ ಹಾಗೆ. ಒಂದು ಉತ್ತಮ ಶಬ್ದದಿಂದ ಕೂಡಿದ ಚಪ್ಪಾಳೆಯಾಗಲು, ಹೆಣ್ಣು ಮತ್ತು ಗಂಡೆಂಬ ಎರಡು ಕೈಗಳು ಸೇರಬೇಕಲ್ಲವೆ?

ಪ್ರಸ್ತುತ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ಯುಗದಲ್ಲಿ ಮಹಿಳೆಯರ ಪಾತ್ರ ಅತ್ಯಂತ ಮಹತ್ತರವಾದುದು. ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಧಾರ್ಮಿಕ, ತಾಂತ್ರಿಕ, ಆರ್ಥಿಕ ಕ್ಷೇತ್ರಗಳು ಪ್ರಗತಿಯ ಪಥದಲ್ಲಿ ವೇಗವಾಗಿ ಅಭಿವೃದ್ಧಿ ಹೊಂದಿ ಗುರಿ ಮುಟ್ಟಲು ಈ ಪ್ರತಿಯೊಂದು ಕ್ಷೇತ್ರದಲ್ಲಿಯೂ ಸ್ತ್ರೀಯರಿಗೆ ಪುರುಷನಷ್ಟೇ ಸಮಾನವಾದ ಅವಕಾಶ ಹಾಗೂ ಪ್ರೋತ್ಸಾಹವನ್ನು ನೀಡಬೇಕಾಗಿದೆ. ಏಕೆಂದರೆ, ದೇಶದ ಪ್ರಗತಿಯೆಂಬ ರಥಕ್ಕೆ ಹೆಣ್ಣು ಮತ್ತು ಗಂಡು ಎರಡು ಗಾಲಿಗಳಿದ್ದಂತೆ. ಆ ಎರಡೂ ಗಾಲಿಗಳು ಸಮಾನವಾಗಿ ಚಲಿಸಿದರೆ ಮಾತ್ರ ಉತ್ತಮ ಪ್ರಗತಿ ಸಾಧ್ಯ. ಇಲ್ಲದಿದ್ದರೆ, ಅಭಿವೃದ್ಧಿ ಅಸಮತೋಲನವಾಗಿ ಗುರಿಯನ್ನು ತಲುಪಲು ಎಂದಿಗೂ ಅಸಾಧ್ಯ.

ನೆನಪಿರಲಿ, ಮಹಿಳೆಯರಿಗೆ ಸಮಾನತೆ ನೀಡಿದೆ ಎಂದು ಸಂವಿಧಾನದ ಪುಸ್ತಕಗಳಲ್ಲಿ ಲಿಖಿತ ರೂಪದಲ್ಲಿದ್ದರೆ ಮಾತ್ರ ಸಾಲದು. ಬದಲಾಗಿ, ಅದನ್ನು ಕಾರ್ಯರೂಪಕ್ಕೆ ತರಬೇಕಾದುದು ಪ್ರತಿಯೊಬ್ಬ ಜವಾಬ್ದಾರಿಯುತ ಮನುಷ್ಯನ, ನಮ್ಮನ್ನು ಆಳುವ ಸರ್ಕಾರಗಳ ಆದ್ಯ ಕರ್ತವ್ಯವಾಗಿದೆ. ಸ್ವಾಮಿ ವಿವೇಕಾನಂದರು ಸ್ತ್ರೀಯರ ಶಕ್ತಿಯ ಬಗ್ಗೆ ಪುರುಷರಿಗೆ ಹಾಗೂ ಸರ್ಕಾರಕ್ಕೆ ಬಹಳ ಹಿಂದೆಯೇ ಎಚ್ಚರಿಸಿದ್ದಾರೆ. ಸ್ತ್ರೀಯರಿಗೆ ಗೌರವವನ್ನು ತೋರಿದ ಜನಾಂಗಗಳೆಲ್ಲವೂ ಏಳಿಗೆ ಹೊಂದಿವೆ. ಯಾವ ದೇಶ ಸ್ತ್ರೀಯರನ್ನು ಗೌರವಿಸುವುದಿಲ್ಲವೋ, ಸಮಾನತೆ ನೀಡುವುದಿಲ್ಲವೋ ಆ ದೇಶ ಮುಂದೆ ಬಂದಿಲ್ಲ ಮತ್ತು ಎಂದಿಗೂ ಮುಂದೆ ಬರಲಾರದು. ಏಕೆಂದರೆ, ಪುರುಷ ದೇವರ ಒಂದು ಭಾಗವಾದರೆ, ಸ್ತ್ರೀ ಇನ್ನೊಂದು ಭಾಗ. ಸ್ತ್ರೀ ಇಲ್ಲದೆ ಪುರುಷ ಅಪೂರ್ಣ, ಪುರುಷನಿಲ್ಲದೆ ಸ್ತ್ರೀ ಅಪೂರ್ಣ. ಹಾಗಾಗಿಯೇ ಅಲ್ಲವೇ, ಪರಶಿವನು ತನ್ನ ದೇಹದ ಅರ್ಧ ಭಾಗವನ್ನು ತನ್ನ ಮಡದಿ ಪಾರ್ವತಿಗೆ ಮುಡಿಪಾಗಿಟ್ಟು ಅರ್ಧನಾರೀಶ್ವರನಾದದ್ದು.

ಪ್ರಸ್ತುತ ವರ್ಷ 2024ರಲ್ಲಿ ಪವಿತ್ರ ಭಕ್ತಿಪೂರ್ಣ ಮಹಾಶಿವರಾತ್ರಿ ಹಬ್ಬದ ದಿನದಂದೇ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಬಂದಿರುವುದು ಆಚರಣೆಯ ಸಂಭ್ರಮವನ್ನು ಮತ್ತಷ್ಟು ಇಮ್ಮಡಿಗೊಳಿಸಿದೆ.

ಹಾಗಾದರೆ, ಸ್ತ್ರೀಯರು ಇಂದು ಎದುರಿಸುತ್ತಿರುವ ದುಸ್ಥಿತಿಗಳಿಂದ ಪಾರು ಮಾಡಲು ಸಾಧ್ಯವಿಲ್ಲವೆ? ಖಂಡಿತ ಸಾಧ್ಯವಿದೆ. ಅದೇನೆಂದರೆ, ಸ್ತ್ರೀಯರಿಗೆ ಪುರುಷನಷ್ಟೇ ಶಿಕ್ಷಣ ಮತ್ತು ಸ್ವಾತಂತ್ರ್ಯ ಕೊಟ್ಟರೆ ಮಾತ್ರ. ಸಮಾಜವು ಮಹಿಳೆಯರಿಗೆ ಪುರುಷರಷ್ಟೆ ಸಮಾನವಾದ ಹಕ್ಕುಗಳನ್ನು ನೀಡಿದ್ದೇ ಆದಲ್ಲಿ, ಮಹಿಳೆಯರಲ್ಲಿ ಇರುವ ಅದಮ್ಯ ಮಾತೃ ಶಕ್ತಿ ಜಾಗೃತಗೊಳ್ಳುತ್ತದೆ ಹಾಗೂ ಪ್ರಕಾಶಿಸುತ್ತದೆ. ಆ ಅಭೂತಪೂರ್ವ ಬೆಳಕಿನಲ್ಲಿ ದೇಶದ ಪ್ರಗತಿ ಮತ್ತು ಅಭಿವೃದ್ಧಿ ಸಾಧ್ಯ. ಏಕೆಂದರೆ, ಸ್ಕಂದ ಪುರಾಣದಲ್ಲಿ ಒಂದು ಮಾತಿದೆ. ಒಬ್ಬ ಹೆಣ್ಣುಮಗಳು ಹತ್ತು ಗಂಡು ಮಕ್ಕಳಿಗೆ ಸಮ, ಹತ್ತು ಗಂಡು ಮಕ್ಕಳನ್ನು ಬೆಳೆಸಿದ ಪುಣ್ಯವು ಒಂದು ಹೆಣ್ಣು ಮಗುವನ್ನು ಲಾಲನೆ ಪಾಲನೆ ಮಾಡುವುದರಿಂದ ಸಿಗುತ್ತದೆ. ಸ್ತ್ರೀಯರು ಪ್ರೀತಿ, ಸಹನೆ, ತಾಳ್ಮೆ, ಸೇವೆ, ಧೈರ್ಯ, ತ್ಯಾಗ, ಪಾವಿತ್ರ್ಯತೆ ಹಾಗೂ ಪರಿಶುದ್ಧತೆಯ ಸಂಕೇತ. ಇಷ್ಟೆಲ್ಲಾ ಅಪರಿಮಿತ ಶಕ್ತಿಗಳ ಹೊಂದಿರುವ ಸ್ತ್ರೀಗೆ ಸಮಾನತೆ ದೊರೆತಿದ್ದೇ ಆದಲ್ಲಿ ಸುಂದರ ಹಾಗೂ ಸಮರ್ಥ ಭಾರತವು ರೂಪುಗೊಳ್ಳುವುದರಲ್ಲಿ ಎಳ್ಳಷ್ಟು ಅನುಮಾನವಿಲ್ಲ. ನೆನಪಿರಲಿ, ತೊಟ್ಟಿಲನ್ನು ತೂಗುವ ಕೈ, ದೇಶವನ್ನೇ ಆಳಬಲ್ಲದು. ಅದು ಈಗಾಗಲೇ ಪ್ರೂವ್ ಆಗಿದೆ.

ಹಾಗಾಗಿ, ಹೆಣ್ಣುಮಕ್ಕಳಿಗೆ ಪೋಷಕರು ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆಯವರೆಗೂ ಉತ್ತಮ ಶಿಕ್ಷಣ ನೀಡಲು ಹೆಚ್ಚಿನ ಒತ್ತು ಕೊಡಬೇಕು. ಮೂಢನಂಬಿಕೆಗಳನ್ನು ತೊರೆದು ಹೆಣ್ಣುಮಕ್ಕಳಿಗೆ ನಿರ್ಭೀತಿಯಿಂದ ಜೀವನ ಸಾಗಿಸಲು ಸಹಕಾರ ನೀಡಬೇಕು. ಪುರುಷರು ಮಾಡುವ ಎಲ್ಲಾ ಕೆಲಸಗಳ ಜೊತೆಗೆ, ಕೆಲವೊಮ್ಮೆ ಅವನಿಗೆ ಸಾಧ್ಯವಾಗದ ಕೆಲಸಗಳನ್ನು ಮಾಡಿ ಜಯಗಳಿಸಿ ತೋರಿಸುತ್ತಾಳೆ ಮಹಿಳೆ. ದಾರಿತಪ್ಪಿದ ನೀತಿಹೀನ ಪುರುಷನನ್ನು ಉತ್ತಮ ಮನುಷ್ಯನನ್ನಾಗಿ ಮಾಡಿ ದೇವತೆಯಾಗುತ್ತಾಳೆ. ಇಂತಹ ಅನನ್ಯ ಶಕ್ತಿಯುಳ್ಳ ಮಹಿಳೆಗೆ ಸಮಾನತೆ, ಪ್ರೋತ್ಸಾಹ, ಸಹಕಾರ ನೀಡಿದ್ದೇ ಆದಲ್ಲಿ ಕೆಲವೇ ಕೆಲವು ವರ್ಷಗಳಲ್ಲಿ ಭಾರತ ಎಲ್ಲ ರಂಗಗಳಲ್ಲಿಯೂ ವಿಜೃಂಭಿಸುವ ಕಾಲ ಬಂದೇ ಬರುತ್ತದೆ.

ನೆನಪಿಡಿ, ಉತ್ತಮ ಶಿಕ್ಷಣ, ಪ್ರೋತ್ಸಾಹವೇ ಸ್ತ್ರೀಯರನ್ನು ಉತ್ತಮ ಮಗಳನ್ನಾಗಿ, ಸುಂದರಿಯಾಗಿ, ಸ್ನೇಹಮಯಿಯಾಗಿ, ನಂಬಿಕಸ್ತ ಹೆಂಡತಿಯಾಗಿ ಮತ್ತು ಆದರ್ಶ ತಾಯಿಯನ್ನಾಗಿ ಮಾಡುತ್ತದೆ. ಸ್ತ್ರೀಯರು ತಾವು ಅನುಭವಿಸುತ್ತಿರುವ ಕಷ್ಟ ಕೋಟಲೆಗಳಿಂದ ಹೊರಬರಬೇಕಾದರೆ, ಆಕೆಗಿರುವ ಸಂವೇದನೆಯ ಸೆಲೆಗಳು ಪುಟಿಯಬೇಕು. ಹಾಗಾದಾಗ ಮಾತ್ರವೇ, ಮಹಿಳೆಯು ಸ್ವಾಭಿಮಾನದ ಸಿಡಿಗುಂಡಾಗಿ ಉತ್ತಮ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದರೊಂದಿಗೆ, ಅತ್ಯುತ್ತಮ ನಾಗರಿಕಳಾಗಿ, ಅದ್ವಿತೀಯ ನಾಗರಿಕತೆಯನ್ನು ಸೃಷ್ಟಿಸಬಲ್ಲಳು. ಸಮಾನತೆ ಎಂಬುದು ಪುರುಷ ಮತ್ತು ಸ್ತ್ರೀಯರ ನಡುವಿನ ಸ್ಪರ್ಧೆಯಾಗಬಾರದು. ಅದು ಅಂತರ್ಯದಿಂದ ಹೊಮ್ಮಬೇಕು, ಒಬ್ಬರಿಗೊಬ್ಬರಿಗೆ ಪೂರಕವಾಗಿರಬೇಕು. ಸ್ತ್ರೀಯರ ಶಕ್ತಿಯ ಕುರಿತಾದ ವಿವೇಕವಾಣಿಯೊಂದಿದೆ. 'ಇದುವರೆಗಿನ ನಾಗರಿಕತೆಯನ್ನು ಪುರುಷರು ನಿರ್ಮಿಸಿದ್ದರೆ, ಮುಂದಿನ ನಾಗರಿಕತೆಯನ್ನು ಸ್ತ್ರೀಯರು ನಿರ್ಮಿಸುತ್ತಾರೆ. ಧೈರ್ಯವಂತರು, ಕರ್ತವ್ಯನಿಷ್ಠರು, ಸಮರ್ಥರು ಆದ ಹತ್ತು ಸಾವಿರ ಯುವಕರಿಂದ ಭವ್ಯ ಭಾರತವನ್ನು ನಿರ್ಮಿಸಬಲ್ಲೆ. ಆದರೆ ಅದೇ ಗುಣಗಳಿಂದ ಕೂಡಿದ ಕೇವಲ ಒಂದು ಸಾವಿರ ಮಹಿಳೆಯರಿಂದ ಇನ್ನೂ ಹೆಚ್ಚಿನದನ್ನು ಸಾಧಿಸಬಲ್ಲೆ. ಇದು ನಮ್ಮ ದೇಶದ ಸ್ತ್ರೀಯರಲ್ಲಿ ಇರುವ ಶಕ್ತಿ, ಸಾಮರ್ಥ್ಯ. ಈ ಶಕ್ತಿ ಹಾಗೂ ಸಾಮರ್ಥ್ಯಗಳು ಸ್ಫೋಟಗೊಳ್ಳಬೇಕೆಂದರೆ, ಅವರಿಗೆ ಸೂಕ್ತ ಶಿಕ್ಷಣ, ಸಮಾನತೆ ಕೊಟ್ಟು ನೋಡಿ. ಇಡೀ ವಿಶ್ವದಲ್ಲಿಯೇ ನಮ್ಮ ದೇಶ ವಿಶ್ವಗುರು ಸ್ಥಾನದಲ್ಲಿ ರಾರಾಜಿಸಿ, ಇತರೇ ರಾಷ್ಟ್ರಗಳಿಗೆ ಮಾದರಿಯಾಗುತ್ತದೆ.

ಕೇಂದ್ರದ 'ಪ್ರಸಾದ್'ದಡಿ ಚಾಮುಂಡಿಬೆಟ್ಟದ ಅಭಿವೃದ್ಧಿ

- ವರ್ಚುಯಲ್ ಮೂಲಕ ಪ್ರಧಾನಮಂತ್ರಿ ನರೇಂದ್ರ ಮೋದಿ ಶಂಕುಸ್ಥಾಪನೆ
- 2 ವರ್ಷದಲ್ಲಿ ಯೋಜನೆ ಪೂರ್ಣ: ಸಂಸದ ಪ್ರತಾಪ್ ಸಿಂಹ ವಿಶ್ವಾಸ
- ಚಾಮುಂಡಿಬೆಟ್ಟಕ್ಕೆ 45.71 ಕೋಟಿ 'ಪ್ರಸಾದ'
- ಸ್ವದೇಶ ದರ್ಶನ್ ಯೋಜನೆಗೆ 80 ಕೋಟಿ
- ಇಕೋಲಾಜಿಕಲ್ ಎಕ್ಸ್‌ಪೀರಿಯನ್ಸ್ ಝೋನ್
- ಟಾಂಗಾ ರೈಡ್ ಹೆರಿಟೇಜ್ ಎಕ್ಸ್‌ಪೀರಿಯನ್ಸ್ ಝೋನ್
- ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಹೊಸ ಮೈಲಿಗಲ್ಲು

ಮೈಸೂರು, ಮಾ.7(ಬಿಎಲ್‌ಯು)– ಧಾರ್ಮಿಕ ಶಕ್ತಿ ಕೇಂದ್ರ ಮೈಸೂರಿನ ಚಾಮುಂಡಿಬೆಟ್ಟವನ್ನು ಆಮೂಲಾಗ್ರವಾಗಿ ಅಭಿವೃದ್ಧಿಗೊಳಿಸುವ ಕೇಂದ್ರ ಪುರಸ್ಕೃತ 'ಪ್ರಸಾದ್' ಯೋಜನೆ ಹಾಗೂ ಮೈಸೂರಿನ ದಸರಾ ವಸ್ತುಪ್ರದರ್ಶನ, ಮೃಗಾಲಯಕ್ಕೆ ಅಭಿವೃದ್ಧಿ ಸ್ಪರ್ಶ ನೀಡುವ ಸ್ವದೇಶ ದರ್ಶನ್ ಯೋಜನೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಇಂದು ವಿಡಿಯೋ ವರ್ಚುಯಲ್ ಮೂಲಕ ಶಂಕುಸ್ಥಾಪನೆ ನೆರವೇರಿಸಿದರು.

ದೇಶದ ವಿವಿಧ ನಗರಗಳಲ್ಲಿ ಕೈಗೊಂಡಿರುವ ಪ್ರಸಾದ್ ಹಾಗೂ ಸ್ವದೇಶಿ ದರ್ಶನ್ 2.0 ಯೋಜನೆಗೆ ಜಮ್ಮು ಮತ್ತು ಕಾಶ್ಮೀರದ ರಾಜಧಾನಿ ಶ್ರೀನಗರದಿಂದ ಪ್ರಧಾನಿ ಮೋದಿ ಇಂದು ಚಾಲನೆ ನೀಡಿದರು.

ಈ ವೇಳೆ ವರ್ಚುಯಲ್ ಮೂಲಕ ನರೇಂದ್ರ ಮೋದಿ 45.71 ಕೋಟಿ ವೆಚ್ಚದ ಮೈಸೂರಿನ ಚಾಮುಂಡಿಬೆಟ್ಟ ದೇವಸ್ಥಾನದ ಅಭಿವೃದ್ಧಿ ಹಾಗೂ 80 ಕೋಟಿ ವೆಚ್ಚದಲ್ಲಿ ಇಕೋಲಾಜಿಕಲ್ ಎಕ್ಸ್‌ಪೀರಿಯನ್ಸ್ ಝೋನ್ ಮತ್ತು ಟಾಂಗ ರೈಡ್ ಹೆರಿಟೇಜ್ ಎಕ್ಸ್‌ಪೀರಿಯನ್ಸ್ ಝೋನ್ ಶಂಕುಸ್ಥಾಪನೆ ನೆರವೇರಿಸಿದರು.

ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯದ ಆಂಪಿ ಥಿಯೇಟರ್‌ನಲ್ಲಿ ಇಂದು ನರೇಂದ್ರ ಮೋದಿ ಅವರ ಶಂಕುಸ್ಥಾಪನೆ ಕಾರ್ಯದ ನೇರ ಪ್ರಸಾರ ಕಾರ್ಯಕ್ರಮವನ್ನು ಸಂಸದ ಪ್ರತಾಪ್ ಸಿಂಹ ಉದ್ಘಾಟಿಸಿದರು.

ತರುವಾಯ ಮಾತನಾಡಿದ ಪ್ರತಾಪ್ ಸಿಂಹ, ಕೇಂದ್ರ ಸರ್ಕಾರದ ಪ್ರಸಾದ್ ಹಾಗೂ ಸ್ವದೇಶ ದರ್ಶನ್ ಯೋಜನೆ ಮೈಸೂರಿಗೆ ಅಷ್ಟು ಸುಲಭವಾಗಿ ದಕ್ಕಿಲ್ಲ. ಇದಕ್ಕಾಗಿ ಬಹಳಷ್ಟು ಪ್ರಯತ್ನಗಳು ನಡೆದಿವೆ ಎಂದು ಸ್ಪಷ್ಟಪಡಿಸಿದರು.

ದೇಶದ ಪ್ರಮುಖ ದೇವಸ್ಥಾನಗಳನ್ನು ಪ್ರಸಾದ್ ಯೋಜನೆಯಡಿ ಅಭಿವೃದ್ಧಿಪಡಿಸಲಾಗುತ್ತಿದೆ. ಇದರಲ್ಲಿ ಒಂದು ರಾಜ್ಯಕ್ಕೆ, ಒಂದು ಯೋಜನೆ ನೀಡಲಾಗುತ್ತಿತ್ತು. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಕರ್ನಾಟಕದ ಪ್ರಸ್ತಾವನೆ ಸಲ್ಲಿಸಲಾಗಿತ್ತು ಚಾಮುಂಡಿಬೆಟ್ಟ ಹಾಗೂ ಕೊಲ್ಲೂರು ದೇವಸ್ಥಾನಗಳ ನಡುವೆ ಪೈಪೋಟಿ ಇತ್ತು. ಈ ಸಂದರ್ಭದಲ್ಲಿ ಒಂದು ದೇವಸ್ಥಾನ ಮಾತ್ರ ಆಯ್ಕೆ ಮಾಡಬೇಕಾದ ಸಂದರ್ಭದಲ್ಲಿ ಅಂದಿನ ಪ್ರವಾಸೋದ್ಯಮ ಸಚಿವ ಸಾ.ರಾ.ಮಹೇಶ್, ಚಾಮುಂಡಿಬೆಟ್ಟವನ್ನು ಆಯ್ಕೆ ಮಾಡಿ ರಾಜ್ಯ ಸರ್ಕಾರದಿಂದ ಕೇಂದ್ರ ಪ್ರವಾಸೋದ್ಯಮ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು ಎಂದರು.

ನಂತರ ಕಾವಾ ಸೇರಿದಂತೆ ಇತರೆ ಖಾಸಗಿ ಸಂಸ್ಥೆಗಳ ಮೂಲಕ ಯೋಜನೆ ಮತ್ತು ಪರಿಕಲ್ಪನೆಯ ಬಗ್ಗೆ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿತ್ತು. ಆದರೆ ಅದು ಸಮರ್ಪಕವಾಗಿಲ್ಲದ ಕಾರಣ ಕೇಂದ್ರ ಸರ್ಕಾರ ತಿರಸ್ಕರಿಸಿತ್ತು. ಇದರಿಂದ ಕರ್ನಾಟಕಕ್ಕೆ ಈ ಯೋಜನೆ ಕೈ ತಪ್ಪುವ ಸಾಧ್ಯತೆಯೂ ಇತ್ತು ಎಂದು ತಿಳಿಸಿದರು.

ವಿಶ್ವ ಯೋಗ ದಿನಾಚರಣೆಯಲ್ಲಿ ಭಾಗಿಯಾಗಲು ಮೈಸೂರಿಗೆ ಬಂದಿದ್ದ ಪ್ರಧಾನಮಂತ್ರಿ ನರೇಂದ್ರ ಮೋದಿ ಚಾಮುಂಡಿಬೆಟ್ಟಕ್ಕೆ ಭೇಟಿ ನೀಡಿದ್ದರು. ದೇವಸ್ಥಾನದ ಗರ್ಭಗುಡಿಯಲ್ಲಿ ಕುಳಿತು ಧ್ಯಾನ ಮಾಡಿದರು. ಆ ವೇಳೆ ತಾಯಿ ಚಾಮುಂಡೇಶ್ವರಿ ಪ್ರೇರಣೆಯಂತೆ ನರೇಂದ್ರ ಮೋದಿ ಚಾಮುಂಡೇಶ್ವರಿ ದೇವಾಲಯವನ್ನು ಪ್ರಸಾದ್ ಯೋಜನೆಗೆ ಆಯ್ಕೆ ಮಾಡಿದರು ಎಂದು ಪ್ರತಾಪ್ ಸಿಂಹ ವಿವರಿಸಿದರು. ಇನ್ನು ಸ್ವದೇಶಿ ದರ್ಶನ್ ಯೋಜನೆಯಲ್ಲಿ ಮೈಸೂರು, ಹಂಪಿ, ಬೀದರ್ ಸೇರಿದಂತೆ ದಕ್ಷಿಣ ಕನ್ನಡದ ಎರಡು ನಗರಗಳ ನಡುವೆ ಪೈಪೋಟಿ ಇತ್ತು. ಮೈಸೂರಿನ ಪ್ರವಾಸಿ ತಾಣಗಳಿಗಿರುವ ಮಹತ್ವ ಹಾಗೂ ದಸರಾ ವಸ್ತುಪ್ರದರ್ಶನದಲ್ಲಿರುವ 100 ಎಕರೆ ಪ್ರದೇಶವನ್ನು ಸಮರ್ಥವಾಗಿ ಬಳಸಿಕೊಳ್ಳಲು ಕೇಂದ್ರ ಸರ್ಕಾರ ಅಂತಿಮವಾಗಿ ಮೈಸೂರು ಆಯ್ಕೆ ಮಾಡಿತು. ಇದರ ಜೊತೆಗೆ ವಿಶ್ವ ಪ್ರವಾಸಿ ತಾಣ ಹಂಪಿ ಕೂಡ ಆಯ್ಕೆಯಾಯಿತು ಎಂದು ವಿವರಣೆ ನೀಡಿದರು.

ಈಗ ಚಾಮುಂಡಿಬೆಟ್ಟದ ಅಭಿವೃದ್ಧಿಗೆ ಕೇಂದ್ರ ಸರ್ಕಾರ 45.71 ಕೋಟಿ ರೂ. ನೀಡಿದೆ. ದಸರಾ ವಸ್ತುಪ್ರದರ್ಶನ, ಮೃಗಾಲಯ, ಟಾಂಗಾ ರೈಡ್ ಹೆರಿಟೇಜ್ ಸೇರಿದಂತೆ ಇತರೆ ಅಭಿವೃದ್ಧಿಗೆ 80 ಕೋಟಿ ರೂಪಾಯಿ ನೀಡಿದೆ. ಈ ಹಣದಲ್ಲಿ ಮೈಸೂರು ಮತ್ತಷ್ಟು ಅಭಿವೃದ್ಧಿಯಾಗಲಿದೆ. ಅದರಲ್ಲೂ ಚಾಮುಂಡಿಬೆಟ್ಟ ದೇವಾಲಯ ಪ್ರವಾಸೋದ್ಯಮ ಅಭಿವೃದ್ಧಿಯ ಪರ್ವದಲ್ಲಿ ದಾಪುಗಾಲು ಹಾಕಲಿದೆ ಎಂದು ಪ್ರತಾಪ್‌ಸಿಂಹ ವಿಶ್ವಾಸ ವ್ಯಕ್ತಪಡಿಸಿದರು. ಮೈಸೂರಿನ ಪ್ರವಾಸೋದ್ಯಮ ಮತ್ತಷ್ಟು ಅಭಿವೃದ್ಧಿಯಾದರೆ ಮೈಸೂರು ಮಲ್ಲಿಗೆ, ವಿಳ್ಯದೆಲೆ, ಮೈಸೂರು ಪಾಕ್ ಸೇರಿದಂತೆ ಮೈಸೂರಿನ ಭೌಗೋಳಿಕ ನೆಲೆಯುಳ್ಳ ವಸ್ತುಗಳಿಗೆ ಮತ್ತಷ್ಟು ಮಾನ್ಯತೆ ದೊರೆಯಲಿದೆ. ಇದರಿಂದ ಮೈಸೂರು ಮತ್ತಷ್ಟು ಪ್ರವಾಸಿಗರನ್ನು ಸೆಳೆಯಲಿದೆ ಎಂದು ಹೇಳಿದರು. ಪ್ರಸಾದ್ ದರ್ಶನ್‌ನಲ್ಲಿ ಚಾಮುಂಡಿಬೆಟ್ಟದ ಅಭಿವೃದ್ಧಿ, ಸ್ವದೇಶಿ ದರ್ಶನ್‌ನಲ್ಲಿ ದಸರಾ ವಸ್ತು ಪ್ರದರ್ಶನ, ಮೃಗಾಲಯ ಸೇರಿದಂತೆ ಇತರೆ ಅಭಿವೃದ್ಧಿ ಕಾಮಗಾರಿಗಳು ಇನ್ನು ಎರಡು ವರ್ಷದಲ್ಲಿ ಪೂರ್ಣಗೊಳ್ಳುವ ವಿಶ್ವಾಸವಿದೆ. ಇದರಿಂದ ಮೈಸೂರಿನ ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಶ್ರೀಮಂತಿಕೆ ಕಾಣಬಹುದು ಎಂದು ಪ್ರತಾಪ್ ಸಿಂಹ ತಿಳಿಸಿದರು. ಈ ಕಾರ್ಯಕ್ರಮದ ತರುವಾಯ ಎಲ್‌ಇಡಿ ಸ್ಕ್ರೀನ್ ಮೂಲಕ ನರೇಂದ್ರ ಮೋದಿ ಅವರ ಶಂಕುಸ್ಥಾಪನೆ ಕಾರ್ಯಕ್ರಮವನ್ನು ನೇರಪ್ರಸಾರ ಮಾಡಲಾಯಿತು. ಶಾಸಕ ಟಿ.ಎಸ್.ಶ್ರೀವತ್ಸ, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಪ್ರವಾಸೋದ್ಯಮ ಇಲಾಖೆಯ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.





ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯದ ಆ್ಯಂಪಿ ಥಿಯೇಟರ್‌ನಲ್ಲಿ ಗುರುವಾರ ಕೇಂದ್ರ ಸರ್ಕಾರ ಪುರಸ್ಕೃತ ಪ್ರಸಾದ್ ಹಾಗೂ ಸ್ವದೇಶ ದರ್ಶನ್ ಯೋಜನೆಯನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ವರ್ಚುಯಲ್ ಮೂಲಕ ಉದ್ಘಾಟಿಸಿದರು. ಇದರ ನೇರಪ್ರಸಾರ ಕಾರ್ಯಕ್ರಮದಲ್ಲಿ ಸಂಸದ ಪ್ರತಾಪ್ ಸಿಂಹ ಚಾಮುಂಡಿಬೆಟ್ಟ, ದಸರಾ ವಸ್ತುಪ್ರದರ್ಶನ ಹಾಗೂ ಮೃಗಾಲಯದ ಅಭಿವೃದ್ಧಿಯ ನೀಲನಕ್ಷೆಯ ಕೈಪಿಡಿ ಬಿಡುಗಡೆ ಮಾಡಿದರು(ಎಡಚಿತ್ರ). ಪ್ರಸಾದ್ ಯೋಜನೆಯಲ್ಲಿ ಅನುಷ್ಠಾನಗೊಳಿಸುತ್ತಿರುವ ಚಾಮುಂಡಿಬೆಟ್ಟದ ಮಹಿಷಾಸುರ ಪ್ರತಿಮೆ ವೃತ್ತದ ಪಾರಂಪರಿಕ ಶೈಲಿಯ ಪರಿಕಲ್ಪನೆಯನ್ನು (ಬಲಚಿತ್ರ) ಕಾಣಬಹುದು.

ಮಾ.10ಕ್ಕೆ ಮೈಸೂರಿಗೆ ನಿತಿನ್ ಗಡ್ಕರಿ: ವಿವಿಧ ಯೋಜನೆಗಳಿಗೆ ಶಂಕುಸ್ಥಾಪನೆ



ಮೈಸೂರು, ಮಾ.7(ಬಿಎಲ್‌ಯು)– ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಪಕ್ಕದಲ್ಲಿ ರೈಲ್ವೆ ಅಂಡರ್‌ಪಾಸ್, ಕೆಆರ್‌ಎಸ್ ರಸ್ತೆಯ ರೈಲ್ವೆ ಅಂಡರ್‌ಪಾಸ್ ಸೇರಿದಂತೆ ಹಲವು ಅಭಿವೃದ್ಧಿ ಯೋಜನೆಗೆ ಮಾ.10ರಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಶಂಕುಸ್ಥಾಪನೆ ನೆರವೇರಿಸುವರು ಎಂದು ಸಂಸದ ಪ್ರತಾಪ್‌ಸಿಂಹ ಮಾಹಿತಿ ನೀಡಿದರು.

ಮೈಸೂರು ಮೃಗಾಲಯದಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಅಂದು ಬೆಳಿಗ್ಗೆ ನಡೆಯುವ ಸಮಾರಂಭದಲ್ಲಿ ನಿತಿನ್ ಗಡ್ಕರಿ ಪಾಲ್ಗೊಳ್ಳುವರು ಎಂದು ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಬಳಿಯ ರೈಲ್ವೆ ಲೆವೆಲ್ ಕ್ರಾಸಿಂಗ್ ಹಾಗೂ ಕೆಆರ್‌ಎಸ್ ರಸ್ತೆಯ ರೈಲ್ವೆ ಲೆವೆಲ್ ಕ್ರಾಸಿಂಗ್‌ನಿಂದ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಈ ಹಿನ್ನೆಲೆ ಅಲ್ಲಿ ರೈಲ್ವೆ ಅಂಡರ್‌ಪಾಸ್ ನಿರ್ಮಾಣ ಮಾಡಲಾಗುತ್ತಿದ್ದು, ಅಂದು ನಿತಿನ್ ಗಡ್ಕರಿ ಶಂಕುಸ್ಥಾಪನೆ ನೆರವೇರಿಸುವರು. ಅಂದೇ ಮೈಸೂರು–ನಂಜನಗೂಡು ನಡುವಿನ ಹೆದ್ದಾರಿಯ 6 ಪಥ ಮೇಲ್ದರ್ಜೆಗೂ ಶಂಕುಸ್ಥಾಪನೆ ಮಾಡಲಿದ್ದಾರೆ ಎಂದು ಪ್ರತಾಪ್ ಸಿಂಹ ತಿಳಿಸಿದರು. ಇದೇ ವೇಳೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೆಯಲ್ಲಿ 1,200 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡುತ್ತಿರುವ ಫುಡ್ ಪಾರ್ಕ್, ಸ್ಕೈ ವಾಕ್ ಸೇರಿದಂತೆ ಇತರೆ ಯೋಜನೆಗಳಿಗೂ ಅಂದು ನಿತಿನ್ ಗಡ್ಕರಿ ಭೂಮಿ ಪೂಜೆ ನೆರವೇರಿಸುವರು ಎಂದು ಹೇಳಿದರು. ಮೇಲ್ದರ್ಜೆಗೇರಿಸಿರುವ ಮೈಸೂರಿನ–ಹುಣಸೂರು ರಸ್ತೆ, ತಿ.ನರಸೀಪುರ ರಸ್ತೆಯನ್ನು ಅಂದು ನಿತಿನ್ ಗಡ್ಕರಿ ಉದ್ಘಾಟನೆ ಮಾಡುವರು. ಬೆಂಗಳೂರಿನ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣದ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಲು ಈ ವೇಳೆ ಪ್ರತಾಪ್‌ಸಿಂಹ ನಿರಾಕರಿಸಿದರು.

ಕಾಡಾ ಕಚೇರಿಯಲ್ಲಿ ಮೈಸೂರಿನ ಸಾಂಪ್ರದಾಯಿಕ ಉತ್ಪನ್ನಗಳ ಮಾರಾಟ ಮಳಿಗೆ ತೆರೆಯಿರಿ



ಮೈಸೂರು, ಮಾ.7(ಬಿಎಲ್‌ಯು)– ಮೈಸೂರು ಮಲ್ಲಿಗೆ, ಮೈಸೂರು ವಿಳ್ಯದೆಲೆ, ಮೈಸೂರು ಪಾಕ್, ಮೈಸೂರು ಸ್ಯಾಂಡಲ್ ಸೋಪ್, ಮೈಸೂರು ರೇಷ್ಮೆ ಸೀರೆ ಸೇರಿದಂತೆ ಮೈಸೂರಿನ ಭೌಗೋಳಿಕ ನೆಲೆ ಹಾಗೂ ಸಾಂಪ್ರದಾಯಿಕ ವಸ್ತುಗಳನ್ನು ಒಂದೇ ಸೂರಿನಲ್ಲಿ ಮಾರಾಟ ಮಾಡುವ ನಿಟ್ಟಿನಲ್ಲಿ ಕಾಡಾ ಕಚೇರಿಯಲ್ಲಿ ಪ್ರದರ್ಶನ ಮತ್ತು ಮಾರಾಟ ಮಳಿಗೆ ತೆರೆಯಬೇಕು ಎಂದು ಕೆ.ಆರ್.ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ. ಈಗಿರುವ ಕಾಡಾ ಕಚೇರಿಯನ್ನು ಹಳೆಯ ಜಿಲ್ಲಾಧಿಕಾರಿ ಕಚೇರಿಗೆ ಸ್ಥಳಾಂತರ ಮಾಡಬೇಕು. ಆಗ ಖಾಲಿಯಾಗುವ ಕಾಡಾ ಕಚೇರಿಯ ಒಂದೇ ಸೂರಿನಲ್ಲಿ ಮೈಸೂರಿನ ಸಾಂಪ್ರದಾಯಿಕ ವಸ್ತುಗಳ ಮಾರಾಟ ಹಾಗೂ ಪ್ರದರ್ಶನದ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು.

ಮೈಸೂರಿಗೆ ದೇಶ ವಿದೇಶದ ಲಕ್ಷಾಂತರ ಪ್ರವಾಸಿಗರು ಆಗಮಿಸುತ್ತಾರೆ. ಆದರೆ ಮೈಸೂರಿನ ಹೆಸರಾಂತ ವಸ್ತುಗಳ ಖರೀದಿಯಲ್ಲಿ ಅವರಿಗೆ ಶೋಷಣೆಯಾಗುತ್ತಿದೆ. ಗುಣಮಟ್ಟವಲ್ಲದ ಹಾಗೂ ದುಬಾರಿ ಬೆಲೆಯಲ್ಲಿ ಮೈಸೂರಿನ ಹೆಸರಾಂತ ವಸ್ತುಗಳನ್ನು ಮಾರಾಟ ಮಾಡಲಾಗುತ್ತಿದೆ ಎಂದು ಆರೋಪಿಸಿದರು. ಆದ ಕಾರಣ ಮೈಸೂರು ಅರಮನೆ ಎದುರು ಇರುವ ಕಾಡಾ ಕಚೇರಿಯ ಒಂದೇ ಸೂರಿನಲ್ಲಿ ಎಲ್ಲಾ ವಸ್ತುಗಳು ಮಾರಾಟ ಮತ್ತು ಪ್ರದರ್ಶನವಾದರೆ ಪ್ರವಾಸಿಗರಿಗೆ ಅನುಕೂಲವಾಗುತ್ತದೆ. ಇದರಿಂದ ನಿಗದಿತ ಬೆಲೆಯ ಗುಣಮಟ್ಟದ ವಸ್ತುಗಳು ಪ್ರವಾಸಿಗರಿಗೆ ದೊರಕಲಿದ್ದು, ಶೋಷಣೆ ತಪ್ಪಲಿದೆ ಎಂದು ಅಭಿಪ್ರಾಯಪಟ್ಟರು.

ಈ ಯೋಜನೆ ಸಾಕಾರಗೊಳ್ಳಲು ಸಂಸದ ಪ್ರತಾಪ್ ಸಿಂಹ ಮುತುವರ್ಜಿ ವಹಿಸಬೇಕು. ಸರ್ಕಾರದ ಮಟ್ಟದಲ್ಲಿ ಇದರ ಪ್ರಯತ್ನಗಳು ನಡೆಯಬೇಕು ಎಂದು ಶ್ರೀವತ್ಸ ಆಗ್ರಹಿಸಿದರು.

ಲೋಕಸಭಾ ಚುನಾವಣೆಗೆ: ಇನ್ನೆರಡ್ಮೂರು ದಿನದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿ ಪ್ರಕಟ

ಬೆಂಗಳೂರು, ಮಾ.7(ಕೆಎಂಶಿ)–



ಲೋಕಸಭಾ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿ ಇನ್ನೆರಡು–ಮೂರು ದಿನಗಳಲ್ಲಿ ಪ್ರಕಟಗೊಳ್ಳಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ರಾಜ್ಯದ 28 ಲೋಕಸಭಾ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ಸಂಬಂಧ ರಾಜ್ಯ ಮತ್ತು ಕೇಂದ್ರ ಮಟ್ಟದಲ್ಲಿ ಹಲವು ಸುತ್ತಿನ ಚರ್ಚೆಗಳು ನಡೆದಿವೆ. ಚುನಾವಣಾ ಪೂರ್ವ ಸಮೀಕ್ಷೆ, ಅಭ್ಯರ್ಥಿಗಳ ಆಯ್ಕೆ ಸಂಬಂಧ ನೇಮಕಗೊಂಡಿದ್ದ ಉಸ್ತುವಾರಿ ಸಚಿವರ ವರದಿಯೂ ಸೇರಿದಂತೆ ಹಲವು ಮಾಹಿತಿಗಳನ್ನು ಆಧರಿಸಿ ಸಂಭವನೀಯ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಿ ವರಿಷ್ಠರಿಗೆ ಶಿಫಾರಸು ಮಾಡಲಾಗಿದೆ.

ವರಿಷ್ಠರ ಸೂಚನೆಯಂತೆ ಕೆಲವು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ಆಯ್ಕೆ ಕುರಿತಂತೆ ನಗರದಲ್ಲೇ ಶನಿವಾರ ಮತ್ತೊಂದು ಸುತ್ತಿನ ಚರ್ಚೆ ನಡೆಯಲಿದೆ. ಪಕ್ಷದ ಕೇಂದ್ರ ಚುನಾವಣಾ ಸಮಿತಿ ಸದಸ್ಯರು ನಗರಕ್ಕೆ ಆಗಮಿಸಲಿದ್ದು ಅವರ ಸಮ್ಮುಖದಲ್ಲೇ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಯಲಿದೆ ಎಂದು ಸುದ್ದಿಗಾರರಿಗೆ ತಿಳಿಸಿದರು.

ಗ್ಯಾರಂಟಿ ಯೋಜನೆಗಳನ್ನು ಮುಂದಿಟ್ಟುಕೊಂಡು ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಕನಿಷ್ಠ 20 ಸ್ಥಾನಗಳನ್ನು ಗೆಲ್ಲಲೇಬೇಕೆಂಬ ಗುರಿಯೊಂದಿಗೆ ಕಸರತ್ತು ನಡೆಸಿದೆ. ಸಂಭವನೀಯ ಅಭ್ಯರ್ಥಿಗಳಿಗೆ ಕೆಲವು ಕ್ಷೇತ್ರಗಳಲ್ಲಿ ಚುನಾವಣಾ ಪ್ರಚಾರ ಆರಂಭಿಸುವಂತೆಯೂ ಹಸಿರು ನಿಶಾನೆ ತೋರಿದ್ದು, ಅವರು ಈಗಾಗಲೇ ಸಿದ್ಧತೆ ನಡೆಸಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ಬಂದಿರುವ ಸರಾಸರಿ ಮತವನ್ನು ಈ ಚುನಾವಣೆಯಲ್ಲಿ ಶೇಕಡಾ 4ರಿಂದ 5ರಷ್ಟು ಹೆಚ್ಚಳ ಮಾಡಿಕೊಂಡರೆ ತಮ್ಮ ನಿಗದಿತ ಗುರಿಯನ್ನು ಮುಟ್ಟಬಹುದೆಂಬ ಆಶಾಭಾವನೆ ಇದೆ.

ಮೂರನೇ ಪುಟದಿಂದ

‘ಹೈ’ ವಿಭಾಗೀಯ ಪೀಠ ಅಸ್ತು

9ನೇ ತರಗತಿ ಮತ್ತು 11ನೇ ತರಗತಿ ವಿದ್ಯಾರ್ಥಿಗಳಿಗೂ ಪಬ್ಲಿಕ್ ಪರೀಕ್ಷೆ ನಡೆಸುವುದರಿಂದ ವಿದ್ಯಾರ್ಥಿಗಳ ಕಲಿಕೆಯಲ್ಲಿ ಗಂಭೀರತೆ ಕಾಣಬಹುದು ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧುಬಂಗಾರಪ್ಪ ಅವರ ವಾದವಾಗಿತ್ತು. ಆದರೆ, 2023ರ ಡಿಸೆಂಬರ್‌ನಲ್ಲಿ ರಾಜ್ಯ ಸರ್ಕಾರ ಹೊರಡಿಸಿದ್ದ ಸುತ್ತೋಲೆಗಳನ್ನು ಪ್ರಶ್ನಿಸಿ ಕರ್ನಾಟಕ ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಸಂಘ (ರುಪ್ಸಾ) ಸಂಘಟನೆ ಕೋರ್ಟ್ ಮೆಟ್ಟಿಲೇರಿತ್ತು. ವಾದ ಆಲಿಸಿದ ಹೈಕೋರ್ಟ್ ಸರ್ಕಾರದ ಸುತ್ತೋಲೆ ರದ್ದುಗೊಳಿಸಿ ಆದೇಶಿಸಿತ್ತು.

ಮುಡಾಗೆ 6.3 ಕೋಟಿ ಉಳಿತಾಯ ಬಜೆಟ್

ಕಾಮಗಾರಿ ಮೇಲ್ವಿಚಾರಣಾ ಶುಲ್ಕದಿಂದ 100 ಕೋಟಿ ರೂ., ಬಡಾವಣೆ ನಕ್ಷೆ ಶುಲ್ಕ, ಕಾರ್ಮಿಕ ಕಲ್ಯಾಣ ನಿಧಿ, ಜಲಸಂಗ್ರಹಾಗಾರಗಳಿಂದ 802 ಕೋಟಿ ರೂ., ಕೆರೆ ಪುನರುಜ್ಜೀವನ ಶುಲ್ಕದಿಂದ 5 ಕೋಟಿ ರೂ., ಕೊಳಚೆ ಪ್ರದೇಶ ಅಭಿವೃದ್ಧಿ ಶುಲ್ಕದಿಂದ 90 ಲಕ್ಷ ರೂ., ಮೂಲೆ, ಮಧ್ಯಂತರ ನಿವೇಶನ, ಮನೆಗಳ ಹರಾಜಿನಿಂದ 400 ಕೋಟಿ ರೂ., ಸಿಎ ನಿವೇಶನಗಳ ಹಂಚಿಕೆಯಿಂದ 5.9 ಕೋಟಿ ರೂ., ನಿವೇಶನ ಹಂಚಿಕೆ ನಿಯಮ ಉಲ್ಲಂಘನೆ ಕ್ರಯ ಪತ್ರ ದಂಡ ಶುಲ್ಕದಿಂದ 100 ಕೋಟಿ ರೂ., ನಿಶ್ಚಿತ ಠೇವಣಿ ಹಿಂಪಡೆಯುವುದರಿಂದ 730 ಕೋಟಿ ರೂ., ವಾಣಿಜ್ಯ ಸಂಕೀರ್ಣಗಳ ಬಾಡಿಗೆ ಮತ್ತು ಗುತ್ತಿಗೆಯಿಂದ 137 ಕೋಟಿ ರೂ. ಸೇರಿ 2024–25ನೇ ಸಾಲಿನಲ್ಲಿ ಪ್ರಾಧಿಕಾರವು ಒಟ್ಟು 83,180.06 ಲಕ್ಷ ರೂ. ಸಂಪನ್ಮೂಲ ಕ್ರೋಢೀಕರಿಸಲು ಉದ್ದೇಶಿಸಲಾಗಿದೆ. ವೆಚ್ಚದ ಬಾಬ್ತುಗಳು : ಮಹಾಯೋಜನೆಯಂತೆ ರಸ್ತೆಗಳ ಅಭಿವೃದ್ಧಿಗೆ 370 ಕೋಟಿ ರೂ., ಅಧಿಕಾರಿ, ಸಿಬ್ಬಂದಿ ವೇತನ, ಸಾದಿಲ್ವಾರು, ಕಾನೂನು ವೆಚ್ಚ, ಹೊರ ಗುತ್ತಿಗೆ ನೌಕರರ ವೆಚ್ಚಕ್ಕಾಗಿ 400 ಕೋಟಿ ರೂ., ಮಹಾಯೋಜನೆ ಪರಿಷ್ಕರಣೆಗಾಗಿ 2 ಕೊಟಿ ರೂ., ಪ್ರಾಧಿಕಾರದ ಆಸ್ತಿ ಸಂರಕ್ಷಣೆಗೆ 2 ಕೋಟಿ ರೂ., ದಾಖಲೆಗಳ ಗಣಕೀಕರಣಕ್ಕಾಗಿ 5 ಕೋಟಿ ರೂ., ಕಟ್ಟಡ ನಿರ್ವಹಣೆಗೆ 5 ಕೋಟಿ ರೂ., ವಾಣಿಜ್ಯ ಸಂಕೀರ್ಣ ನಿರ್ಮಾಣಕ್ಕೆ 300 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ. ಕೆರೆ ಪುನರುಜ್ಜೀವನಕ್ಕಾಗಿ 550 ಕೋಟಿ ರೂ., ಕೊಳಚೆ ಪ್ರದೇಶ ಅಭಿವೃದ್ಧಿಗೆ 27 ಲಕ್ಷ ರೂ., ಭೂಸ್ವಾಧೀನ, ಕುಡಿಯುವ ನೀರು ಸರಬರಾಜು ಯೋಜನೆ, ನಿಶ್ಚಿತ ಠೇವಣಿ ಹೂಡಿಕೆ, ಗುಂಪು ಮನೆ ನಿರ್ಮಾಣ, ಪ್ರಾಧಿಕಾರದ ಬಡಾವಣೆಗಳ ಬಾಕಿ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗೆ 620 ಕೋಟಿ ರೂ. ಹಾಗೂ ನಿರ್ವಹಣೆಗಾಗಿ 5 ಕೋಟಿ ರೂ. ಸೇರಿದಂತೆ ಪ್ರಸಕ್ತ ವರ್ಷ ಮುಡಾದಿಂದ 82,577 ಲಕ್ಷ ರೂ. ವೆಚ್ಚವನ್ನು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ವಿಶೇಷ ಯೋಜನೆಗಳು : ವಿಜಯನಗರ 4ನೇ ಹಂತ, 2ನೇ ಘಟ್ಟ ಬಡಾವಣೆಯಲ್ಲಿ 560 ಮನೆಗಳ 12 ಮಹಡಿಯ ಗುಂಪು ವಸತಿ ಯೋಜನೆಗೆ 400 ಕೋಟಿ ರೂ. ಕಾಯ್ದಿರಿಸಲಾಗಿದೆ. 45 ಮೀ. ಅಗಲ, 73.25 ಕಿ.ಮೀ. ಉದ್ದದ ಪೆರಿಫೆರಲ್ ರಿಂಗ್ ರಸ್ತೆ ಹಾಗೂ ಹಾಲಿ ಇರುವ ರಿಂಗ್ ರಸ್ತೆಗಳಲ್ಲಿ ಗ್ರೇಡ್ ಸೆಪರೇಟರ್‌ಗಳನ್ನು ನಿರ್ಮಿಸಲು ಉದ್ದೇಶಿಸಿ ಅದಕ್ಕಾಗಿ 400 ಕೊಟಿ ರೂ. ಅನುದಾನವನ್ನು ಕಾಯ್ದಿರಿಸಲಾಗಿದೆ. ಆಯುಕ್ತರು ಮಂಡಿಸಿದ ಈ ಆಯವ್ಯಯದ ಮೇಲೆ ಸುದೀರ್ಘ ಚರ್ಚೆ ನಡೆಸಿದ ಬಳಿಕ ಮಿಶ್ರ ಅಭಿಪ್ರಾಯಗಳೊಂದಿಗೆ ಸದಸ್ಯರು ಒಪ್ಪಿಗೆ ಸೂಚಿಸಿದರು. ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ಎ.ಬಿ. ರಮೇಶ್ ಬಂಡಿಸಿದ್ದೇಗೌಡ, ಕೆ. ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ವಿಧಾನ ಪರಿಷತ್ ಸದಸ್ಯರಾದ ಅಡಗೂರು ಹೆಚ್. ವಿಶ್ವನಾಥ್, ಡಾ. ಬಿ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ದಿನೇಶ್ ಗೂಳೀಗೌಡ, ಮುಡಾ ಸೂಪರಿಂಟೆಂಡಿಂಗ್ ಇಂಜಿನಿಯರ್ ಎನ್.ಬಿ. ಚನ್ನಕೇಶವ, ನಗರ ಯೋಜಕ ಸದಸ್ಯ ಆರ್. ಶೇಷ, ಪಾಲಿಕೆ ಆಯುಕ್ತರಾದ ಡಾ. ಎನ್.ಎಸ್.ಮಧು, ಚೆಸ್ಕಾಂ ಸೂಪರಿಂಟೆಂಡಿಂಗ್ ಇಂಜಿನಿಯರ್ ಎ.ಎ. ಸುನಿಲ್ ಕುಮಾರ್, ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಸಿಫ್ ಇಕ್ಬಾಲ್ ಖಲೀಲ್ ಹಾಗೂ ಇತರರು ಬಜೆಟ್ ಸಭೆಯಲ್ಲಿ ಉಪಸ್ಥಿತರಿದ್ದರು.

ಕಾರ್ಯವೈಖರಿಗೆ ಸದಸ್ಯರ ತೀವ್ರ ಆಕ್ಷೇಪ

ಅವು ಸ್ಲಂಗಳಾಗುತ್ತಿವೆ. ಸೀವೇಜ್ ಟ್ರೀಟ್‌ಮೆಂಟ್ ಪ್ಲಾಂಟ್ (STP)ಗಳಾಗಿಲ್ಲ. ಯಾವುದೇ ಅಭಿವೃದ್ಧಿ ಕೆಲಸ ಮಾಡಲಿಲ್ಲ. ಇಂಜಿನಿಯರ್‌ಗಳು ಅವಿಜ್ಞಾನಿಗಳಾಗಿದ್ದಾರೆ. ಚುನಾವಣಾ ನೀತಿ ಸಂಹಿತೆ ಹೆಸರಲ್ಲಿ ಜನಪ್ರತಿನಿಧಿಗಳ ಅನುದಾನದಲ್ಲಿ ನಿರ್ಮಿಸಿದ ಬಸ್ ತಂಗುದಾಣ ಕಿತ್ತು ಬಿಸಾಡುವ ಬದಲು ಅವುಗಳನ್ನು ಪೇಪರ್‌ನಿಂದ ಮುಚ್ಚಿಸಿ ಎಂದು ಪಾಲಿಕೆ ಆಯುಕ್ತರಿಗೆ ಸೂಚನೆ ನೀಡಿದರು.

ನಿವೇಶನ ನೀಡಿ: ವಸತಿ ಬಡಾವಣೆ ಅಭಿವೃದ್ಧಿಪಡಿಸಿ, ಸೂರಿಲ್ಲದವರಿಗೆ ನಿವೇಶನ ಹಂಚಿಕೆ ಮಾಡುವತ್ತ ಗಮನಹರಿಸಿ ಎಂದು ವಿಧಾನ ಪರಿಷತ್ ಸದಸ್ಯ ಡಾ. ಡಿ.ತಿಮ್ಮಯ್ಯ ಒತ್ತಾಯಿಸಿದರು. ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮದ ಮೂಲ ಆಶಯವೇ ವಸತಿ ಬಡಾವಣೆ ನಿರ್ಮಿಸಿ, ಆಕಾಂಕ್ಷಿಗಳಿಗೆ ನಿಯಮಾನುಸಾರ ನಿವೇಶನ ಅಥವಾ ಮನೆ ಹಂಚಿಕೆ ಮಾಡುವುದಾಗಿದೆ. ಆದರೆ, ಮುಡಾ ಮೂಲ ಉದ್ದೇಶವನ್ನೇ ಮರೆತಿರುವುದು ವಿಷಾದನೀಯ ಎಂದು ನುಡಿದರು.

ಆರ್‌ಟಿಐ ಕಾರ್ಯಕರ್ತರದ್ದೇ ಆಡಳಿತ: ಮುಡಾದಲ್ಲಿ ಆರ್‌ಟಿಐ ಕಾರ್ಯಕರ್ತರದ್ದೇ ಆಡಳಿತವಾಗಿದೆ. ಆಯುಕ್ತರ ಮುಂದೆ ಕಾಲು ಮೇಲೆ ಕಾಲು ಹಾಕಿಕೊಂಡು ಕುಳಿತು ಫೈಲ್‌ಗಳನ್ನು ತರಿಸಿ, ಆದೇಶ ಮಾಡುತ್ತಿದ್ದಾರೆ. ಜನಪ್ರತಿನಿಧಿಗಳ ಮಾತು ಇಲ್ಲಿ ನಡೆಯುತ್ತಿಲ್ಲ ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅಸಮಾಧಾನ ವ್ಯಕ್ತಪಡಿಸಿದರು. ವಾಣಿಜ್ಯ ಮಳಿಗೆ, ಕಲ್ಯಾಣ ಮಂಟಪಗಳ ಬಾಡಿಗೆ ಸಂಗ್ರಹಿಸುತ್ತಿಲ್ಲ. ಪಾರ್ಕಿಂಗ್ ಸಮಸ್ಯೆಗೆ ಪರಿಹಾರವಿಲ್ಲ. ಅಭಿವೃದ್ಧಿಗೆ ಹಣ ಖರ್ಚು ಮಾಡಿ ಬಡಾವಣೆಯ ಕಂದಾಯ ವಸೂಲಿಯನ್ನು ಸ್ಥಳೀಯ ಸಂಸ್ಥೆಗಳಿಗೆ ವಹಿಸಿರುವುದರಿಂದ ಪಾಲಿಕೆಗೆ ಆದಾಯ ಹೇಗೆ ಬರುತ್ತದೆ ಎಂದು ಅವರು ಪ್ರಶ್ನಿಸಿದರು.

ನಿಧಿ 1, ನಿಧಿ 2 ದೋಷ: ಅಭಿವೃದ್ಧಿಗೆ ಹಣ ಬಳಸಲು ಪ್ರಾಧಿಕಾರದ ನಿಧಿ ಮತ್ತು ನಿಧಿ 2 ಅಡಿ ಇರುವ ನಿಯಮಗಳಲ್ಲಿ ತಾಂತ್ರಿಕ ದೋಷವಿದ್ದರೂ, ಮುಖ್ಯಮಂತ್ರಿಗಳಿಗೆ ಮನವರಿಕೆ ಮಾಡಿ ಸರ್ಕಾರದಲ್ಲಿ ಸರಿಪಡಿಸದಿರುವುದರಿಂದ ಕಾಮಗಾರಿ ಕುಂಠಿತವಾಗುತ್ತಿದೆ ಎಂದು ಶಾಸಕ ಕೆ.ಹರೀಶ್‌ಗೌಡ ತಿಳಿಸಿದರು.

ಶಾಲಾ–ಕಾಲೇಜುಗಳಿಗೆ ಶೌಚಾಲಯ: ಮುಡಾದಿಂದ ಸರ್ಕಾರಿ ಶಾಲಾ–ಕಾಲೇಜುಗಳಿಗೆ ಶೌಚಾಲಯ, ಹಾಸ್ಟೆಲ್‌ಗಳಿಗೆ ಕೊಠಡಿ ಮತ್ತು ಕಾಂಪೌಂಡ್ ಕಟ್ಟಿಸಿಕೊಡಬೇಕು. ತುಂಡು ಭೂಮಿ, ಸಿಎ ನಿವೇಶನ ಮಂಜೂರು ಮಾಡಿ ಆದಾಯ ಕ್ರೋಢೀಕರಿಸಿ ಎಂದ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ, 10 ವರ್ಷಗಳಿಂದ ಪ್ರಸ್ತಾಪಿಸುತ್ತಿದ್ದರೂ, ಗುಂಪು ವಸತಿ ಯೋಜನೆ ಅನುಷ್ಠಾನವಾಗಿಲ್ಲ ಎಂದರು.

ಮುಡಾ ಮುಚ್ಚಿ ಬಿಡಿ...!

ಫೆ. 24ರಂದು ಪ್ರಕಟವಾಗಿದ್ದ ವಿಶೇಷ ಲೇಖನ ‘ಎಲ್ಲ ಓಕೆ ಮುಡಾ ಬೇಕೆ’ ಉಲ್ಲೇಖಿಸಿ ಮಾತನಾಡಿದ ಅವರು, ನಿರೀಕ್ಷೆ ಹುಸಿ ಮಾಡಿರುವ ಆಯ–ವ್ಯಯದಲ್ಲಿ ಹೊಸ ವಸತಿ ಬಡಾವಣೆ ನಿರ್ಮಾಣ, ವಾಹನ ಸಂಚಾರ ದಟ್ಟಣೆ ನಿವಾರಣೆ, ಪಾರ್ಕಿಂಗ್ ಲಾಟ್ ನಿರ್ಮಾಣ, ಸ್ಥಳೀಯ ಯೋಜನಾ ವಲಯ (LPA)ದ ಅನುಷ್ಠಾನದ ಬಗ್ಗೆ ಪ್ರಸ್ತಾಪಿಸದಿರುವುದು ನಿರಾಸೆ ಉಂಟು ಮಾಡಿದೆ ಎಂದರು.

ಬೆಳೆಯುತ್ತಿರುವ ಜನಸಂಖ್ಯೆ, ವಾಹನ ದಟ್ಟಣೆಗನುಗುಣವಾಗಿ ಮೋನೋ, ಮೆಟ್ರೋ ರೈಲು ಯೋಜನೆ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪವಿಲ್ಲ. ಖಾಸಗಿ ಬಸ್ ನಿಲ್ದಾಣ, ಮಾರುಕಟ್ಟೆಗಳ ನಿರ್ಮಾಣ, ಆಸ್ಪತ್ರೆ, ಒಳ ಚರಂಡಿ, ಹೊಸ ಎಸ್‌ಟಿಪಿಗಳ ಬಗ್ಗೆಯೂ ಪ್ರಸ್ತಾಪಿಸಿಲ್ಲದಿರುವ ಈ ಬಜೆಟ್ ನಿರಾಸೆ ಉಂಟು ಮಾಡಿದೆ ಎಂದ 6 ಬಾರಿ ಶಾಸಕರಾಗಿ ಗೆದ್ದು ಮಂತ್ರಿಯೂ ಆಗಿದ್ದ ಹಿರಿಯ ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್, ಜನರ ಆಶಯದಂತೆ ಮೂಲ ಸೌಕರ್ಯ ಒದಗಿಸುವ ಮೂಲ ಉದ್ದೇಶವನ್ನೇ ಈಡೇರಿಸಲಾಗದ ಮುಡಾ ಇದ್ದರೇನು? ಇಲ್ಲದಿದ್ದರೇನು? ಪ್ರಾಧಿಕಾರವನ್ನು ಮುಚ್ಚುವುದು ಒಳ್ಳೆಯದು ಎಂದರು. ಮೈಸೂರಲ್ಲಿ ಅನಧಿಕೃತ ಕಟ್ಟಡಗಳು ತಲೆ ಎತ್ತುತ್ತಿವೆ. ಎಫ್‌ಎಆರ್‌ಗೆ ತಿದ್ದುಪಡಿ ಮಾಡಬೇಕು. ಮಹಾ ಯೋಜನೆ ಪರಿಷ್ಕರಣೆಗೆ ಸರ್ಕಾರ ಸೂಚಿಸಿದೆಯಾದರೂ, ಇದುವರೆಗೆ ಮಾಸ್ಟರ್ ಪ್ಲಾನ್‌ನಲ್ಲಿ ಏನೇನು ಜಾರಿಗೊಳಿಸಲಾಯಿತು ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಮನುಷ್ಯನಿಗೆ ಮನುಷ್ಯ ಬೇಡವಾದ ಪ್ರಸ್ತುತ ಕಾಲಘಟ್ಟದಲ್ಲಿ ಕಲೆಯ ಜವಾಬ್ದಾರಿ ಹೆಚ್ಚು

ರಂಗಭೂಮಿ ಸೇರಿದಂತೆ ಎಲ್ಲಾ ಕಲೆಗಳಿಗೂ ಅರಿವು ವಿಸ್ತರಿಸುವ ಗುಣವಿದೆ

ಖ್ಯಾತ ಸಾಹಿತಿ ಜಯಂತ್ ಕಾಯ್ಕಿಣಿ ಅಭಿಮತ ; ಬಹುರೂಪಿ ರಾಷ್ಟ್ರೀಯ ನಾಟಕೋತ್ಸವಕ್ಕೆ ಚಾಲನೆ

ಮೈಸೂರು,ಮಾ.7(ಪಿಎಂ)– ರಂಗಭೂಮಿ ಸೇರಿದಂತೆ ಎಲ್ಲಾ ಕಲೆಗಳಿಗೂ ನಮ್ಮ ಅರಿವು ವಿಸ್ತರಿಸುವ ಗುಣವಿದೆ. ಮನುಷ್ಯನಿಗೆ ಮನುಷ್ಯ ಬೇಡವಾದಂತಹ ಕಾಲಘಟ್ಟದಲ್ಲಿ ನಾವಿದ್ದು, ಈ ಬೇಡವೆಂಬುದನ್ನು ದೂರವಾಗಿಸುವಲ್ಲಿ ಕಲೆಯ ಜವಾಬ್ದಾರಿ ಹೆಚ್ಚಿದೆ ಎಂದು ಖ್ಯಾತ ಸಾಹಿತಿ ಜಯಂತ್ ಕಾಯ್ಕಿಣಿ ಅಭಿಪ್ರಾಯಪಟ್ಟರು.

ಬಸವಣ್ಣನವರ ವಚನ ‘ಇವ ನಮ್ಮವ ಇವ ನಮ್ಮವ’ ಆಶಯದ ಶೀರ್ಷಿಕೆಯಡಿ ಮಾ.11ರವರೆಗೆ ಮೈಸೂರು ರಂಗಾಯಣದಲ್ಲಿ ಹಮ್ಮಿಕೊಂಡಿರುವ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವಕ್ಕೆ ವನರಂಗದಲ್ಲಿ ಗುರುವಾರ ಪರದೆ ಸರಿಸಿ, ಬಸವಣ್ಣ ಸೇರಿದಂತೆ ಶಿವಶರಣರ ವೇಷಧಾರಿಗಳನ್ನು ಅನಾವರಣಗೊಳಿಸುವ ಮೂಲಕ ಚಾಲನೆ ನೀಡಿ ಕಾಯ್ಕಿಣಿ ಮಾತನಾಡಿದರು.

ವಾಟ್ಸಪ್ ಸೇರಿದಂತೆ ಸಾಮಾಜಿಕ ಜಾಲತಾಣಗಳ ಭರಾಟೆಯಲ್ಲಿ ಮನುಷ್ಯರಿಗೆ ಮನುಷ್ಯರೇ ಬೇಕಿಲ್ಲದ ಕಾಲದಲ್ಲಿದ್ದೇವೆ. ಗುಡ್ ಮಾರ್ನಿಂಗ್ ಸಂದೇಶ ಕಳುಹಿಸುವವರು ಎದುರಿಗೆ ಸಿಕ್ಕರೆ ನಗುವನ್ನೂ ಕೊಡುವುದಿಲ್ಲ. ಈ ಯುಗದಲ್ಲಿ ಜಗತ್ತೇ ಒಂದು ಮನೆ ಎನ್ನುತ್ತೇವೆ. ಆದರೆ ಮನೆಯವರಿಗೆ ಮನೆಯವರೇ ಬೇಕಿಲ್ಲ ಎನ್ನುವಂತಾಗಿದೆ. ಇಂತಹ ಸನ್ನಿವೇಶದಲ್ಲಿ ಜನಮಾನಸದೊಂದಿಗೆ ಒಂದಾಗಲು ಕಲೆ ಹೆಚ್ಚಿನ ಜವಾಬ್ದಾರಿ ವಹಿಸಬೇಕಿದೆ ಎಂದು ತಿಳಿಸಿದರು.

ಮಮತೆ–ಸಮತೆಗಿಂತ ಆಧ್ಯಾತ್ಮವಿಲ್ಲ: ಮಮತೆ ಮತ್ತು ಸಮತೆಗಿಂತ ಮಿಗಿಲಾದ ಯಾವ ಆಧ್ಯಾತ್ಮವೂ ಇಲ್ಲ. ಅದಕ್ಕೇನು ಕಷ್ಟಪಡಬೇಕಾಗಿಲ್ಲ, ಅತ್ಯಂತ ಸರಳ ತತ್ವಜ್ಞಾನವದು. ನಮ್ಮ ಸಮಾಜ ಎನ್ನುವುದು ಒಂದೇ ಕಂಬದ ಮೇಲೆ ನಿಂತಿಲ್ಲ. ಅದು ಸಾವಿರ ಕಂಬಗಳ ಚಪ್ಪರವೆಂದು ನಮ್ಮ ತಂದೆ ಹೇಳುತ್ತಿದ್ದರು. ಅಂತೆಯೇ ಇಲ್ಲಿ ಒಂದು ದುರ್ಬಲ ಮತ್ತೊಂದು ಪ್ರಬಲ ಇರಬಹುದಾದರೂ ಪ್ರತಿ ಕಂಬವೂ ಬಹಳ ಅನುಪಮ. ನಮ್ಮ ವಿಕಾಸ ಪಥ ಹಾವು ಏಣಿಗಳಿಂದ ಕೂಡಿದೆ (ಹಾವು ಏಣಿ ಆಟ). ನಮ್ಮ ಮೂಢ ನಂಬಿಕೆ, ಅಸಮಾನತೆ, ಅನಕ್ಷರತೆ ಈ ಎಲ್ಲಾ ಹಾವುಗಳು ನಮ್ಮ ವಿಕಾಸ ಪಥದಲ್ಲಿ ಇದ್ದು, ಇವುಗಳ ನಡುವೆ ನಮಗೆ ದಾಸರು, ವಚನಕಾರರು, ಚಿಂತಕರು, ದಾರ್ಶನಿಕರು ಏಣಿಯಾಗಿ ಮುನ್ನಡೆಸಿದ್ದಾರೆ. ಅಂತಿಮ ಗುರಿ ತಲುಪುವ ವೇಳೆಗೆ ದಾಳಿಗೆ



ಮೈಸೂರು ರಂಗಾಯಣದ ವನರಂಗದಲ್ಲಿ ಬಸವಣ್ಣ ಮತ್ತು ಶರಣರ ವೇಷಧಾರಿಗಳನ್ನು ಪರದೆ ಸರಿಸಿ, ಅನಾವರಣಗೊಳಿಸುವ ಮೂಲಕ ಬಹುರೂಪಿ ನಾಟಕೋತ್ಸವಕ್ಕೆ ಸಾಹಿತಿ ಜಯಂತ್ ಕಾಯ್ಕಿಣಿ ಚಾಲನೆ ನೀಡಿದರು.

ಸಿಲುಕಿದರೆ ದೊಡ್ಡ ಹಾವು ತಳ ಮಟ್ಟಕ್ಕೆ ತಂದು ಕೂರಿಸುತ್ತದೆ. ಅಂದರೆ ನಾವು ಇಷ್ಟು ಮುಂದೆ ಬಂದಿದ್ದು, ಜಾಗರೂಕತೆ ಇಲ್ಲವಾದರೆ ಮತ್ತೆ ಹಿಂದಕ್ಕೆ ಹೋಗಬೇಕಾಗುತ್ತೆ ಎಂದು ಎಚ್ಚರಿಸಿದರು.

ಇಲ್ಲಿ ಬಂದರೆ ಬಿ.ವಿ.ಕಾರಂತರ ನೆನಪಾಗುತ್ತದೆ. 20 ವರ್ಷಗಳ ಹಿಂದೆ ನಾನು ಅವರನ್ನು ಒಂದು ಕಾರ್ಯಕ್ರಮದಲ್ಲಿ ಭೇಟಿ ಆಗಿದ್ದೆ. ಆಗ ಅವರು ನನ್ನ ನಾಟಕವೊಂದನ್ನು ನೋಡಿ ಖುಷಿಯಾಯಿತು ಎಂದರು. ಆಗ ಯಾವುದಕ್ಕೆ ಖುಷಿಯಾಯಿತೆಂದು ಕೇಳಿದೆ. ಅದಕ್ಕವರು ‘ಅರ್ಪಣೆ ಪುಟ’ ತುಂಬ ಇಷ್ಟವಾಯಿತು ಎಂದರು. ಏಕೆಂದರೆ ನಾಟಕವನ್ನು ಗೋಕರ್ಣದ ಶಿವರಾತ್ರಿ ಜಾತ್ರೆಗೆ ಬಂದ ಎಲ್ಲಾ ಕಂಪನಿ ನಾಟಕಗಳಿಗೆ ಅರ್ಪಣೆ ಎಂದು ಮಾಡಿದ್ದೆ ಎಂದು ಹಾಸ್ಯ ಪ್ರಸಂಗವೊಂದನ್ನು ತಿಳಿಸಿ ಸಭಿಕರಲ್ಲಿ ಕಚಗುಳಿ ಇಟ್ಟರಲ್ಲದೆ, ನಮಗೆ ನಾಟಕದ ಹುಚ್ಚು ಬೆಳೆದಿದ್ದೇ ಗೋಕರ್ಣದ ಶಿವರಾತ್ರಿ ಜಾತ್ರೆಯಲ್ಲಿ. ಇಲ್ಲಿ ಅದ್ಭುತ ಕಂಪನಿಗಳ ನಾಟಕಗಳು ಪ್ರದರ್ಶನಗೊಳ್ಳುತ್ತಿದ್ದವು. ಜಾತ್ರೆ ಎನ್ನುವುದು ಸಮಾಜ ಎಂಬ ಕುಟುಂಬದ ಒಂದು ಆಚರಣೆ. ಹೀಗಾಗಿ ನನ್ನ ಬಹುತೇಕ ಕಥೆಗಳಲ್ಲಿ ಜಾತ್ರೆಯ ಸನ್ನಿವೇಶ ಇರುತ್ತದೆ ಎಂದರು.

ಸಾಮಾಜಿಕ ಋಣದ ಆಚರಣೆಯೇ ಕಲೆ: ಪ್ರಸ್ತುತ ಬೇಡದ ಅಪಸ್ವರಗಳು ನಮ್ಮ ಸಮಾಜವನ್ನು ಕಿತ್ತು ತಿನ್ನುತ್ತಿವೆ. ಸಾಮಾಜಿಕ ಋಣ ಎಂಬುದು ಚಂದವಾದ ಋಣ. ಆಸ್ಪತ್ರೆಯಲ್ಲಿ ಒಬ್ಬರಿಗೆ ಸಹಾಯ ಮಾಡುವುದೂ ಒಂದು ಸಾಮಾಜಿಕ ಋಣ. ಸಾಮಾಜಿಕ ಋಣವೇ ನಮ್ಮ ಅಸಲಿಯತ್ತು. ಇಲ್ಲಿ ಜಾತಿ, ಮತ, ಧರ್ಮದಂತಹ ಯಾವ ಕಸವೂ ಇರುವುದಿಲ್ಲ. ಅಂತಹ ಒಂದು ಸಾಮಾಜಿಕ ಋಣದ ಆಚರಣೆಯೇ ಕಲೆ ಎಂದರು.

ಕಲೆ–ಕಾವ್ಯ ಏನೇ ಇರಲಿ ಅವು ನಮ್ಮ ಸಮಾಜದ ಕಾರ್ಡಿಯೋಗ್ರಾಮ್, ಇಸಿಜಿ ಇದ್ದಂತೆ. ಛದ್ಮವೇಷ ಅಂದರೆ ಅಣಕ ಮಾಡುವ ಕಲೆ. ಎಲ್ಲಾ ಕಲೆಯೂ ಅಣಕವೇ. ನಾವು ತುಂಬ ಪ್ರೀತಿಸುವವರನ್ನೇ ಅಣಕ ಮಾಡುವುದೇ ಹೆಚ್ಚು ಇಡೀ ಕಲೆ ಆ ತರದ ಮೊದಲಿಕೆಯಲ್ಲಿ ಇರುತ್ತದೆ. ಈ ಒಂದು ಛದ್ಮವೇಷವನ್ನೇ ದಾರ್ಶನಿಕ ನೆಲೆಯ ಸ್ಪರ್ಶ ನೀಡಿದ್ದು ಚಾರ್ಲಿ ಚಾಪ್ಲಿನ್. ಅವನ ಚಿತ್ರಗಳನ್ನು ನೋಡಿದರೆ ನಮ್ಮ ತಲೆ ಸ್ವಚ್ಛವಾಗುತ್ತದೆ. ಚಾರ್ಲಿ ಚಾಪ್ಲಿನ್ ಅವರಂತಹ ಮೈಲಿಗಲ್ಲುಗಳನ್ನು ನೋಡಿ ನಾವು ಮುನ್ನಡೆಯಬೇಕು. ಆ ಮೂಲಕ

ವಿನೂತನ ಉದ್ಘಾಟನೆ

ವಿವಿಧ ಜನಪದ ಕಲಾ ಪ್ರದರ್ಶನದ ಮೆರಗಿನೊಂದಿಗೆ ವನರಂಗ ವೇದಿಕೆಗೆ ಅತಿಥಿಗಣ್ಯರನ್ನು ಕರೆತರಲಾಯಿತು. ವನರಂಗದಲ್ಲಿ ಜಯಂತ್ ಕಾಯ್ಕಿಣಿಯವರು ಪರದೆ ಸರಿಸಿ, ಬಸವಣ್ಣ ಸೇರಿದಂತೆ ಶರಣರ ಪಾತ್ರಧಾರಿಗಳನ್ನು (ವೇಷಧಾರಿ) ಅನಾವರಣಗೊಳಿಸಿ ಉದ್ಘಾಟಿಸಿದರು. ಈ ವೇಳೆ ಪರದೆಯೊಳಗಿಂದ ಹೊರ ಬಂದ ಬಸವಣ್ಣನವರ ವೇಷಧಾರಿ ‘ಇವನಾರವ, ಇವನಾರವ, ಇವನಾರವನೆಂದೆನಿಸದಿರಯ್ಯ... ಇವ ನಮ್ಮವ, ಇವ ನಮ್ಮವ, ಇವನಮ್ಮವನೆಂದೆನಿಸಯ್ಯ’ ಎಂಬ ವಚನ ಹೇಳುತ್ತಾ ಗಣ್ಯರು, ಸಾರ್ವಜನಿಕರಿಗೆ ವಚನಗಳ ಕಿರು ಪುಸ್ತಕ ಹಂಚಿದರು. ಅವರ ಹಿಂದೆ ಅನೇಕ ಶರಣರ ವೇಷಧಾರಿಗಳು ಹೊರ ಬಂದು ವಚನಗಳನ್ನು ಉಚ್ಚರಿಸಿದರು.

ನಮ್ಮ ಆತ್ಮಸಾಕ್ಷಿ ಸರಿ ಇದೆಯೋ ಇಲ್ಲವೋ ಎಂದು ನೋಡಿಕೊಳ್ಳಬೇಕು. ಆತ್ಮವನ್ನು ಕೇವಲ ಒಬ್ಬ ವ್ಯಕ್ತಿಗೆ ಸಂಬಂಧಿಸಿದ್ದು ಎಂದು ತಿಳಿದುಕೊಳ್ಳುತ್ತೇವೆ. ಆದರೆ ಅದು ಎಲ್ಲರಲ್ಲಿಯೂ ಹಂಚಿ ಹೋಗಿ ರುತ್ತದೆ. ಸಮೂಹ ಆತ್ಮ ಅದು. ಒಳಗೊಳ್ಳುವಿಕೆಗೆ ಸಂಬಂಧಿಸಿದ್ದು ಅದು ಎಂದು ವಿಶ್ಲೇಷಿಸಿದರು.

ಇದಕ್ಕೂ ಮುನ್ನ ಬಹುರೂಪಿ ರಂಗಸಂಚಿಕೆಯನ್ನು ಎಡಿಸಿ ಡಾ.ಶಿವರಾಜ್ ಬಿಡುಗಡೆ ಮಾಡಿದರು. ಇದೇ ವೇಳೆ ಕುಂಬಾರಿಕೆ, ಬಿದಿರು ಪರಿಕರಗಳೂ ಸೇರಿದಂತೆ ಕಾಯಕ ಸಂಸ್ಕೃತಿ ಬಿಂಬಿಸುವ ಸಾಮಗ್ರಿಗಳ ಹಲವು ಮಳಿಗೆಗಳು, ಹಿರಿಯ ಚಿತ್ರಕಲಾವಿದ ಎಲ್. ಶಿವಲಿಂಗಪ್ಪ ರಚಿತ ಬಸವಣ್ಣನವರ ವಚನಾಧಾರಿತ ಚಿತ್ರಕಲೆಗಳ ಮಳಿಗೆ, ಅಂದಿನ ಮೈಸೂರು ಸಂಸ್ಥಾನದಲ್ಲಿನ ನಾಟಕ ಪರಂಪರೆ ಕುರಿತ ಪತ್ರ ವ್ಯವಹಾರಗಳ ಛಾಯಾ ಚಿತ್ರ ಪ್ರದರ್ಶನ ಮಳಿಗೆಗಳನ್ನು, ಶಾಸಕ ಕೆ.ಹರೀಶ್ ಗೌಡ ಉದ್ಘಾಟಿಸಿ, ಸಮಾರಂಭ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಬಹುರೂಪಿ ನಾಟಕೋತ್ಸವದ ಸಂಚಾಲಕರೂ ಆದ ಹಿರಿಯ ರಂಗಕರ್ಮಿ ಪ್ರೊ.ಹೆಚ್.ಎಸ್.ಉಮೇಶ್, ರಂಗಾಯಣ ಉಪ ನಿರ್ದೇಶಕಿ ನಿರ್ಮಲ ಮಠಪತಿ ಮತ್ತಿತರರು ಹಾಜರಿದ್ದರು.

ಒಂದೆಡೆ ಅಸ್ಪೃಶ್ಯತೆ ಕರಾಳತೆ... ಮತ್ತೊಂದೆಡೆ ಶರೀಫರ ಆಧ್ಯಾತ್ಮ ಚಿಂತನೆಯ ಸಂದೇಶ



ಕಿರುರಂಗಮಂದಿರದಲ್ಲಿ ಪ್ರದರ್ಶನಗೊಂಡ ‘ಲೋಕದ ಒಳಹೊರಗೆ’ ನಾಟಕದ ಸನ್ನಿವೇಶ



ಭೂಮಿಗೀತ ವೇದಿಕೆಯಲ್ಲಿ ಪ್ರದರ್ಶನಗೊಂಡ ಮುಟ್ಟಿಸಿಕೊಂಡವನು ನಾಟಕ ದೃಶ್ಯ

ಮೈಸೂರು, ಮಾ.7(ಎಂಕೆ)– ಪಾಶ್ಚಾತ್ಯ ಸಂಸ್ಕೃತಿಯೊಳಗಿನ ತೊಳಲಾಟ, ಸಾಮಾಜಿಕ ಅನಿಷ್ಟವೆನಿಸಿದ ಅಸ್ಪೃಶ್ಯತೆಯ ಆಚರಣೆ ಹಾಗೂ ಶಿಶುನಾಳ ಶರೀಫರ ಆಧ್ಯಾತ್ಮ ಚಿಂತನೆಗಳ ಅನಾವರಣ...!

ಮೈಸೂರು ರಂಗಾಯಣದಲ್ಲಿ ಆಯೋಜಿಸಿರುವ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಮೊದಲ ದಿನ ಪ್ರದರ್ಶನಗೊಂಡ ಸುಪ್ರಸಿದ್ಧ ನಾಟಕಗಳು ಪಾಶ್ಚಾತ್ಯ ಸಂಸ್ಕೃತಿಯ ಪರ–ವಿರೋಧದ ನಿಲುವುಳ್ಳವರ ನಡುವೆ ಸಿಕ್ಕಿಕೊಂಡ ಮಹಿಳೆಯೊಬ್ಬರ ತೊಳಲಾಟ, ಜಾತಿಯ ಸುಳಿಯಲ್ಲಿ ಸಿಲುಕಿಕೊಂಡ ಮೂವರ ಹೀನಾಯ ಪರಿಸ್ಥಿತಿಯನ್ನು ಮನಮುಟ್ಟುವಂತೆ ತಿಳಿಸುವುದರ ನಡುವೆ ಸಂತ ಶಿಶುನಾಳ ಶರೀಫರ ಸಂದೇಶಗಳು ರಂಗಾಸಕ್ತರ ಮನಮುಟ್ಟಿದವು.

ಕಿರುರಂಗಮಂದಿರ ವೇದಿಕೆಯಲ್ಲಿ ರವೀಂದ್ರನಾಥ ಟಾಗೋರ್ ರಚಿತ, ಬಿ.ಸುರೇಶ್ ಅವರ ನಿರ್ದೇಶನ ಮತ್ತು ರಂಗರೂಪ ಪಡೆದ ‘ಲೋಕದ ಒಳಹೊರಗೆ’ ನಾಟಕವನ್ನು ಬೆಂಗಳೂರಿನ ರಂಗಸಂಪದ ಕಲಾವಿದರು ತಮ್ಮ ಅಚ್ಚುಕಟ್ಟು ಅಭಿನಯದ ಮೂಲಕ ಪ್ರೇಕ್ಷಕರ ಮನ ಗೆದ್ದರು. ಪಾಶ್ಚಾತ್ಯ ಸಂಸ್ಕೃತಿ ಮತ್ತು ಅದರ ವಿರುದ್ಧ ಕ್ರಾಂತಿಯ ಸನ್ನಿವೇಶಗಳನ್ನು ಬಿಚ್ಚಿಡುವ ನಾಟಕದಲ್ಲಿನ ಪ್ರಧಾನ ಪಾತ್ರಗಳಾದ ಸಿದ್ಧಾರ್ಥ ಪಾಶ್ಚಾತ್ಯ ಸಂಸ್ಕೃತಿಯನ್ನು ಮೆಚ್ಚಿಕೊಂಡರೆ, ಇಂದ್ರಜಿತ್ ಆ ಸಂಸ್ಕೃತಿಯನ್ನು ವಿರೋಧಿಸುತ್ತಾನೆ. ಇವರಿಬ್ಬರ ನಡುವೆ ಸಿಕ್ಕಿಬಿದ್ದ ಶಾರದೆ ಅನುಭವಿಸುವ ಉಬ್ಬರವಿಳಿತಗಳು ಈ ನಾಟಕದ ತಿರುಳಾಗಿದ್ದವು. ಎಲ್ಲರನ್ನೂ ಪ್ರೀತಿಯಿಂದ ಗೆದ್ದು ಆರೋಗ್ಯವಂತ ಸಮಾಜ ಕಟ್ಟಲು ಸಾಧ್ಯವೆಂಬುದನ್ನು ನಾಟಕದ ಮೂಲಕ ತೋರಿಸಲಾಯಿತು.

ಮುಟ್ಟಿಸಿಕೊಂಡವನು: ಭೂಮಿಗೀತ ವೇದಿಕೆಯಲ್ಲಿ ಪಿ.ಲಂಕೇಶ್ ರಚಿತ, ಕೆ.ಆರ್. ನಂದಿನಿ ರಂಗರೂಪ ಮತ್ತು ನಿರ್ದೇಶನದಲ್ಲಿ ಪ್ರದರ್ಶನಗೊಂಡ ‘ಮುಟ್ಟಿಸಿಕೊಂಡವನು’ ನಾಟಕ ಅಸ್ಪೃಶ್ಯತೆಯ ಕರಾಳತೆಯನ್ನು ತೆರೆದಿಟ್ಟಿತು. ಮೈಸೂರು ರಂಗಾಯಣ ರೆಪರ್ಟರಿ ಕಲಾವಿದರ ಅಮೋಘ ಅಭಿನಯದ ನಡುವೆ ಎಲ್ಲಾ ಕ್ಷುದ್ರತೆಯನ್ನು ಗೆಲ್ಲುವುದು ಒಳ್ಳೆಯತನವೇ ಎಂಬುದನ್ನು ಸಾಬೀತುಪಡಿಸಲಾಯಿತು.

ಶಿಶುನಾಳ ಶರೀಫ: ಚಿಂದೋಡಿ ಎಲ್ ಚಂದ್ರಧರ ಅವರ ನಿರ್ದೇಶನದಲ್ಲಿ ದಾವಣಗೆರೆ ಕೆ.ಬಿ.ಆರ್ ಡ್ರಾಮಾ ಕಂಪನಿ ಪ್ರಸ್ತುತಪಡಿಸಿದ ಪದ್ಮಶ್ರೀ ಚಿಂದೋಡಿ ಲೀಲಾರವರ ‘ಶಿಶುನಾಳ ಶರೀಫ’ ನಾಟಕ ಸಂತ ಶಿಶುನಾಳ ಶರೀಫರ ಜೀವನ ಚಿತ್ರಣವನ್ನು ಪರಿಚಯ ಮಾಡಿಕೊಟ್ಟಿತು. ದೇವಕಾರ ಮನೆತನದಲ್ಲಿ ಜನಿಸುವ ಶಿಶುನಾಳ ಶರೀಫರ ಅಧ್ಯಯನ, ವಚನ ಸಾಹಿತ್ಯದ ಕಲಿಕೆ, ಆಧ್ಯಾತ್ಮ ಚಿಂತನೆ, ಅವರ ಕಾವ್ಯಗಳಲ್ಲಿ ತುಂಬಿದ್ದ ಅಲೌಕಿಕ ಪರಿಜ್ಞಾನ ಸೇರಿದಂತೆ ಅವರ ಜೀವನದ ನಿತ್ಯ ಘಟನೆಗಳೊಂದಿಗೆ ಸಾಮಾಜಿಕ ರೀತಿ–ನೀತಿ, ಹಾವ–ಭಾವ, ಬೆಡಗು–ಬಿನ್ನಾಣಗಳನ್ನು ಒಪ್ಪಿಟ್ಟು ಭಕ್ತಿರಸದೊಂದಿಗೆ ಹಾಡಿ ಶರೀಫರ ಸ್ಮರಣೆ ಮಾಡಲಾಯಿತು.

5ನೇ ಟೆಸ್ಟ್: ಭಾರತ ಮೇಲುಗೈ



ಧರ್ಮಶಾಲಾ, ಮಾ.7– ಕುಲದೀಪ್ ಯಾದವ್, ರವಿಚಂದ್ರನ್ ಅಶ್ವಿನ್ ಅವರ ಸ್ಪಿನ್ ಮೋಡಿ ನೆರವಿನಿಂದ ಭಾರತ 5ನೇ ಟೆಸ್ಟ್ ಪಂದ್ಯದ ಮೊದಲ ದಿನ ಇಂಗ್ಲೆಂಡ್ ವಿರುದ್ಧ ಮೇಲುಗೈ ಸಾಧಿಸಿದೆ. ಇಲ್ಲಿನ ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ 57.4 ಓವರ್‌ಗಳಲ್ಲಿ 218 ರನ್‌ಗೆ ಆಲೌಟಾಯಿತು. ಇಂಗ್ಲೆಂಡ್ ಪರ ಝ್ಯಾಕ್ ಕ್ರಾವ್ಲಿ 79, ಬೆನ್ ಡಕೆಟ್ 27, ಜೋ ರೂಟ್ 26, ಜಾನಿ ಬೈರ್‌ಸ್ಟೋವ್ 29, ಬೆನ್ ಫೋಕ್ಸ್ 24 ರನ್ ಗಳಿಸಿದರು. ಭಾರತರ ಪರ ಕುಲದೀಪ್ ಯಾದವ್ 5, ಅಶ್ವಿನ್ 4, ಜಡೇಜಾ 1 ವಿಕೆಟ್ ಪಡೆದರು.

ಬಳಿಕ ಪ್ರಥಮ ಇನ್ನಿಂಗ್ಸ್ ಆರಂಭಿಸಿದ ಭಾರತ ಮೊದಲ ದಿನದಾಟದ ಅಂತ್ಯಕ್ಕೆ 30 ಓವರ್‌ಗಳಿಗೆ 1 ವಿಕೆಟ್ ನಷ್ಟಕ್ಕೆ 135 ರನ್ ಕಲೆ ಹಾಕಿದ್ದು, ಇನ್ನು 83 ರನ್‌ಗಳ ಹಿನ್ನಡೆಯಲ್ಲಿದೆ. ಜೈಸ್ವಾಲ್ 57 ರನ್ ಗಳಿಸಿ ನಿರ್ಗಮಿಸಿದರೇ, ರೋಹಿತ್ ಶರ್ಮಾ 52, ಶುಭ್‌ಮನ್ ಗಿಲ್ 26 ರನ್ ಗಳಿಸಿ 2ನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ. ಇಂಗ್ಲೆಂಡ್ ಪರ ಶೋಯೆಬ್ ಬಶೀರ್ 1 ವಿಕೆಟ್ ಕಬಳಿಸಿದರು.

ಮನೋಜ್ಞ ಸಂಗೀತ, ನೃತ್ಯದ ನಡುವೆ ‘ಇವ ನಮ್ಮವ... ಇವ ನಮ್ಮವ’ ನಿಗೆ ಆಹ್ವಾನ



ರಂಗಾಯಣ ಎದುರು ‘ಧಂಗರಿ ಗಜ’ ನೃತ್ಯ ಪ್ರದರ್ಶನ ನೀಡಿದ ಮಹಾರಾಷ್ಟ್ರದ ಕಲಾವಿದರ ನಡುವೆ ಸಾಹಿತಿ ಜಯಂತ್ ಕಾಯ್ಕಿಣಿ ಅವರನ್ನು ಕಾಣಬಹುದು

ಮೈಸೂರು, ಮಾ.7(ಎಂಕೆ)– ಕಂಸಾಳೆ ನೃತ್ಯ, ಚಂಡೆ ವಾದನ, ಗಾರುಡಿ ಗೊಂಬೆ, ನಾದಸ್ವರ, ಧಂಗರಿ ಗಜ ಹಾಗೂ ಗುಡುಂ ಬಾಜ ಜಾನಪದ ನೃತ್ಯಗಳ ಮೂಲಕ ಇವ ಬೇರ್‍ಯಾರು ಅಲ್ಲ... ‘ಇವ ನಮ್ಮವ.. ಇವ ನಮ್ಮವ...’ ಶೀರ್ಷಿಕೆಯ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವಕ್ಕೆ ಭವ್ಯ ಸ್ವಾಗತ ಕೋರಲಾಯಿತು.

ಮದುವಣಗಿತ್ತಿಯಂತೆ ಸಿಂಗಾರಗೊಂಡಿರುವ ರಂಗಾಯಣದಲ್ಲಿ ಜಾನಪದ ನೃತ್ಯ ಪ್ರಕಾರಗಳ ಮೂಲಕ ಉದ್ಘಾಟನಾ ಕಾರ್ಯಕ್ರಮಕ್ಕೆ ವಿಶೇಷ ಸೊಬಗನ್ನು ನೀಡಲಾಯಿತು. ರಂಗಾಯಣದ ಮುಖ್ಯದ್ವಾರದಲ್ಲಿ ದೇಶಿ ನೃತ್ಯ ಪ್ರದರ್ಶನ ನೀಡಿದ ಜಾನಪದ ಕಲಾವಿದರು, ಸಡಗರ–ಸಂಭ್ರಮವನ್ನು ಇಮ್ಮಡಿಗೊಳಿಸಿದರು. ಮಹಾರಾಷ್ಟ್ರದ ಸ್ವಾಪ ಬಂಢ್ಗರ್ ಮತ್ತು ತಂಡದ ‘ಧಂಗುರಿ ಗಜ’, ಮಧ್ಯಪ್ರದೇಶದ ಮಾಯಾರಾಂ ದುರ್ಬೆ ಮತ್ತು ತಂಡದ ‘ಗುಡುಂ ಬಾಜ’, ಮೈಸೂರಿನ ಗುರು ಮತ್ತು ತಂಡದ ‘ಚಂಡೆ ವಾದನ’, ಚಾಮರಾಜನಗರದ ನಾಗರಾಜು ಮತ್ತು ತಂಡದ ‘ಕಂಸಾಳೆ’, ಚನ್ನರಾಯಪಟ್ಟಣದ ರಾಧಮ್ಮ ಮತ್ತು ತಂಡದ ‘ನಾದಸ್ವರ’ ಹಾಗೂ ಅರಸೀಕೆರೆಯ ಜಯರಾಂ ಮತ್ತು ತಂಡದ ‘ಗಾರುಡಿ ಗೊಂಬೆ’ಯ ಅತ್ಯಾಕರ್ಷಕ ನೃತ್ಯದ ಮೂಲಕ ಬಹುರೂಪಿ ನಾಟಕೋತ್ಸವದ ಉದ್ಘಾಟನೆಗೆ ವೇದಿಕೆ ಕಲ್ಪಿಸಲಾಯಿತು.

ಬಳಿಕ ಕಿಂದರಿಜೋಗಿ ವೇದಿಕೆಯಲ್ಲೂ ತಮ್ಮ ಜಾನಪದ ಕಲಾ ಪ್ರದರ್ಶನ ನೀಡಿದ ಕಲಾವಿದರು ಕಲಾಪ್ರೇಮಿಗಳ ಮನ ಗೆದ್ದರು. ತಮ್ಮ ಕಲಾ ಪ್ರೌಢಿಮೆ ಮೂಲಕವೇ ರಂಗಾಸಕ್ತರನ್ನು ಸೆಳೆದ ಜಾನಪದ ಕಲಾವಿದರು ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಮೊದಲ ದಿನವೇ ಹೊಸ ಮೆರಗು ನೀಡಿದರು. ನಂತರ ಕಲಾವಿದರಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಇಂಪು ನೀಡಿದ ರಂಗಸಂಗೀತ: ವನರಂಗ ವೇದಿಕೆಯಲ್ಲಿ ರಂಗಭೂಮಿ ಹಿರಿಯ ಕಲಾವಿದ ವೈ.ಎಂ.ಪುಟ್ಟಣ್ಣಯ್ಯ ನೇತೃತ್ವದಲ್ಲಿ ನಡೆದ ರಂಗಸಂಗೀತ ಮತ್ತು ವಚನ ಗಾಯನ ಕೇಳುಗರ ಮನಕ್ಕೆ ಇಂಪು ನೀಡಿತು. ಅವಳಿ ಸಹೋದರಿಯರಾದ ನಿಸರ್ಗ ಮತ್ತು ವಿಸ್ಮಯ, ಭ್ರಮರ ಮತ್ತು ಸುಪ್ರೀತ್ ಹತ್ತು–ಹಲವು ರಂಗಗೀತೆ ಹಾಗೂ ವಚನಗಳನ್ನು ಸುಶ್ರಾವ್ಯವಾಗಿ ಹಾಡುವ ಮೂಲಕ ಗಮನ ಸೆಳೆದರು. ವಾದ್ಯ ಪರಿಕರಗಳಲ್ಲಿ ರಾಮು, ಜಯರಾಂ ಇನ್ನಿತರರು ಉತ್ತಮ ಸಹಕಾರ ನೀಡಿದರು.

ಮೈಸೂರು ಮಿತ್ರ ಶುಕ್ರವಾರ 8 ಮಾರ್ಚ್ 2024

370ನೇ ವಿಧಿ ಬಗ್ಗೆ ಕಾಂಗ್ರೆಸ್, ಮಿತ್ರಪಕ್ಷಗಳು ಕಾಶ್ಮೀರ ಜನರ ದಾರಿ ತಪ್ಪಿಸುತ್ತಿವೆ



ಶ್ರೀನಗರ: 2019 ರಲ್ಲಿ 370ನೇ ವಿಧಿಯನ್ನು ರದ್ದುಗೊಳಿಸಿದ ನಂತರ ಮೊದಲ ಬಾರಿ ಜಮ್ಮು ಮತ್ತು ಕಾಶ್ಮೀರಕ್ಕೆ ಭೇಟಿ ನೀಡಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ವಿಶೇಷ ಸ್ಥಾನಮಾನದ ಬಗ್ಗೆ ಕಾಶ್ಮೀರ ಜನರ ದಾರಿ ತಪ್ಪಿಸಿದ್ದವು ಎಂದು ಗುರುವಾರ ಪ್ರತಿಪಕ್ಷಗಳ ವಿರುದ್ಧ ವಾಗ್ದಾಳಿ ನಡೆಸಿದರು.

ಇಂದು ಶ್ರೀನಗರದ ಬಕ್ಷಿ ಕ್ರೀಡಾಂಗಣದಲ್ಲಿ ಸಾರ್ವಜನಿಕ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, 2019 ರಲ್ಲಿ ಸಂವಿಧಾನದ 370 ನೇ ವಿಧಿಯನ್ನು ರದ್ದುಗೊಳಿಸಿದ ನಂತರ ಜಮ್ಮು ಮತ್ತು ಕಾಶ್ಮೀರವು ಅಭಿವೃದ್ಧಿಯ ಹೊಸ ಮೈಲಿಗಲ್ಲು ತಲುಪಿದೆ. ಇಲ್ಲಿನ ಜನ ಈಗ ಮುಕ್ತವಾಗಿ ಉಸಿರಾಡುತ್ತಿದ್ದಾರೆ ಎಂದರು.

ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು 370ನೇ ವಿಧಿಗೆ ಸಂಬಂಧಿಸಿದಂತೆ ಹಲವು ವರ್ಷಗಳಿಂದ "ಜಮ್ಮು ಮತ್ತು ಕಾಶ್ಮೀರದ ಜನರನ್ನು ಮಾತ್ರವಲ್ಲದೆ ಇಡೀ ದೇಶವನ್ನೇ ದಾರಿ ತಪ್ಪಿಸುತ್ತಿವೆ" ಎಂದು ಮೋದಿ ಆರೋಪಿಸಿದರು. ಜಮ್ಮು ಮತ್ತು ಕಾಶ್ಮೀರ ದೇಶದ ಕಿರೀಟ ಎಂದು ಬಣ್ಣಿಸಿದ ಪ್ರಧಾನಿ, ಪ್ರವಾಸೋದ್ಯಮ ಮತ್ತು ರೈತರ ಸಬಲೀಕರಣದಿಂದ ಅಭಿವೃದ್ಧಿ ಹೊಂದಿದ ಜಮ್ಮು ಮತ್ತು ಕಾಶ್ಮೀರ ನಿರ್ಮಾಣವಾಗುತ್ತಿದೆ ಎಂದು ಹೇಳಿದರು.

ಈ ಹೊಸ ಜಮ್ಮು ಕಾಶ್ಮೀರಕ್ಕಾಗಿ ನಾವೆಲ್ಲರೂ ಹಲವು ದಶಕಗಳಿಂದ ಕಾಯುತ್ತಿದ್ದೆವು. ಈ ಹೊಸ ಜಮ್ಮು ಕಾಶ್ಮೀರಕ್ಕಾಗಿ ಡಾ.ಶ್ಯಾಮ ಪ್ರಸಾದ್ ಮುಖರ್ಜಿಯವರು ತಮ್ಮ ಪ್ರಾಣವನ್ನು ತ್ಯಾಗ ಮಾಡಿದ್ದರು. ಈ ಹೊಸ ಜಮ್ಮು ಮತ್ತು ಕಾಶ್ಮೀರದ ದೃಷ್ಟಿಯಲ್ಲಿ ಭವಿಷ್ಯವು ಹೊಳೆಯುತ್ತಿದೆ, ಸವಾಲುಗಳನ್ನು ಜಯಿಸುವ ಈ ಹೊಸ ಜಮ್ಮು ಮತ್ತು ಕಾಶ್ಮೀರದ ಉದ್ದೇಶಗಳಲ್ಲಿ ಧೈರ್ಯವಿದೆ ಎಂದು ಕೊಂಡಾಡಿದರು.



ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್‌ಗೆ ಭಾಜನರಾದ ಶ್ರೀ ಯೋಗಾನರಸಿಂಹಸ್ವಾಮಿ ದೇವಾಲಯದ ಸಂಸ್ಥಾಪಕ ಡಾ.ಭಾಷ್ಯಂ ಸ್ವಾಮೀಜಿ ಅವರನ್ನು ಶಾಸಕ ತನ್ವೀರ್ ಸೇಠ್ ಅಭಿನಂದಿಸಿದರು. ಈ ವೇಳೆ ಯೋಗಾನರಸಿಂಹ ಸ್ವಾಮಿ ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್, ಮುಖಂಡರಾದ ಟಿ.ಎಸ್. ರವಿಶಂಕರ್, ಡಾ.ಸುಜಾತ, ತಿವಾರಿ, ಅಶೋಕ್, ಯೋಗ ನರಸಿಂಹನ್ ಮತ್ತಿತರರಿದ್ದರು.

ವೇಶ್ಯಾವಾಟಿಕೆ ಸ್ಪಾ, ಲಾಡ್ಜ್ ಮೇಲೆ ಪೊಲೀಸರ ದಾಳಿ; 9 ಮಂದಿ ಮಹಿಳೆಯರ ರಕ್ಷಣೆ

ಮೈಸೂರು, ಮಾ.7– ಮೈಸೂರಿನಲ್ಲಿ ಸ್ಪಾ ಹಾಗೂ ಲಾಡ್ಜ್‌ನಲ್ಲಿ ನಡೆಯುತ್ತಿದ್ದ ವೇಶ್ಯಾವಾಟಿಕೆ ಅಡ್ಡೆ ಮೇಲೆ ಪೊಲೀಸರು ಪ್ರತ್ಯೇಕ ದಾಳಿ ನಡೆಸಿದ್ದಾರೆ.

ನಗರದ ವಿವಿ ಮೊಹಲ್ಲಾದಲ್ಲಿರುವ ಐರಿಸ್ ಸ್ಪಾ(IRIS SPA) ಮೇಲೆ ಗುರುವಾರ ಸಂಜೆ ಹಾಗೂ ವಿಜಯನಗರ 2ನೇ ಹಂತದ ಕರಣ್ ರೆಸಿಡೆನ್ಸಿ ಲಾಡ್ಜ್ ಮೇಲೆ ಬುಧವಾರ ಸಂಜೆ ದಾಳಿ ನಡೆಸಲಾಗಿದ್ದು, ಓರ್ವ ಮಧ್ಯವರ್ತಿಯನ್ನು ಬಂಧಿಸಲಾಗಿದೆ.

ಸ್ಪಾ ಹೆಸರಲ್ಲಿ ದಂಧೆ: ಸ್ಪಾ ಹೆಸರಲ್ಲಿ ವೇಶ್ಯಾವಾಟಿಕೆ ದಂಧೆ ನಡೆಸಲಾಗುತ್ತಿದೆ ಎಂಬ ಮಾಹಿತಿ ಮೇರೆಗೆ ಸಿಸಿಬಿ ಹಾಗೂ ವಿವಿ ಪುರಂ ಠಾಣೆ ಪೊಲೀಸರು ಗುರುವಾರ ಸಂಜೆ ಜಂಟಿ ಕಾರ್ಯಾಚರಣೆ ನಡೆಸಿದ್ದಾರೆ. ಈ ವೇಳೆ ವೇಶ್ಯಾವಾಟಿಕೆಗೆ ಬಳಸಿಕೊಳ್ಳುತ್ತಿದ್ದ ಹೊರರಾಜ್ಯದ ಐವರು ಮಹಿಳೆಯರನ್ನು ರಕ್ಷಿಸಿ, ಮೂವರು ಗ್ರಾಹಕರನ್ನು ವಶಕ್ಕೆ ಪಡೆದಿದ್ದಾರೆ. ಸ್ಪಾ ಮಾಲೀಕರ ವಿರುದ್ಧ ವಿವಿಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗ್ರಾಹಕರಿಗೆ ರೂಂ ಬುಕ್: ಮಹಿಳೆಯರನ್ನು ವೇಶ್ಯಾವಾಟಿಕೆಗೆ ಬಳಸಿಕೊಳ್ಳುತ್ತಿದ್ದ ವ್ಯಕ್ತಿಯೊಬ್ಬ, ಗ್ರಾಹಕರನ್ನು ಸಂಪರ್ಕಿಸಿ ದಂಧೆಗೆ ವಿಜಯನಗರದ ಕರಣ್ ಲಾಡ್ಜ್‌ನಲ್ಲಿ ರೂಂ ಬುಕ್ ಮಾಡಿಸಿಕೊಡುತ್ತಿದ್ದ ಎನ್ನಲಾಗಿದೆ. ಈ ಬಗ್ಗೆ ಮಾಹಿತಿ ತಿಳಿದ ವಿಜಯನಗರ ಠಾಣೆ ಪೊಲೀಸರು, ಬುಧವಾರ ಸಂಜೆ ಲಾಡ್ಜ್ ಮೇಲೆ ದಾಳಿ ನಡೆಸಿ, ನಾಲ್ವರು ಮಹಿಳೆಯರನ್ನು ರಕ್ಷಿಸಿ, ಪಿಂಪ್‌ನನ್ನು ಬಂಧಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಹೆಚ್ಚುವರಿ ವಿದ್ಯುತ್ ಮಂಜೂರಾತಿಗೆ ಲಂಚ

ಸೆಸ್ಕ್ ಇಂಜಿನಿಯರ್, ಲೈನ್‌ಮನ್ ಲೋಕಾಯುಕ್ತ ವಶಕ್ಕೆ



ಹರೀಶ್



ಗುಂಡಪ್ಪ

ಮೈಸೂರು, ಮಾ.7(ಎಸ್‌ಬಿಡಿ)– ಹೆಚ್ಚುವರಿ ಕಿಲೋ ವ್ಯಾಟ್ ವಿದ್ಯುತ್ ಸಂಪರ್ಕ ಕಲ್ಪಿಸಲು ಗುತ್ತಿಗೆದಾರನಿಂದ ಲಂಚ ಪಡೆಯುವಾಗ ಸೆಸ್ಕ್ ಸಹಾಯಕ ಇಂಜಿನಿಯರ್(ಎಇ) ಹಾಗೂ ಕಿರಿಯ ಲೈನ್‌ಮನ್ ಗುರುವಾರ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಮೈಸೂರು ಕುವೆಂಪುನಗರ ಉಪ ವಿಭಾಗದ ಎಇ ಜಿ.ಹರೀಶ್ ಹಾಗೂ ಕಿರಿಯ ಲೈನ್‌ಮನ್ ಗುಂಡಪ್ಪನನ್ನು ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಬೆಂಗಳೂರು ಮೂಲದ ಎಲೆಕ್ಟ್ರಿಕ್ ಗುತ್ತಿಗೆದಾರ ಅಭಿಷೇಕ್, ಮೈಸೂರಿನ ವಾಣಿಜ್ಯ ಕಟ್ಟಡವೊಂದಕ್ಕೆ ಹೆಚ್ಚುವರಿಯಾಗಿ 20 ಕಿಲೋ ವ್ಯಾಟ್ ವಿದ್ಯುತ್ ಒದಗಿಸಲು ಕೇಳಿಕೊಂಡಿದ್ದರು. ಆದರೆ ಇದಕ್ಕೆ 10 ಸಾವಿರ ರೂ. ಲಂಚ ನೀಡಬೇಕೆಂದು ಎಇ ಹರೀಶ್ ಬೇಡಿಕೆ ಇಟ್ಟಿದ್ದರಂತೆ. ಈ ಬಗ್ಗೆ ಗುತ್ತಿಗೆದಾರ ಅಭಿಷೇಕ್, ಮೈಸೂರು ಲೋಕಾಯುಕ್ತ ಪೊಲೀಸ್ ಠಾಣೆಗೆ ಗುರುವಾರ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಲೋಕಾಯುಕ್ತ ಪೊಲೀಸರು, ಸಂಜೆ ಎಇ ಹರೀಶ್ ತಮ್ಮ ಕಚೇರಿಯಲ್ಲಿ ಕಿರಿಯ ಲೈನ್‌ಮನ್ ಗುಂಡಪ್ಪನ ಮೂಲಕ ಗುತ್ತಿಗೆದಾರನಿಂದ 10 ಸಾವಿರ ಲಂಚ ಪಡೆಯುವಾಗ ದಾಳಿ ನಡೆಸಿ, ಇಬ್ಬರನ್ನೂ ವಶಕ್ಕೆ ಪಡೆದಿದ್ದಾರೆ.

ಹಿರಿಯ ಅಧಿಕಾರಿಗಳ ಮಾರ್ಗದರ್ಶನ, ಲೋಕಾಯುಕ್ತ ಅಧೀಕ್ಷಕ(ಎಸ್ಪಿ) ವಿ.ಜೆ. ಸಜೀತ್ ನೇತೃತ್ವದಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ ಡಿವೈಎಸ್ಪಿ ವಿ.ಕೃಷ್ಣಯ್ಯ, ಇನ್ಸ್‌ಪೆಕ್ಟರ್‌ಗಳಾದ ಉಮೇಶ್, ಜಯರತ್ನ, ಸಿಬ್ಬಂದಿ ಗುರುಪ್ರಸಾದ್, ಹೆಚ್.ಎನ್.ಗೋಪಿ, ವೀರಭದ್ರಸ್ವಾಮಿ, ಕಾಂತರಾಜು, ಆಶಾ, ತ್ರಿವೇಣಿ ಮೋಹನ್, ಪ್ರದೀಪ್ ಭಾಗಿಯಾಗಿದ್ದರು.

ಸಂಗೀತ ವಿವಿ ಕುಲಸಚಿವ ಎಂ.ಆರ್.ರಾಜೇಶ್ ನಿಧನ



ಮೈಸೂರು, ಮಾ.7– ಮೈಸೂರಿನ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಕುಲಸಚಿವ ಎಂ.ಆರ್. ರಾಜೇಶ್ (54) ಬುಧವಾರ ಅನಾರೋಗ್ಯದಿಂದ ನಿಧನರಾದರು. ಮೈಸೂರಿನ ವಿಜಯನಗರ ಮೂರನೇ ಹಂತದ ನಿವಾಸಿಯಾಗಿದ್ದ ಇವರು ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಕೆಎಎಸ್ ಅಧಿಕಾರಿಯಾಗಿದ್ದ ಎಂ.ಆರ್.ರಾಜೇಶ್, ತೀರ್ಥಹಳ್ಳಿಯ ತಹಶೀಲ್ದಾರ್, ಮಂಡ್ಯ ಉಪವಿಭಾಗಾಧಿಕಾರಿ, ಚಾಮುಂಡೇಶ್ವರಿ ದೇವಸ್ಥಾನದ ಆಡಳಿತಾಧಿಕಾರಿ, ಕೆಐಎಡಿಬಿ ವಿಶೇಷ ಭೂಸ್ವಾಧೀನಾಧಿಕಾರಿ ಹೀಗೆ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ 2023ರ ಸೆಪ್ಟೆಂಬರ್‌ನಲ್ಲಿ ಸಂಗೀತ ವಿವಿ ಕುಲಸಚಿವರಾಗಿ ಅಧಿಕಾರ ವಹಿಸಿಕೊಂಡಿದ್ದರು. ಇವರ ಸಹೋದರ ಅಮೆರಿಕದಿಂದ ಆಗಮಿಸಬೇಕಿರುವ ಕಾರಣ ಶುಕ್ರವಾರ ಮಧ್ಯಾಹ್ನ 12.30ಕ್ಕೆ ವಿಜಯನಗರ ನಾಲ್ಕನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ರಾಜೇಶ್ ಅವರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ ಸಭೆ: ಕುಲಸಚಿವರ ನಿಧನದ ಹಿನ್ನೆಲೆಯಲ್ಲಿ ಸಂಗೀತ ವಿವಿ ಆವರಣದಲ್ಲಿ ಗುರುವಾರ ಸಂತಾಪ ಸಭೆ ನಡೆಸಿ, ಕುಲಪತಿ, ಬೋಧಕರು, ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಶ್ರದ್ಧಾಂಜಲಿ ಸಲ್ಲಿಸಿದರು. ರಾಜ್ಯ ಸರಕಾರವೂ ಸಂತಾಪ ಸೂಚಿಸಿದ್ದು, ಅಂತ್ಯಕ್ರಿಯೆಯನ್ನು ಪೊಲೀಸ್ ಗೌರವದೊಂದಿಗೆ ನೆರವೇರಿಸಲು ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿ(ರಾಜ್ಯ ಶಿಷ್ಟಾಚಾರ) ಎಚ್.ಬಿ.ವಿಜಯಕುಮಾರ್ ಪ್ರಕಟಣೆಯಲ್ಲಿ ಸೂಚಿಸಿದ್ದಾರೆ.

ಎನ್.ವೆಂಕಟಾಚಲಪ್ಪ



ಮೈಸೂರು, ಮಾ. 7– ಮೈಸೂರಿನ ಶ್ರೀರಾಂಪುರ 3ನೇ ಹಂತದ ಕಂದಾಯನಗರದ ನಿವಾಸಿ ಹಾಗೂ ನಿವೃತ್ತ ತಹಸೀಲ್ದಾರ್ ಎನ್.ವೆಂಕಟಾಚಲಪ್ಪ(68) ಬುಧವಾರ ನಿಧನರಾದರು. ಮೃತರು ಪತ್ನಿ ನಾಗಮಣಿ, ಮಕ್ಕಳಾದ ಪೂರ್ಣಿಮಾ, ಪ್ರತಿಮಾ, ಮಂಜುನಾಥ್, ಸೊಸೆ ಮಹಾಲಕ್ಷ್ಮಿ, ಅಳಿಯಂದಿರಾದ ಯಶೋಧರ, ಶ್ರೀಹರ್ಷ, ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬುಧವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಿವರಾತ್ರಿ ಹಬ್ಬಕ್ಕೆ ಮೈಸೂರಿನ ದೇವಾಲಯಗಳಲ್ಲಿ ಸಿದ್ಧತೆ

ದಿನವಿಡೀ ವಿಶೇಷ ಪೂಜಾ ಮಹೋತ್ಸವ



ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಗುರುಕುಲದಲ್ಲಿರುವ ಶಿವಲಿಂಗಗಳ ಸ್ವಚ್ಛತಾ ಕಾರ್ಯ ನಡೆಸುತ್ತಿರುವುದು.

ಮೈಸೂರು,ಮಾ.7(ಎಂಟಿವೈ)– ಶಿವನ ಆರಾಧನೆಯ ಹಬ್ಬವಾದ ಮಹಾಶಿವರಾತ್ರಿ ಹಿನ್ನೆಲೆಯಲ್ಲಿ ಮೈಸೂರಿನ ಬಹುತೇಕ ಮಹದೇಶ್ವರ ಹಾಗೂ ಈಶ್ವರನ ದೇವಾಲಯಗಳಲ್ಲಿ ಶುಕ್ರವಾರ ದಿನವಿಡೀ ವಿಶೇಷ ಪೂಜಾ ಮಹೋತ್ಸವ ಜರುಗಲಿದ್ದು, ಅದಕ್ಕಾಗಿ ದೇವಾಲಯದಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಶಿವರಾತ್ರಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ದೇವಾಲಯಕ್ಕೆ ಬರುವ ಭಕ್ತರಿಗೆ ದೇವರ ದರ್ಶನಕ್ಕೆ ಅಗತ್ಯ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಗುರುಕುಲದಲ್ಲಿ 101 ಶಿವಲಿಂಗಗಳಿದ್ದು, ಶಿವರಾತ್ರಿ ದಿನ ಸಾವಿರಾರು ಭಕ್ತರು ಗುರುಕುಲಕ್ಕೆ ಬಂದು ಶಿವಲಿಂಗಗಳಿಗೆ ಬಿಲ್ವಪತ್ರೆ ಸಮರ್ಪಿಸಿ ಪೂಜೆ ಸಲ್ಲಿಸಲಿದ್ದಾರೆ. ಗುರುವಾರ ಬೆಳಗ್ಗೆ ಗುರುಕುಲದ ಆವರಣದಲ್ಲಿರುವ ಶಿವಲಿಂಗಗಳನ್ನು ಸ್ವಚ್ಛತೆ ಮಾಡಲಾಯಿತು.

ಶಿವಲಿಂಗಗಳ ದರ್ಶನಕ್ಕಾಗಿ ಬರುವ ಭಕ್ತರು, ಬಳಿಕ ಸಮೀಪದಲ್ಲಿಯೇ ಇರುವ ವಿವಿಧ ದೇವಾಲಯಗಳಿಗೂ ಭೇಟಿ ನೀಡಲಿದ್ದಾರೆ. ಈ ಹಿನ್ನೆಲೆಯಲ್ಲಿ ಶುಕ್ರವಾರ ಮಧ್ಯಾಹ್ನದ ನಂತರ ರಾಮಾನುಜ ರಸ್ತೆಯಲ್ಲಿ ಭಕ್ತರ ಸಂಖ್ಯೆ ಹೆಚ್ಚಾಗುವುದರಿಂದ ವಾಹನ ಸಂಚಾರಕ್ಕೆ ನಿರ್ಬಂಧ ಹೇರುವ ಸಾಧ್ಯತೆ ಇದೆ. ಈಗಾಗಲೇ ಗುರುಕುಲ ಮತ್ತು ಸಮೀಪದ ದೇವಾಲಯಗಳ ಮುಂದೆ ಭಕ್ತರು ಸರದಿ ಸಾಲಿನಲ್ಲಿ ಬರಲು ಹಾಗೂ ಬಂದ ಭಕ್ತರಿಗೆ ಪ್ರಸಾದ ವಿನಿಯೋಗಿಸಲು ಅಗತ್ಯ ವ್ಯವಸ್ಥೆ ಕಲ್ಪಿಸಲಾಗಿದೆ.

ಮಹದೇಶ್ವರ ದೇವಾಲಯಗಳಲ್ಲೂ ಪೂಜೆ: ಮೈಸೂರಿನ ಸುಣ್ಣದಕೇರಿ, ಹಳ್ಳದಕೇರಿ, ಪಡುವಾರಹಳ್ಳಿ, ಕುಂಬಾರಕೊಪ್ಪಲು, ಕೆ.ಟಿ.ಸ್ಟ್ರೀಟ್, ನಜರ್‌ಬಾದ್ ಸೇರಿದಂತೆ ವಿವಿಧೆಡೆ ಇರುವ ಮಲೆಮಹದೇಶ್ವರ ಸ್ವಾಮಿ ದೇವಾಲಯ, ಅಮೃತೇಶ್ವರ ದೇವಾಲಯ, ಚಂದ್ರಮೌಳೇಶ್ವರ ದೇವಾಲಯ ಸೇರಿದಂತೆ ಈಶ್ವರನ ದೇವಾಲಯಗಳಲ್ಲೂ ವಿಶೇಷ ಪೂಜಾ ಮಹೋತ್ಸವ ಜರುಗಲಿದೆ. ಗ್ರಾಮೀಣ ಪ್ರದೇಶದಲ್ಲಿರುವ ಮಹದೇಶ್ವರರ ದೇವಾಲಯದಲ್ಲಿ ಹಾಲರವಿ ಉತ್ಸವ ಹಾಗೂ ಮೆರವಣಿಗೆ ನಡೆಸುವ ಮೂಲಕ ಶಿವರಾತ್ರಿ ಹಬ್ಬವನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಗುತ್ತದೆ.

ಮಹದೇಶ್ವರ ಬೆಟ್ಟಕ್ಕೆ ಭಕ್ತ ಗಣ: ಚಾಮರಾಜನಗರ ಜಿಲ್ಲೆಯ ಮಲೆ ಮಹದೇಶ್ವರ ಬೆಟ್ಟದಲ್ಲಿ ಶಿವರಾತ್ರಿ ಜಾತ್ರಾ ಮಹೋತ್ಸವ ಅದ್ಧೂರಿಯಾಗಿ ಜರುಗುತ್ತಿದ್ದು, ಲಕ್ಷಾಂತರ ಮಂದಿ ಭಕ್ತರು ಬೆಟ್ಟದ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಹಿನ್ನೆಲೆಯಲ್ಲಿ ಮೈಸೂರಿಂದ ಮಹದೇಶ್ವರ ಬೆಟ್ಟಕ್ಕೆ ಸಾರಿಗೆ ಸಂಸ್ಥೆ ವಿಶೇಷ ಬಸ್ ವ್ಯವಸ್ಥೆ ಮಾಡಲಾಗಿದ್ದು, ಭಕ್ತರ ಸಂಖ್ಯೆಗೆ ಅನುಗುಣವಾಗಿ ಹೆಚ್ಚುವರಿ ಬಸ್ ವ್ಯವಸ್ಥೆ ಮಾಡಲಾಗಿದೆ.

ನಂಜನಗೂಡಿನಲ್ಲೂ ಸಂಭ್ರಮ: ನಂಜನಗೂಡಿನ ನಂಜುಂಡೇಶ್ವರ ದೇವಾಲಯದಲ್ಲೂ ಶಿವರಾತ್ರಿ ಹಬ್ಬದ ವಿಶೇಷ ಪೂಜಾ ಕೈಂಕರ್ಯ ನೆರವೇರಲಿದೆ. ಶುಕ್ರವಾರ ನಂಜನಗೂಡು ದೇವಾಲಯಕ್ಕೆ ಆಗಮಿಸುವವರ ಸಂಖ್ಯೆ ಹೆಚ್ಚಾಗಲಿದ್ದು, ಕಪಿಲಾ ನದಿಯಲ್ಲಿ ಪುಣ್ಯಸ್ನಾನ ಮಾಡಿ ಮಿಂದೇಳಲಿದ್ದಾರೆ.

ಬಂಡೀಪುರದ ತಾವರೆಕಟ್ಟೆ ದೇವಾಲಯ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ತಾವರಕಟ್ಟೆ ಮಹದೇಶ್ವರ ದೇವಾಲಯದಲ್ಲಿ ಶಿವರಾತ್ರಿ ಜಾತ್ರಾ ಮಹೋತ್ಸವ ಜರುಗಲಿದೆ. ಕಾಡಂಚಿನ ಹಾಡಿ ಹಾಗೂ ತಮಿಳುನಾಡಿನ ಮಧುಮಲೈ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿ ವಿವಿಧ ಹಾಡಿಗಳಲ್ಲಿನ ಬುಡಕಟ್ಟು ಸಮುದಾಯದ ಭಕ್ತರು ಬಂಡೀಪುರ ಅರಣ್ಯದಲ್ಲಿರುವ ತಾವರೆಕಟ್ಟೆ ಮಹದೇಶ್ವರ ದೇಗುಲಕ್ಕೆ ಬಂದು ವಿಶೇಷ ಪೂಜೆ ಸಲ್ಲಿಸಲಿದ್ದಾರೆ. ಮಾ.8ರಂದು ಸಂಜೆ ವೇಳೆ ಬಂಡೀಪುರಕ್ಕೆ ಬಂದು ದೇವಾಲಯದ ಬಳಿ ರಾತ್ರಿ ವಾಸ್ತವ್ಯ ಹೂಡುವ ಬುಡಕಟ್ಟು ಸಮುದಾಯದ ಜನ, ರಾತ್ರಿಯಿಡೀ ಸಾಂಪ್ರದಾಯಿಕ ನೃತ್ಯದೊಂದಿಗೆ ಮಹದೇಶ್ವರರನ್ನು ಆರಾಧಿಸಲಿದ್ದಾರೆ. ಶನಿವಾರ ಗುಂಡ್ಲುಪೇಟೆ ತಾಲೂಕಿನ ವಿವಿಧ ಗ್ರಾಮಗಳ ಜನ ತಾವರೆಕಟ್ಟೆ ಮಹದೇಶ್ವರ ದೇಗುಲಕ್ಕೆ ಬಂದು ಪೂಜೆ ಸಲ್ಲಿಸಲಿದ್ದಾರೆ. ದೇವಾಲಯಕ್ಕೆ ಬರುವ ಭಕ್ತರು ತಮ್ಮ ವಾಹನಗಳನ್ನು ಬಂಡೀಪುರ ಕ್ಯಾಂಪಸ್‌ನಲ್ಲಿ ನಿಲ್ಲಿಸಿ, ಅರಣ್ಯ ಇಲಾಖೆಯ ಬಸ್‌ನಲ್ಲಿ ತೆರಳಲು ಅವಕಾಶ ಮಾಡಿಕೊಡಲಾಗಿದೆ. ಬೇಸಿಗೆ ಹಿನ್ನೆಲೆಯಲ್ಲಿ ಅಗ್ನಿ ಅವಘಡ ಸಂಭವಿದಂತೆ ಕಟ್ಟೆಚ್ಚರ ವಹಿಸುವ ನಿಟ್ಟಿನಲ್ಲಿ ದೇವಾಲಯದ ಸುತ್ತಲೂ ಸಿಬ್ಬಂದಿ ಕಣ್ಗಾವಲು ಇಡಲಾಗಿದೆ.

ತೋಷಿತ್ ರಾಮಸ್ವಾಮಿಗೆ ಹುಟ್ಟುಹಬ್ಬದ ಸಂಭ್ರಮ



ಮೈಸೂರು ತಾಲೂಕಿನ ಹುಯಿಲಾಳು ಗ್ರಾಮದಲ್ಲಿ ಹುಟ್ಟುಹಬ್ಬ ಆಚರಿಸಿಕೊಂಡ ತೋಷಿತ್ ರಾಮಸ್ವಾಮಿಗೆ ಬಿಜೆಪಿ ಮುಖಂಡರೂ ಆದ ವಿದ್ಯಾ ವಿಕಾಸ್ ಸಂಸ್ಥೆಯ ಕಾರ್ಯದರ್ಶಿ ಕವೀಶ್‌ಗೌಡ ಕೇಕ್ ತಿನಿಸುವ ಮೂಲಕ ಶುಭಾಶಯ ಕೋರಿದರು. ಈ ವೇಳೆ ಗ್ರಾಪಂ ಮಾಜಿ ಸದಸ್ಯರೂ ಆದ ರಂಗಭೂಮಿ ಕಲಾವಿದ ಹುಯಿಲಾಳು ರಾಮಸ್ವಾಮಿ, ಚಿತ್ರನಟ ಶಿವ ಬಾಲಾಜಿ, ಗುತ್ತಿಗೆದಾರ ಬಸವರಾಜು, ಜೆಡಿಎಸ್ ಎಸ್‌ಸಿ ಘಟಕದ ತಾಲೂಕು ಅಧ್ಯಕ್ಷ ಸಿದ್ದರಾಜು, ಮುಖಂಡರಾದ ಕಾಳೇಗೌಡ, ಮಂಜುನಾಥ್ ಪ್ರಸಾದ್, ಶ್ರೀಮತಿ ಸುನೀತ, ಶ್ರೇಯ, ಸ್ನೇಹ, ಮೋಹಿತ್ ಇನ್ನಿತರರು ಉಪಸ್ಥಿತರಿದ್ದರು.

ಎಂ.ಟೆಕ್‌ನಲ್ಲಿ ಎಚ್.ಎನ್.ರೇಷ್ಮಾ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಮಾ. 7–ನಗರದ ಆಲನಹಳ್ಳಿ ಬಳಿಯಿರುವ ನೇತಾಜಿನಗರ ಬಡಾವಣೆ ನಿವಾಸಿ ಎಚ್.ಎನ್.ರೇಷ್ಮಾ ಎಂ.ಟೆಕ್ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗುವ ಮೂಲಕ ಸಾಧನೆ ಮಾಡಿದ್ದಾರೆ. ಪ್ರತಿಷ್ಠಿತ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿನಿಯಾಗಿರುವ ರೇಷ್ಮಾ ಎಂ.ಟೆಕ್‌ನಲ್ಲಿ ಶೇ.85ರಷ್ಟು ಅಂಕ ಪಡೆದಿದ್ದಾರೆ. ಅಲ್ಲದೆ ಅದೇ ಕಾಲೇಜಿನಲ್ಲಿ ಬಿಇ ವ್ಯಾಸಂಗ ಮಾಡಿದ್ದು, ಇಂಜಿನಿಯರಿಂಗ್ ಪದವಿಯಲ್ಲೂ ಉತ್ತಮ ಅಂಕ ಪಡೆದಿದ್ದಾರೆ. ಇದೀಗ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ (ಎಂ.ಎಸ್) ಆಸ್ಟ್ರೇಲಿಯಾದ ಮೆಲಬಾರ್ನ್ ವಿಶ್ವವಿದ್ಯಾಲಯಕ್ಕೆ ಪ್ರವೇಶ ಪಡೆದುಕೊಂಡಿದ್ದಾರೆ. ಈಕೆ ನಿವೃತ್ತ ಪ್ರಾಂಶುಪಾಲ ಎಚ್.ಎನ್.ನಂಜುಂಡಸ್ವಾಮಿ ಮತ್ತು ಎಚ್.ಎನ್.ಸುಮಾ ದಂಪತಿ ಪುತ್ರಿ



ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ನೂತನ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಬಿ.ಕೆ.ಅಲ್ತಾಫ್ ಖಾನ್ ಶಾಸಕ ತನ್ವೀರ್ ಸೇಠ್ ಅವರನ್ನು ಭೇಟಿ ಮಾಡಿ, ಅಭಿನಂದಿಸಿದರು. ಈ ವೇಳೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಆಯೂಬ್ ಖಾನ್, ಸುಹೇಲ್ ಪಾಷ, ಬಷೀರ್ ಸಾಹೇಬ್, ನಸೀರ್ ಅಹಮದ್ ಇನ್ನಿತರರು ಉಪಸ್ಥಿತರಿದ್ದರು.

ಮಾ.10ರಂದು ಈವಿವಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಸಮಾರೋಪ

ಮೈಸೂರು,ಮಾ.7–ನಗರದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಮಾ.10ರಂದು ಬೆಳಗ್ಗೆ 11ಕ್ಕೆ ಒಂಟಿಕೊಪ್ಪಲು ಕಾಳಿದಾಸ ರಸ್ತೆ, ಚಂದ್ರಕಲಾ ಆಸ್ಪತ್ರೆ ಸಮೀಪದ 'ಓಂ ಶಾಂತಿ ಮಂಟಪ'ದಲ್ಲಿ 'ಮಹಿಳಾ ಅಭಿವೃದ್ಧಿ–ಸವಾಲುಗಳು ಮತ್ತು ಸಾಧ್ಯತೆಗಳು' ಎಂಬ ವಿಷಯದ ಕುರಿತು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಆಯೋಜಿಸಲಾಗಿದೆ.

ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಪ್ರಭಾವತಿ ಹಿರೇಮಠ್ ಉದ್ಘಾಟನೆ ನೆರವೇರಿಸಲಿದ್ದು, ವಿಶೇಷ ಅತಿಥಿಯಾಗಿ ಸುಪ್ರಸಿದ್ಧ ಭರತನಾಟ್ಯ ಕಲಾವಿದೆ ಡಾ.ವಸುಂಧರ ದೊರೆಸ್ವಾಮಿ ದಾಂಡೇಲಿ ಸಿವಿಲ್ ನ್ಯಾಯಾಧೀಶರು, ಜೆಎಂಎಫ್‌ಸಿ ರೋಹಿಣಿ ಡಿ.ಬಸಾಪುರ್, ಮನಶಾಸ್ತ್ರಜ್ಞರು ಮತ್ತು ಸಮಾಲೋಚಕಿ ಡಾ.ಭಾರತಿ, ಶ್ರೀರಾಂ ಪುರ ಎಸ್‌ಬಿಐ ವ್ಯವಸ್ಥಾಪಕಿ ನಳಿನಾಕ್ಷಿ ಭಾಗವಹಿಸಲಿದ್ದಾರೆ. ದಿವ್ಯ ಸಾನ್ನಿಧ್ಯವನ್ನು ಮುಖ್ಯ ಸಂಚಾಲಕಿ ಈವಿವಿ ಮೈಸೂರು ಉಪವಲಯದ ಲಕ್ಷ್ಮೀಜಿ ವಹಿಸಲಿದ್ದಾರೆ.

ಮೈಸೂರು ವಿಜ್ಞಾನ ಕಾಲೇಜಲ್ಲಿ ವಿವಿಧ ಸರ್ಟಿಫಿಕೇಟ್ ಕೋರ್ಸ್ ಆರಂಭ



ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತ ಕಾಲೇಜಿನಲ್ಲಿ ಗುರುವಾರ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಉದ್ಘಾಟಿಸಿದ ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕ ಡಾ.ಎಸ್.ಬಿ.ಅಪ್ಪಾಜಿಗೌಡರನ್ನು ಸನ್ಮಾನಿಸಲಾಯಿತು.

ಮೈಸೂರು, ಮಾ.7(ಎಸ್‌ಬಿಡಿ)– ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಸ್ವಾಯತ್ತ ಕಾಲೇಜಿನಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಆರಂಭಿಸಿರುವ ವಿವಿಧ ವಿಷಯಗಳ ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಗುರುವಾರ ವಿಧ್ಯುಕ್ತವಾಗಿ ಚಾಲನೆ ದೊರಕಿತು.

ಕಾಲೇಜು ಆವರಣದಲ್ಲಿ ನಡೆದ ಸಮಾರಂಭದಲ್ಲಿ ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕ ಡಾ.ಎಸ್.ಬಿ.ಅಪ್ಪಾಜಿಗೌಡರು ಗಿಡಕ್ಕೆ ನೀರೆರೆಯುವ ಮೂಲಕ ಕನ್ನಡ, ಇಂಗ್ಲಿಷ್, ಭೌತಶಾಸ್ತ್ರ ರಸಾಯನಶಾಸ್ತ್ರ, ಗಣಕ ವಿಜ್ಞಾನ, ಗಣಿತ ಶಾಸ್ತ್ರ, ಗೃಹ ವಿಜ್ಞಾನ, ರೇಷ್ಮೆ ಕೃಷಿ, ಹಿಂದಿ ಸೇರಿದಂತೆ 16 ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಕೋವಿಡ್ ನಂತರದಲ್ಲಿ ಶೈಕ್ಷಣಿಕ ವಲಯದಲ್ಲಿ ಮಹತ್ತರ ಬದಲಾವಣೆ ಆಗಿದೆ. ತಂತ್ರಜ್ಞಾನದ ಮೂಲಕ ಜ್ಞಾನಾರ್ಜನೆ ಪಡೆಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆಧುನಿಕ ತಂತ್ರಜ್ಞಾನದ ಬಳಕೆ ಹೆಚ್ಚಾಗಿದೆ. ಆದರೆ ತಂತ್ರಜ್ಞಾನವನ್ನು ಸಮರ್ಪಕ ರೀತಿಯಲ್ಲಿ ಸದ್ಬಳಕೆ ಮಾಡಿಕೊಳ್ಳುವ ಜವಾಬ್ದಾರಿ ವಿದ್ಯಾರ್ಥಿಗಳದ್ದಾಗಿದೆ ಎಂದು ಸಲಹೆ ನೀಡಿದರು.

ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ನಡೆಯುವ ಸರ್ಟಿಫಿಕೇಟ್ ಕೋರ್ಸ್‌ಗಳ ಸದುಪಯೋಗ ಪಡೆದುಕೊಳ್ಳಬೇಕು. ಈ ಕೋರ್ಸ್‌ಗಳನ್ನು ಪಡೆಯುವುದರಿಂದ ಉದ್ಯೋಗ ಕ್ಷೇತ್ರದಲ್ಲಿ ತುಂಬಾ ಅನುಕೂಲವಾಗಲಿವೆ. ಸರ್ಕಾರ ಹೆಣ್ಣು ಮಕ್ಕಳಿಗೆ ಅನುಕೂಲವಾಗುವಂತೆ ಹಲವು ಯೋಜನೆಯನ್ನು ರೂಪಿಸಿದ್ದು, ಲಭ್ಯವಿರುವ ಉಚಿತ ತರಬೇತಿಗಳ ಸದುಪಯೋಗಪಡಿಸಿಕೊಳ್ಳಬೇಕು. ಪದವಿಯೊಂದಿಗೆ ವೃತ್ತಿಗೆ ಅಗತ್ಯವಾದ ಕೌಶಲ್ಯ ಬೆಳೆಸಿಕೊಂಡು ಜೀವನದಲ್ಲಿ ಪ್ರಗತಿ ಸಾಧಿಸುವಂತೆ ಕರೆ ನೀಡಿದರು.

ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಜಂಟಿ ನಿರ್ದೇಶಕಿ ಪ್ರೊ.ವಿಜಯಲಕ್ಷ್ಮಿ ಮಾತನಾಡಿ, ಯುವ ಸಮುದಾಯ ಅದರಲ್ಲೂ ಹೆಣ್ಣುಮಕ್ಕಳ ಸಮಗ್ರ ಅಭಿವೃದ್ಧಿಗೆ ಇಂತಹ ಸರ್ಟಿಫಿಕೇಟ್ ಕೋರ್ಸ್‌ಗಳು ಉಪಯುಕ್ತವಾಗಲಿವೆ. ನಗರೀಕರಣ, ಔದ್ಯೋಗಿಕರಣ ಕಾಲಮಾನ ದಲ್ಲಿ ವೃತ್ತಿಪರವಾಗಿ ಪ್ರಾಯೋಗಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದರ ಜೊತೆಗೆ ಕೌಶಲಗಳನ್ನು ಬೆಳೆಸಿಕೊಳ್ಳಲು ಈ ಕೋರ್ಸ್‌ಗಳು ಸಹಕಾರಿಯಾಗಲಿವೆ ಎಂದು ಅಭಿಪ್ರಾಯಿಸಿದರು. ಕಾಲೇಜಿನ ಪ್ರಾಂಶುಪಾಲ ಪ್ರೊ.ಎಂ.ಅಬ್ದುಲ್ ರಹಿಮಾನ್, ಸರ್ಟಿಫಿಕೇಟ್ ಕೋರ್ಸ್ ಆರಂಭಿಸಿದ್ದರ ಉದ್ದೇಶ, ವಿದ್ಯಾರ್ಥಿಗಳಿಗೆ ಅವುಗಳ ಅಗತ್ಯತೆ ಬಗ್ಗೆ ವಿವರಿಸಿದರು.

ಇದೇ ಸಂದರ್ಭದಲ್ಲಿ ಡಾ.ಎಸ್.ಬಿ.ಅಪ್ಪಾಜಿಗೌಡರನ್ನು ಕಾಲೇಜಿನ ವತಿಯಿಂದ ಅಭಿನಂದಿಸಲಾಯಿತು. ಕಾಲೇಜಿನ ಶೈಕ್ಷಣಿಕ ಡೀನ್ ಡಾ.ಶ್ರೀಪಾದ್, ಸಹಾಯಕ ನಿರ್ದೇಶಕ ಹೆಚ್.ಎಂ.ಮಂಜುನಾಥ್, ಎ.ಬಿ.ನಾಗೇಂದ್ರ ಪ್ರಸಾದ್, ನ್ಯಾಕ್ ವಿಶೇಷ ಅಧಿಕಾರಿ ಅರುಣ್ ಕುಮಾರ್, ವ್ಯವಸ್ಥಾಪಕ ವೆಂಕಟೇಶ್, ಪರೀಕ್ಷಾ ವಿಭಾಗದ ನಿಯಂತ್ರಕರಾದ ಡಾ. ತೋಯಜಾಕ್ಷ, ಐಕ್ಯುಎಸಿ ಸಂಚಾಲಕ ನಂದಕುಮಾರ್, ಸಹಸಂಚಾಲಕಿ ವನಿತಾ, ಪತ್ರಾಂಕಿತ ವ್ಯವಸ್ಥಾಪಕಿ ಆರ್. ಮೀನಾಕ್ಷಿ, ಡಾ.ಕೆಂಡಗಣ್ಣೇಗೌಡ ಸೇರಿದಂತೆ ಅಧ್ಯಾಪಕರು, ಅಧ್ಯಾಪಕೇತರರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಗುಂಪು ವಸತಿ, ಪೆರಿಫೆರಲ್ ರಿಂಗ್ ರೋಡ್, ಗ್ರೇಡ್ ಸೆಪರೇಟರ್‌ಗಳ ನಿರ್ಮಾಣ

ಪ್ರಸಕ್ತ ಸಾಲಿನಲ್ಲಿ ಮುಡಾದ ವಿಶೇಷ ಯೋಜನೆ





ಮೈಸೂರು,ಮಾ.7(ಆರ್‌ಕೆ)–ವಸತಿರಹಿತರಿಗೆ ಕೈಗೆಟಕುವ ದರದಲ್ಲಿ ಗುಂಪು ಮನೆ ನೀಡುವ, ವಾಹನ ಸಂಚಾರ ದಟ್ಟಣೆಗನುಗುಣವಾಗಿ ಪೆರಿಫೆರಲ್ ರಿಂಗ್ ರೋಡ್ ಮತ್ತು ಸಂಚಾರ ಸಮಸ್ಯೆ ನೀಗಿಸಲು ರಿಂಗ್ ರಸ್ತೆ ಜಂಕ್ಷನ್‌ಗಳಲ್ಲಿ ಗ್ರೇಡ್ ಸೆಪರೇಟರ್‌ಗಳನ್ನು ನಿರ್ಮಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ವು ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಘೋಷಿಸಿದೆ.

ಗುಂಪು ವಸತಿ ಯೋಜನೆ: ವಸತಿ ಬಡಾವಣೆ ನಿರ್ಮಿಸಿ ಆಕಾಂಕ್ಷಿಗಳಿಗೆ ನಿವೇಶನ ಅಥವಾ ಮನೆ ನಿರ್ಮಿಸಿಕೊಡುವ ಮೂಲ ಉದ್ದೇಶ ಹೊಂದಿರುವ ಪ್ರಾಧಿಕಾರವು 2012ರ ಭೂಸ್ವಾಧೀನ ಕಾಯ್ದೆಯನ್ವಯ ಹೊಸ ಬಡಾವಣೆಗಳಿಗೆ ಭೂಸ್ವಾಧೀನ ಪ್ರಕ್ರಿಯೆ ಕಷ್ಟವಾಗಿರುವುದರಿಂದ ಈಗಾಗಲೇ ಅಭಿವೃದ್ಧಿಗೊಂಡಿರುವ ಬಡಾವಣೆಗಳಲ್ಲಿರುವ ಖಾಲಿ ಜಾಗದಲ್ಲಿ ಬಹುಮಹಡಿ ಗುಂಪು ಮನೆಗಳನ್ನು ನಿರ್ಮಿಸಿ ನಾಗರಿಕರಿಗೆ ಕೈಗೆಟಕುವ ದರದಲ್ಲಿ ಮನೆ ಹಂಚಲು ಮುಡಾ ಮುಂದಾಗಿದೆ.

ಮೊದಲನೇ ಹಂತದಲ್ಲಿ ಮೈಸೂರಿನ ವಿಜಯನಗರ 4ನೇ ಹಂತ, 2ನೇ ಘಟ್ಟದಲ್ಲಿ 12 ಮಹಡಿಗಳ ಕಟ್ಟಡದಲ್ಲಿ 500 ಮನೆಗಳನ್ನು ಶಿಯರ್‌ವಾಲ್ ತಂತ್ರಜ್ಞಾನ ಅಳವಡಿಸಿ 250 ಕೋಟಿ ರೂ ಅಂದಾಜು ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದ್ದು, ಇಂದು ಬಜೆಟ್‌ನಲ್ಲಿ ಪ್ರಕಟಿಸಲಾಯಿತು

ಪೆರಿಫೆರಲ್ ರಿಂಗ್ ರಸ್ತೆ: ಅತೀ ವೇಗವಾಗಿ ಬೆಳೆಯುತ್ತಿರುವ ಮೈಸೂರು ನಗರದ ಜನಸಂಖ್ಯೆ, ವಾಹನಗಳ ಸಂಖ್ಯೆಗನುಗುಣವಾಗಿ ಸಂಚಾರ ದಟ್ಟಣೆ ಹೆಚ್ಚಾಗುವುದರಿಂದ ಹಾಗೂ ನಂಜನಗೂಡು ಬಳಿ ಸೆಮಿಕಂಡಕ್ಟರ್ ನಿರ್ಮಾಣಗೊಂಡಿರುವ ಕಾರಣ, ಮೈಸೂರಲ್ಲಿ ಸುಮಾರು 7 ಲಕ್ಷ ವಾಹನಗಳಿರುವುದನ್ನು ಪರಿಗಣಿಸಿ ಭವಿಷ್ಯದಲ್ಲಿ ವಾಹನ ಸಂಚಾರ ದಟ್ಟಣೆ ತಪ್ಪಿಸಲು ಪ್ರಾಧಿಕಾರವು ಪ್ರಸ್ತುತ ಇರುವ ರಿಂಗ್‌ರಸ್ತೆ ಹೊರಭಾಗದ 5 ರಿಂದ 8 ಕಿಮೀವರೆಗೆ ಮುಡಾ ಮತ್ತು ಖಾಸಗಿ ಬಡಾವಣೆಗಳು ಹಾಗೂ ಕೈಗಾರಿಕ ವಸಾಹತುಗಳಿರುವುದರಿಂದ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಿಸಲು ಯೋಜನೆ ರೂಪುಗೊಳಿಸಲಾಗಿದೆ.

45 ಮೀ ಅಗಲದ 73.25 ಕಿಮೀ ಉದ್ದದ ರಿಂಗ್ ರಸ್ತೆ ನಿರ್ಮಿಸಿ ಅಕ್ಕಪಕ್ಕದಲ್ಲಿ ಹೆರಿಟೇಜ್ ಲಿವಿಂಗ್ ಅಂಡ್ ಸ್ಪೋರ್ಟ್ಸ್ ವಿಲೇಜ್, ಫಾರ್ಮಾಸೂಟಿಕಲ್, ಗಾರ್ಮೆಂಟ್ಸ್, ಐಟಿಬಿಟಿ, ಎಜುಕೇಷನ್, ಹೆಲ್ತ್, ಹಾರ್ಡ್‌ವೇರ್ ಅಂಡ್ ಸಾಫ್ಟ್‌ವೇರ್, ಕ್ಲಸ್ಟರ್‌ಗಳನ್ನು ನಿರ್ಮಿಸಲು ಯೋಜನೆ ರೂಪಿಸಲಾಗುತ್ತಿದ್ದು, ಈಗಾಗಲೇ ಪೆರಿಫೆರಲ್ ರಿಂಗ್ ರಸ್ತೆನಿರ್ಮಾಣ ಸಂಬಂಧ ಡಿಪಿಆರ್ ತಯಾರಿಸಲು 1000 ಲಕ್ಷ ರೂಗಳನ್ನು ಮೀಸಲಿರಿಸಲಾಗಿದೆ.

ಗ್ರೇಡ್ ಸೆಪರೇಟರ್‌ಗಳು: ಹಾಲಿ ಇರುವ ರಿಂಗ್‌ರಸ್ತೆಯ ವಿಜಯನಗರ 4ನೇ ಹಂತ (ಬಸವನಹಳ್ಳಿ ಜಂಕ್ಷನ್), ಬೋಗಾದಿ ಜಂಕ್ಷನ್, ಜೆಪಿ ನಗರ ಜಂಕ್ಷನ್‌ಗಳಲ್ಲಿ ವಾಹನ ದಟ್ಟಣೆ ತಡೆಯಲು ಕೆಳಸೇತುವೆ ಅಥವಾ ಮೇಲು ಸೇತುವೆ ನಿರ್ಮಿಸಲು ಪ್ರಾಧಿಕಾರವು 4000 ಲಕ್ಷ ರೂ ಅನುದಾನ ಮೀಸಲಿರಿಸಿದೆ ಎಂದು ಕಮಿಷನರ್ ಬಜೆಟ್ ಮಂಡನೆ ವೇಳೆ ಪ್ರಕಟಿಸಿದರು.

ಮೈಸೂರು ಮಿತ್ರ ಶುಕ್ರವಾರ 8 ಮಾರ್ಚ್ 2024

25 ಕೋಟಿ ರೂ. ವೆಚ್ಚದ ವಿವಿಧ ಕಾಮಗಾರಿಗೆ ಚಾಲನೆ

ಪೆರಾಜೆ, ಚೆಂಬು, ಸಂಪಾಜೆ, ಮೇಕೇರಿ ಗ್ರಾಪಂ ವ್ಯಾಪ್ತಿಯಲ್ಲಿ ಶಾಸಕ ಪೊನ್ನಣ್ಣ ಭೂಮಿಪೂಜೆ

ಮಡಿಕೇರಿ, ಮಾ.7– ವಿರಾಜಪೇಟೆ ವಿಧಾನ ಸಭಾ ಕ್ಷೇತ್ರದ ಮಡಿಕೇರಿ ತಾಲೂಕಿನ ಪೆರಾಜೆ, ಚೆಂಬು, ಸಂಪಾಜೆ, ಮದೆನಾಡು, ಮೇಕೇರಿ, ಹಾಗೂ ಹಾಕತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿ 25 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎ.ಎಸ್. ಪೊನ್ನಣ್ಣ ಗುರುವಾರ ಚಾಲನೆ ನೀಡಿದರು.

ಪೆರಾಜೆ ಗ್ರಾಪಂ ವ್ಯಾಪ್ತಿಯ ರಸ್ತೆ, ಕುಡಿಯುವ ನೀರು, ಸೇತುವೆ ನಿರ್ಮಾಣ, ಚೆಂಬು ಗ್ರಾಪಂ ವ್ಯಾಪ್ತಿಯ ರಸ್ತೆ ನಿರ್ಮಾಣಕ್ಕೆ ಚಾಲನೆ, ಆಟದ ಮೈದಾನ ನಿರ್ಮಾಣಕ್ಕೆ ಕ್ರೀಡಾ ಇಲಾಖೆಗೆ 4 ಎಕರೆ ಭೂಮಿ ಹಸ್ತಾಂತರ, ತಡೆಗೋಡೆ ಉದ್ಘಾಟನೆ, ಮದೆನಾಡು ಗ್ರಾಪಂ ವ್ಯಾಪ್ತಿಯ ಕಾಟಕೇರಿ ಬಳಿ 12.6 ಕೋಟಿ ರೂ. ವೆಚ್ಚದಲ್ಲಿ 66/11 ಕೆವಿ ಸಾಮರ್ಥ್ಯದ ವಿದ್ಯುತ್ ಉಪ ಕೇಂದ್ರ ನಿರ್ಮಾಣಕ್ಕೆ ಭೂಮಿಪೂಜೆ, ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ 4 ಕೋಟಿ ರೂ. ವೆಚ್ಚದ ರಸ್ತೆ ನಿರ್ಮಾಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಶಾಸಕ ಎ.ಎಸ್. ಪೊನ್ನಣ್ಣ, ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಕೊಡಗು ಜಿಲ್ಲೆಗೆ ರಸ್ತೆ, ಕುಡಿಯುವ ನೀರು, ವಿದ್ಯುತ್ ಸಂಪರ್ಕ ಸೇರಿದಂತೆ ವಿವಿಧ ಅಭಿವೃದ್ಧಿಗೆ ಸುಮಾರು 250 ಕೋಟಿ ರೂ.ಗೆ ಅನುಮೋದನೆ ನೀಡಿದೆ. ವಿರಾಜಪೇಟೆ ಕ್ಷೇತ್ರ ವಿಶಾಲ ವ್ಯಾಪ್ತಿ ಹೊಂದಿದ್ದು, ಕರಿಕೆ, ಪೆರಾಜೆ, ಸಂಪಾಜೆಯಿಂದ, ಕುಟ್ಟ, ಮಾಲ್ದಾರೆ ವ್ಯಾಪ್ತಿಗೆ ಒಳಗೊಂಡಂತೆ ವಿಶಾಲ ಭೂ ವಿಸ್ತೀರ್ಣ ಹೊಂದಿದೆ. ಎಲ್ಲಾ ಗ್ರಾಮಗಳಿಗೂ ಭೇಟಿ ನೀಡಿ ಸಾರ್ವಜನಿಕರ ಕುಂದು ಕೊರತೆ ಆಲಿಸಿ, ಸಮಸ್ಯೆ ಬಗೆಹರಿಸಲು ಪ್ರಯತ್ನಿಸಲಾಗುತ್ತಿದೆ ಎಂದು ತಿಳಿಸಿದರು.



ಮಡಿಕೇರಿ ತಾಲೂಕಿನ ವಿವಿಧ ಗ್ರಾಮ ಪಂಚಾಯಿತಿ ವ್ಯಾಪ್ತಿಯ 25 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎ.ಎಸ್.ಪೊನ್ನಣ್ಣ ಚಾಲನೆ ನೀಡಿದರು. ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ, ವಿ.ಟಿ.ವಿಸ್ಮಯಿ, ನೆರವಂಡ ಉಮೇಶ್, ಧರ್ಮಜ ಉತ್ತಪ್ಪ, ಇಸ್ಮಾಯಿಲ್ ಇದ್ದರು.

ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುವ ನಿಟ್ಟಿನಲ್ಲಿ ಸರ್ಕಾರ ಮುಂದಾಗಿದ್ದು, ರಸ್ತೆ ಕುಡಿಯುವ ನೀರು, ವಿದ್ಯುತ್ ಪೂರೈಕೆಗೆ ಪ್ರಥಮ ಆದ್ಯತೆ ನೀಡಿದೆ. ಆ ನಿಟ್ಟಿನಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗದಂತೆ ಸರ್ಕಾರ ಎಲ್ಲಾ ಪ್ರಯತ್ನ ಮಾಡುತ್ತಿದೆ. ಮೂಲ ಸೌಲಭ್ಯಗಳ ಜೊತೆಗೆ ದೇವಾಲಯಗಳ ಅಭಿವೃದ್ಧಿಗೆ ಕ್ರಮವಹಿಸಲಾಗುವುದು. ವಿರಾಜಪೇಟೆವನ್ನು ಮಾದರಿ ಕ್ಷೇತ್ರವನ್ನಾಗಿಸಲು ಶ್ರಮಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಸಾರ್ವಜನಿಕರೊಬ್ಬರು ಮಾತನಾಡಿ, ಚೆಂಬು ಗ್ರಾಪಂ ಕಚೇರಿಯಿಂದ ಕುದುರೆಪಾಯ ಮಾರ್ಗದ ಮೂರು ಕಡೆಗಳಲ್ಲಿ ರಸ್ತೆಯನ್ನು ಅಗೆದು ಹಾಳು ಮಾಡಿದ್ದಾರೆ. ಈ ಬಗ್ಗೆ ಸೂಕ್ತ ಕ್ರಮವಹಿಸಬೇಕು. ರಸ್ತೆ ಕಾಮಗಾರಿ ಹೆಸರಿನಲ್ಲಿ ದುರುಪಯೋಗ ಆಗಬಾರದು ಎಂದು ಶಾಸಕರ ಗಮನಕ್ಕೆ ತಂದರು. ನಂತರ ಮಾತನಾಡಿದ ಪೊನ್ನಣ್ಣ, ಯಾವುದೇ ಕಾಮಗಾರಿಯಲ್ಲಿ ದುರುಪಯೋಗ ಕಂಡುಬಂದರೆ ಅಂತಹ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮಕ್ಕೆ ಶಿಫಾರಸು ಮಾಡಲಾಗುವುದು. ಎಲ್ಲರೂ ಬದ್ಧತೆಯಿಂದ ಕಾರ್ಯನಿರ್ವಹಿಸಬೇಕು ಎಂದು ತಾಕೀತು ಮಾಡಿದರು.

ಚೆಂಬು ಗ್ರಾಮದ ಪ್ರಮುಖ ಹೊಸೂರು ಸೂರಜ್ ಮಾತನಾಡಿ, ಪೆರಾಜೆ, ಚೆಂಬು, ಸಂಪಾಜೆ ಭಾಗಕ್ಕೆ ಶಾಸಕ ಪೊನ್ನಣ್ಣ ಹೆಚ್ಚಿನ ಅನುದಾನ ಒದಗಿಸಿ ರಸ್ತೆ, ಕುಡಿಯುವ ನೀರು, ವಿದ್ಯುತ್ ಸಂಪರ್ಕ ಮತ್ತಿತರ ಮೂಲ ಸೌಲಭ್ಯಕ್ಕೆ ಒತ್ತು ನೀಡಿದ್ದಾರೆ. ಹಾಗೆಯೇ ದೇವಾಲಯಗಳ ಅಭಿವೃದ್ಧಿಗೂ ಕೈಜೋಡಿಸಿದ್ದಾರೆ ಎಂದು ಹೇಳಿದರು.

ಇದೇ ವೇಳೆ ಶಾಸಕರು ಸಾರ್ವಜನಿಕರ ಅಹವಾಲು ಆಲಿಸಿ, ಮನವಿ ಪತ್ರ ಸ್ವೀಕರಿಸಿದರು. ಕಾಂಗ್ರೆಸ್ ವಕ್ತಾರ ಎಂ.ಲಕ್ಷ್ಮಣ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವಿ.ಟಿ.ವಿಸ್ಮಯಿ, ಮಡಿಕೇರಿ ತಾಲೂಕಿನ ಅಕ್ರಮ–ಸಕ್ರಮ ಸಮಿತಿ ಅಧ್ಯಕ್ಷ ನೆರವಂಡ ಉಮೇಶ್, ಪ್ರಮುಖರಾದ ಧರ್ಮಜ ಉತ್ತಪ್ಪ, ಇಸ್ಮಾಯಿಲ್, ಕೊಲ್ಯದ ಗಿರೀಶ್, ತೆನ್ನಿರಾ ಮೈನಾ, ಸುರೇಶ್, ಶಶಿ ಇತರರು ಇದ್ದರು.

ರೋಜಾಗೆ ಪಿಹೆಚ್‌ಡಿ ಪ್ರದಾನ



ಮಡಿಕೇರಿ, ಮಾ.7– ಮೈಸೂರು ವಿಶ್ವವಿದ್ಯಾನಿಲಯದ 104ನೇ ಘಟಿಕೋತ್ಸವದಲ್ಲಿ ಸೋಮವಾರಪೇಟೆಯ ಹೆಚ್.ಡಿ.ರೋಜಾ ಅವರಿಗೆ ವಿಶ್ವವಿದ್ಯಾನಿಲಯದಿಂದ ಭೂವಿಜ್ಞಾನ ವಿಭಾಗದಲ್ಲಿ ಪಿಹೆಚ್‌ಡಿ ಪದವಿ ಪ್ರಮಾಣಪತ್ರ ನೀಡಲಾಯಿತು.

ಡಾ.ಡಿ.ನಾಗರಾಜು ಅವರ ಮಾರ್ಗದರ್ಶನದಲ್ಲಿ 'ಹೈಡ್ರೋಜಿಯಾಲಜಿಕಲ್ ಸ್ಟಡೀಸ್ ಆನ್ ಸೋಮವಾರಪೇಟೆ ವಾಟರ್ ಶೆಡ್ ಕೊಡಗು ಡಿಸ್ಟ್ರಿಕ್ಟ್ ಯು ಸಿಂಗ್ ರಿಮೋಟ್ ಸೆನ್ಸಿಂಗ್ ಆ್ಯಂಡ್ ಜಿಐಎಸ್' ವಿಷಯದಲ್ಲಿ ಮಹಾಪ್ರಬಂಧ ಮಂಡಿಸಿದ್ದರು. ರೋಜಾ, ಪ್ರಸ್ತುತ ಕೊಡಗು ಜಿಲ್ಲೆಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಲ್ಲಿ ಭೂವಿಜ್ಞಾನಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈಕೆ ಸೋಮವಾರಪೇಟೆ ತಾಲೂಕಿನ ಹಿರಿಕರ ಗ್ರಾಮದ ನಿವೃತ್ತ ಶಿಕ್ಷಕ ಹೆಚ್.ಬಿ.ಧರ್ಮಪ್ಪ ಹಾಗೂ ಹೆಚ್.ಡಿ.ಲತಾ ದಂಪತಿ ಪುತ್ರಿ.

7ನೇ ದಿನ ಪೂರೈಸಿದ ಅತಿಥಿ ಉಪನ್ಯಾಸಕರ ಧರಣಿ

ಮಡಿಕೇರಿ, ಮಾ.7– ವೇತನ ಪಾವತಿಗಾಗಿ ಆಗ್ರಹಿಸಿ ನಗರದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಅತಿಥಿ ಉಪನ್ಯಾಸಕರು ನಡೆಸುತ್ತಿರುವ ಧರಣಿ ಗುರುವಾರಕ್ಕೆ 7ನೇ ದಿನ ಪೂರೈಸಿದೆ.

ಇದೇ ವೇಳೆ ಮಂಗಳೂರು ವಿವಿಯ ಕುಲಪತಿ ಪ್ರೊ.ಪಿ.ಎಲ್.ಧರ್ಮ ಧರಣಿನಿರತ ಉಪನ್ಯಾಸಕರೊಂದಿಗೆ ದೂರವಾಣಿ ಮೂಲಕ ಮಾತನಾಡಿ, ಸಮಸ್ಯೆಗಳನ್ನು ಆಲಿಸಿದರು. ಶೀಘ್ರ ವೇತನ ಪಾವತಿಗೆ ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿ, ಧರಣಿ ಹಿಂಪಡೆಯುವಂತೆ ಮನವಿ ಮಾಡಿದರು.

ನಂತರ ಮನವಿ ಬಗ್ಗೆ ಚರ್ಚೆ ನಡೆಸಿದ ಉಪನ್ಯಾಸಕರು, ವೇತನ ಪಾವತಿ ವ್ಯವಸ್ಥೆಯಲ್ಲಿ ಹಲವು ಗೊಂದಲಗಳು ಇರುವುದರಿಂದ ವಿಶ್ವವಿದ್ಯಾನಿಲಯವನ್ನು ಪ್ರತಿನಿಧಿಸುವ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿ, ನಿರ್ಧಾರಕ್ಕೆ ಬರಲು ಸಾಧ್ಯ ಎನ್ನುವ ಕಾರಣದಿಂದ ಧರಣಿ ಮುಂದುವರೆಸಿದರು.

ತರಗತಿಗಳು ನಡೆಯದೇ ಇರುವುದರಿಂದ ವಿದ್ಯಾರ್ಥಿಗಳು ಚಿಂತಿತರಾಗಿ ಉಪನ್ಯಾಸಕರ ಸಂಕಷ್ಟಗಳನ್ನು ಆಲಿಸಿ, ಧರಣಿಗೆ ಬೆಂಬಲ ಸೂಚಿಸಿದರು.



ಮಡಿಕೇರಿಯಲ್ಲಿ ಧರಣಿ ನಡೆಸುತ್ತಿರುವ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜು ಅತಿಥಿ ಉಪನ್ಯಾಸಕರಿಗೆ ವಿದ್ಯಾರ್ಥಿಗಳು ಬೆಂಬಲ ಸೂಚಿಸಿದರು.

ಇಂದು ಡಿಸಿ ಕಚೇರಿ ಎದುರು ಸಿಎನ್‌ಸಿ ಧರಣಿ

ಮಡಿಕೇರಿ, ಮಾ.7– ಕೊಡವ ಮಹಿಳೆಯರ ಸಾಂವಿಧಾನಿಕ ಸಬಲೀಕರಣಕ್ಕಾಗಿ ಒತ್ತಾಯಿಸಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ದಿನವಾದ ಮಾ.8ರಂದು ಜಿಲ್ಲಾಧಿಕಾರಿ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಲು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ನಿರ್ಧರಿಸಿದೆ.



ಎನ್.ಯು.ನಾಚಪ್ಪ

ಮಹಿಳೆಯರ ಸಬಲೀಕರಣಕ್ಕಾಗಿ ಸಂಪೂರ್ಣ ವೆಚ್ಚ ಭರಿಸಬೇಕು ಮತ್ತು ಅದರ ಪ್ರಗತಿಯನ್ನು ವೇಗಗೊಳಿಸಬೇಕು ಎಂಬುವುದು 2024ರ ಮಹಿಳಾ ದಿನಾಚರಣೆಯ ವಿಶ್ವ ಸಂಸ್ಥೆಯ ಘೋಷವಾಕ್ಯವಾಗಿದ್ದು, ಕೊಡವ ಮಹಿಳೆಯರ ಸಬಲೀಕರಣಕ್ಕಾಗಿ ಸಿಎನ್‌ಸಿ ಹಕ್ಕು ಮಂಡಿಸಲಿದೆ. ಆದಿಮಸಂಜಾತ ಅತ್ಯಂತ ಸೂಕ್ಷ್ಮ ಬುಡಕಟ್ಟು ಕೊಡವ ಜನಾಂಗದ ಮಹಿಳೆಯರ ಹಕ್ಕುಗಳನ್ನು ಪ್ರತಿಪಾದಿಸುವ ಮೂಲಕ ಆಡಳಿತ ವ್ಯವಸ್ಥೆಯ ಗಮನ ಸೆಳೆಯಲು ಮಹಿಳಾ ದಿನಾಚರಣೆಯಂದು ಶಾಂತಿಯುತ ಧರಣಿ ನಡೆಸಲಾಗುವುದು. ಕೊಡವ ಭೂಮಿಯಲ್ಲಿ ಕೊಡವ ಮಹಿಳೆಯರ ಐತಿಹಾಸಿಕ ನಿರಂತರತೆ, ನೆಲ, ಭಾಷೆ, ಸಾಂಸ್ಕೃತಿಕ ಪರಂಪರೆ, ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಕೊಡವ ಲ್ಯಾಂಡ್ ಭೂ–ರಾಜಕೀಯ ಸ್ವಾಯತ್ತತೆ ನೀಡಬೇಕು. ಕೊಡವ ಬುಡಕಟ್ಟು ಜನಾಂಗಕ್ಕೆ ಸಂವಿಧಾನದ ಅನುಚ್ಛೇದ 244 ಆರ್‌ಡಬ್ಲ್ಯೂ 6 ಮತ್ತು 8ನೇ ಶೆಡ್ಯೂಲ್‌ನಡಿ ಕೊಡವ ಲ್ಯಾಂಡ್ ಕಲ್ಪಿಸಬೇಕು. ಆ ಮೂಲಕ ಕೊಡವ ಮಹಿಳೆಯರ ಸಬಲೀಕರಣಕ್ಕೆ ಅವಕಾಶ ನೀಡಬೇಕೆಂದು ಧರಣಿಯಲ್ಲಿ ಒತ್ತಾಯಿಸಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಗುವುದು ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚೈನ್‌ಗೇಟ್ ಬಸ್ ತಂಗುದಾಣ ತೆರವು

ಮಡಿಕೇರಿ: ಅಪಾಯಕ್ಕೆ ಆಹ್ವಾನ ನೀಡುತ್ತಿದ್ದ ನಗರದ ಚೈನ್‌ಗೇಟ್ ಬಸ್ ತಂಗುದಾಣವನ್ನು ಗುರುವಾರ ತೆರವುಗೊಳಿಸಲಾಯಿತು.

ಮೈಸೂರು ಮತ್ತು ಗೌಡ ಸಮಾಜ ರಸ್ತೆಯಲ್ಲಿ ವಾಹನಗಳ ನಡುವೆ ಅಪಘಾತವಾಗಿ ಸಾವು, ನೋವುಗಳು ಸಂಭವಿಸುತ್ತಿತ್ತು. ಅಪಘಾತಕ್ಕೆ ಈ ಬಸ್ ತಂಗುದಾಣವೇ ಕಾರಣ ಎನ್ನುವ ಅಭಿಪ್ರಾಯ ಸಾರ್ವಜನಿಕ ವಲಯದಿಂದ ಕೇಳಿ ಬಂದಿತ್ತು. ಈ ಕುರಿತು ಹಲವು ಸಂಘ–ಸಂಸ್ಥೆಗಳು ನಗರಸಭೆ ಮತ್ತು ಜಿಲ್ಲಾಡಳಿತಕ್ಕೂ ಮನವಿ ಸಲ್ಲಿಸಿ ಬಸ್ ತಂಗುದಾಣವನ್ನು ತೆರವುಗೊಳಿಸಿ, ಬೇರೆಡೆ ನಿರ್ಮಿಸುವಂತೆ ಒತ್ತಾಯಿಸಿದ್ದವು.

ಇತ್ತೀಚೆಗೆ ಯುವಕ ಅಪಘಾತದಿಂದ ಮೃತಪಟ್ಟಿದ್ದು, ಈತ ಸಾವಿಗೆ ನಾನೇ ಕಾರಣ ಎಂದು ಮನನೊಂದು ವ್ಯಕ್ತಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣವೂ ನಡೆದಿತ್ತು. ಈ ಹಿನ್ನೆಲೆಯಲ್ಲಿ ಮಡಿಕೇರಿ ಶಾಸಕ ಡಾ.ಮಂತರ್‌ಗೌಡ ಸೂಚನೆ ಮೇರೆಗೆ ಬಸ್ ತಂಗುದಾಣವನ್ನು ತೆರವುಗೊಳಿಸಲಾಯಿತು. ಪರ್ಯಾಯವಾಗಿ ಬೇರೆಡೆ ಬಸ್ ತಂಗುದಾಣ ನಿರ್ಮಿಸಲು ನಗರಸಭೆ ನಿರ್ಧರಿಸಿದೆ.

ಮೈಷುಗರ್ ಆವರಣದಲ್ಲಿ ಸಾಫ್ಟ್‌ವೇರ್ ಪಾರ್ಕ್ ನಿರ್ಮಾಣದ ಪ್ರಸ್ತಾವನೆ ಇಲ್ಲ

ಜೂನ್‌ನಿಂದ ಕಬ್ಬು ನುರಿಸುವಿಕೆ ಆರಂಭ



ಮಂಡ್ಯ ಜಿಪಂನಲ್ಲಿ ಸಭೆ ನಡೆಸಿದ ಸಚಿವ ಚಲುವರಾಯಸ್ವಾಮಿ.

ಮಂಡ್ಯ,ಮಾ.7– ಹೊಸ ಸಕ್ಕರೆ ಕಾರ್ಖಾನೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಇನ್ನೂ ಯಾವುದೇ ಸ್ಥಳ ನಿಗದಿಯಾಗಿಲ್ಲ ಹಾಗೂ ಮೈಷುಗರ್ ಸಕ್ಕರೆ ಕಾರ್ಖಾನೆ ಸ್ಥಳದಲ್ಲಿ ಹೊಸ ಸಾಫ್ಟ್‌ವೇರ್ ಪಾರ್ಕ್ ನಿರ್ಮಾಣ ಮಾಡುವ ಬಗ್ಗೆ ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇಲ್ಲ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಸ್ಪಷ್ಟಪಡಿಸಿದರು.

ಗುರುವಾರ ಜಿಲ್ಲಾ ಪಂಚಾಯಿತಿಯಲ್ಲಿ ನಡೆದ ಮಂಡ್ಯ ಮೈಷುಗರ್ ಸಕ್ಕರೆ ಕಾರ್ಖಾನೆಯಲ್ಲಿ 2024–25ನೇ ಸಾಲಿನಲ್ಲಿ ಕಬ್ಬು ಅರೆಸುವ ಸಂಬಂಧ ಹಾಗೂ ಟ್ರಯಲ್ ಬ್ಲಾಸ್ಟ್ ಸಂಬಂಧ ಸಭೆ ನಡೆಸಿ ಮಾತನಾಡಿದ ಅವರು, ಶಾಸಕರು ತಮ್ಮ ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದಂತೆ ಹೊಸ ಯೋಜನೆಗಳನ್ನು ರೂಪಿಸುತ್ತಾರೆ. ಅದನ್ನೂ ಸಹ ಎಲ್ಲರೊಂದಿಗೆ ಚರ್ಚಿಸಿ ನಂತರ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಹೊಸ ಸಕ್ಕರೆ ಕಾರ್ಖಾನೆ ನಿರ್ಮಾಣ ಮಾಡಲು ಸರ್ಕಾರ ನೀಡುವ ಅನುದಾನದೊಂದಿಗೆ ಸಕ್ಕರೆ ಕಾರ್ಖಾನೆಯಿಂದ ಸಾಲ ಪಡೆದು ಅನುದಾನ ಕ್ರೋಢೀಕರಿಸಲು ಇರುವ ಸೌಲಭ್ಯಗಳ ಬಗ್ಗೆ ಯೋಜನೆ ರೂಪಿಸಿ ಎಲ್ಲರ ಅಭಿಪ್ರಾಯ ಪಡೆದು ನಂತರ ತೀರ್ಮಾನ ಕೈಗೊಳ್ಳಲಾಗುವುದು. ಮೈಷುಗರ್ ಸಕ್ಕರೆ ಕಾರ್ಖಾನೆಯಲ್ಲಿ ಇರುವ ಯಂತ್ರಗಳು ಮತ್ತು ಅವುಗಳ ಸ್ಥಿತಿಗತಿಗಳ ಬಗ್ಗೆ ತಾಂತ್ರಿಕ ವರದಿ ಪಡೆದು, ಅವುಗಳ ಬಗ್ಗೆ ರೈತ ಮುಖಂಡರೊಂದಿಗೆ ಚರ್ಚಿಸಿ ಇರುವ ಸಕ್ಕರೆ ಕಾರ್ಖಾನೆ ಸುಧಾರಿಸುವ ಬಗ್ಗೆ ಅಥವಾ ಹೊಸ ಸಕ್ಕರೆ ಕಾರ್ಖಾನೆ ಪ್ರಾರಂಭಿಸುವ ಬಗ್ಗೆ ಸೂಕ್ತ ನಿರ್ಣಯ ಮುಂದಿನ ದಿನಗಳಲ್ಲಿ ಕೈಗೊಳ್ಳಲಾಗುವುದು. ಕೃಷಿ ಸಚಿವನಾಗಿ ರೈತರ ಆರ್ಥಿಕ ಸ್ಥಿತಿ ಸುಧಾರಿಸಲು ಸದಾ ಚಿಂತನೆ ನಡೆಸುತ್ತೇನೆ ಎಂದು ಭರವಸೆ ನೀಡಿದರು.

ಮೈಷುಗರ್ ಸಕ್ಕರೆ ಕಾರ್ಖಾನೆಯಲ್ಲಿ ಹಲವಾರು ಲೋಪಗಳಿವೆ ಎಂಬ ದೂರುಗಳಿವೆ. ಅವುಗಳ ಬಗ್ಗೆ ಪರಿಶೀಲಿಸಿ ಕಾನೂನು ರೀತ್ಯ ಕ್ರಮ ಕೈಗೊಳ್ಳಲಾಗುವುದು. ಮೈಷುಗರ್ ಸಕ್ಕರೆ ಕಾರ್ಖಾನೆಯ ಮಂಡ್ಯ ಕಚೇರಿಯಲ್ಲಿ ಕಾರ್ಯನಿರ್ವಹಿಸುವಂತಹ ಎಂ.ಡಿ ಅವರನ್ನು ನಿಯೋಜಿಸಲು ಎಲ್ಲಾ ರೀತಿಯ ಪ್ರಯತ್ನ ನಡೆಸಲಾಗುವುದು ಎಂದರು.

> "ಟ್ರಯಲ್ ಬ್ಲಾಸ್ಟ್ ನಡೆಸಲೇಬೇಕು ಎಂಬುದು ಜಿಲ್ಲಾಡಳಿತ ಅಥವಾ ಸರ್ಕಾರದ ನಿರ್ಧಾರವಲ್ಲ. ಅದು ನ್ಯಾಯಾಲಯದ ಆದೇಶ. ಟ್ರಯಲ್ ಬ್ಲಾಸ್ಟ್‌ನಿಂದ ಕೆಆರ್‌ಎಸ್ ಜಲಾಶಯಕ್ಕೆ ಯಾವುದೇ ರೀತಿಯ ತೊಂದರೆ ಇಲ್ಲ ಎಂದು ತಾಂತ್ರಿಕ ವರದಿ ಇದೆ. ಗಣಿಗಾರಿಕೆಯನ್ನು ಕೆಆರ್‌ಎಸ್‌ನ 20 ಕಿ.ಮೀ ವ್ಯಾಪ್ತಿಯಲ್ಲಿ ನಿಷೇಧಿಸಲಾಗಿದೆ. ಟ್ರಯಲ್ ಬ್ಲಾಸ್ಟ್ ನಂತರ ಇದರ ವ್ಯಾಪ್ತಿ ಕಡಿಮೆಯಾಗಬಹುದು ಎಂದು ರೈತರಲ್ಲಿ ಆತಂಕವಿದೆ. ಟ್ರಯಲ್ ಬ್ಲಾಸ್ಟ್ ಕುರಿತಂತೆ ಅಡ್ವೋಕೇಟ್ ಜನರಲ್ ಜೊತೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು
> –ಸಚಿವ ಚಲುವರಾಯಸ್ವಾಮಿ.

ಸಭೆಯಲ್ಲಿ ಸಂಸದೆ ಸುಮಲತಾ ಅಂಬರೀಷ್, ಶಾಸಕ ದರ್ಶನ್ ಪುಟ್ಟಣ್ಣಯ್ಯ, ಮೈಷುಗರ್ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಸಿ.ಡಿ. ಗಂಗಾಧರ್, ಜಿಪಂ ಸಿಇಓ ಶೇಕ್ ತನ್ವೀರ್ ಆಸಿಫ್, ಎಸ್ಪಿ ಯತೀಶ್, ಕಾವೇರಿ ನೀರಾವರಿ ನಿಗಮದ ಅಧೀಕ್ಷಕ ಇಂಜಿನಿಯರ್ ರಘುರಾಮ್, ಅಧಿಕಾರಿಗಳು ಮತ್ತು ಜನಪ್ರತಿನಿದಿಗಳು ಸೇರಿದಂತೆ ರೈತ ಮುಖಂಡರುಗಳು ಉಪಸ್ಥಿತರಿದ್ದು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಸ್ಕೂಟರ್‌ಗೆ ಅಡ್ಡ ಬಂದ ಶಾಲಾ ಬಾಲಕಿ ಮೇಲೆ ಕಸಾಪ ಮುಖಂಡನಿಂದ ಹಿಗ್ಗಾಮುಗ್ಗ ಹಲ್ಲೆ



ಮಂಡ್ಯ: ಸ್ಕೂಟರ್‌ಗೆ ಅಡ್ಡ ಬಂದಳೆಂಬ ಕ್ಷುಲ್ಲಕ ಕಾರಣಕ್ಕೆ ಕಸಾಪ ಮುಖಂಡ ಶಾಲಾ ಬಾಲಕಿ ಮೇಲೆ ಹಿಗ್ಗಾಮುಗ್ಗ ಹಲ್ಲೆ ನಡೆಸಿರುವ ಘಟನೆ ಮಂಡ್ಯದ ಸುಭಾಷ್ ನಗರದ 3ನೇ ಕ್ರಾಸ್‌ನಲ್ಲಿ ನಡೆದಿದ್ದು, ಹಲ್ಲೆಯ ವೀಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಶಾಲಾ ಸಮವಸ್ತ್ರ ಧರಿಸಿದ್ದ ವಿದ್ಯಾರ್ಥಿನಿಯೋರ್ವಳು ಸೈಕಲ್‌ನಲ್ಲಿ ಅವಸರವಾಗಿ ಶಾಲೆಗೆ ತೆರಳುತ್ತಿದ್ದಾಗ ತನಗೆ ಅಡ್ಡ ಬಂದಳು ಎಂಬ ಕಾರಣಕ್ಕೆ ವಿದ್ಯುತ್ ಚಾಲಿತ ಸ್ಕೂಟರ್ ಸವಾರ ಹೆಣ್ಣು ಮಗು ಎಂಬುದನ್ನು ನೋಡದೇ ಕಪಾಳ ಮತ್ತು ತಲೆಗೆ ಬಲವಾಗಿ ಹೊಡೆದಿದ್ದಾನೆ.

ಬಾಲಕಿ ಹಲವು ಬಾರಿ ಕ್ಷಮೆ ಕೋರಿ ಅಳುತ್ತಾ ನಿಂತರೂ ಕರುಣೆ ಇಲ್ಲದಂತೆ ಹಲ್ಲೆ ಮಾಡಿದ ಬೈಕ್ ಸವಾರನ ಕೃತ್ಯವನ್ನು ಸ್ಥಳೀಯರು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದು, ಆತನ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹಲ್ಲೆ ನಡೆಸಿದವನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಎಂ.ಬಿ. ರಮೇಶ್ ಎಂದು ಎಫ್‌ಐಆರ್ ದಾಖಲಿಸಿಕೊಂಡಿರುವ ಮಂಡ್ಯ ಪಶ್ಚಿಮ ಠಾಣೆ ಪೊಲೀಸರು ತಿಳಿಸಿದ್ದಾರೆ

ಮಂಡ್ಯ ಲೋಕಸಭಾ ಕ್ಷೇತ್ರ

ಬಿಜೆಪಿ ಹೈಕಮಾಂಡ್ ನಿರ್ಧಾರಕ್ಕೆ ಬದ್ಧ

ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಮಹತ್ವದ ಘೋಷಣೆ



ಮಂಡ್ಯ,ಮಾ.7– ಮುಂದಿನ ಸಾರ್ವತ್ರಿಕ ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಮಂಡ್ಯ ಕ್ಷೇತ್ರದ ವಿಚಾರವಾಗಿ ಬಿಜೆಪಿ ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧಳಾಗಿದ್ದು, ಪಕ್ಷದ ನಿರ್ಧಾರಕ್ಕಾಗಿ ಕಾಯುತ್ತಿದ್ದೇನೆ ಎಂದು ಸಂಸದೆ ಸುಮಲತಾ ಅಂಬರೀಷ್ ಸ್ಪಷ್ಟಪಡಿಸಿದರು.

ನಿನ್ನೆ ಮಂಡ್ಯ ಕ್ಷೇತ್ರದ ಟಿಕೆಟ್ ವಿಚಾರವಾಗಿ ಸಭೆ ಕರೆದಿದ್ದ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಮಂಡ್ಯ ಟಿಕೆಟ್ ಜೆಡಿಎಸ್ ಪಕ್ಷವೇ ಉಳಿಸಿಕೊಳ್ಳಲಿದೆ ಎಂಬ ಹೇಳಿಕೆ ಕೊಟ್ಟ ಮರು ದಿನವೇ ಇಂದು ತಮ್ಮ ಚಾಮುಂಡೇಶ್ವರಿ ನಗರದ ನಿವಾಸದಲ್ಲಿ ತುರ್ತು ಸುದ್ದಿಗೋಷ್ಠಿ ನಡೆಸಿದ ಸುಮಲತಾ, ಪಕ್ಷ ತೆಗೆದುಕೊಳ್ಳುವ ನಿರ್ಧಾರವನ್ನು ಪಾಲಿಸಲು ಸಿದ್ಧನಿದ್ದೇನೆ ಎಂದು ಘೋಷಿಸಿದರು.

ಮಂಡ್ಯ ಟಿಕೆಟ್ ಯಾರಿಗೆ ಎಂಬುದು ಘೋಷಣೆಯಾಗುತ್ತಿದ್ದಂತೆಯೇ ಸಭೆ ನಡೆಸುವೆ. ತಾಲೂಕುವಾರು ಪ್ರವಾಸ, ಸಭೆ ಮಾಡುತ್ತೇನೆ. ಜೆಡಿಎಸ್ ಸಭೆ ನಡೆಸಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಅದು ಅವರ ಪಕ್ಷದ ಆಂತರಿಕ ವಿಚಾರ. ಅದರಲ್ಲಿ ನಾನು ಮಧ್ಯ ಪ್ರವೇಶ ಮಾಡೋದು ಸರಿಯಲ್ಲ. ಮೈತ್ರಿ ಧರ್ಮ ಪಾಲನೆಗೆ ಅವರು ನಿರ್ಣಯ ಕೈಗೊಂಡಿರುವುದು ಸ್ವಾಗತದ ವಿಚಾರ ಎಂದರು.

ನನ್ನನ್ನು ಒಂದು ಪಕ್ಷಕ್ಕೆ ಕಂಪೇರ್ ಮಾಡಬೇಡಿ. ಹೊಂದಾಣಿಕೆ ಸೀಟು ಹಂಚಿಕೆ ಇರೋದು ಬಿಜೆಪಿ– ಜೆಡಿಎಸ್ ನಡುವೆ ಮಾತ್ರ ಇಡೀ ರಾಜ್ಯದಲ್ಲಿ ಸೀಟು ಹಂಚಿಕೆಯ ಬಗ್ಗೆ ಅವರು ಸಭೆ ಮಾಡುತ್ತಾರೆ. ಮಂಡ್ಯ ಟಿಕೆಟ್ ಯಾರಿಗೆ ಎಂಬುದನ್ನು ಕೆಲವೇ ದಿನಗಳಲ್ಲಿ ಬಿಜೆಪಿ ಹೈಕಮಾಂಡ್ ತಿಳಿಸಲಿದ್ದು, ಟಿಕೆಟ್ ಯಾರಿಗೇ ಸಿಕ್ಕರೂ ನಾನು ಮಂಡ್ಯವನ್ನು ಬಿಟ್ಟು ಹೋಗಲ್ಲ ಕೆಲವೇ ದಿನಗಳಲ್ಲಿ ಎಲ್ಲವೂ ಗೊತ್ತಾಗುತ್ತದೆ ಎಂದು ಹೇಳಿದರು.

ಮೈತ್ರಿ ಧರ್ಮ ಎನ್ನೋದು ಎರಡು ಪಕ್ಷಗಳ ನಡುವೆ ಇರುವ ಮಾತು. ಸದ್ಯ ನಾನು ಬಿಜೆಪಿ ಸಂಸದೆಯಾಗೋಕೆ ಇಚ್ಚಿಸಿದ್ದು, ಮೈತ್ರಿ ಪಾಲನೆಯ ಬಗ್ಗೆ ಮಾತನಾಡುವಷ್ಟು ದೊಡ್ಡ ಮಟ್ಟದಲ್ಲಿ ನಾನಿಲ್ಲ. ನನಗೆ ಹೈಕಮಾಂಡ್ ವಿಶ್ವಾಸದ ಮಾತು ಹೇಳಿದೆ. ಅದಕ್ಕೆ ನಾನು ಟಿಕೆಟ್ ಸಿಗುವ ವಿಶ್ವಾಸ ಹೊಂದಿರುವೆ. ಯಾರು ನಾವು ಅಂದುಕೊಂಡಿದ್ದು ಆಗಬೇಕೆಂದು ಕೂತುಕೊಳ್ಳಲ್ಲ. ಏನು ಬೇಕಾದರೂ ಆಗಲಿ ನೋಡೋಣ ಎಂದರು.

ಅಂಡರ್ ಪಾಸ್ ವಿಚಾರವಾಗಿ ಶಾಸಕ ಗಣಿಗ ರವಿಕುಮಾರ್ ಪ್ರತಿಭಟನೆ ವಿಚಾರದ ಬಗ್ಗೆ ಪ್ರತಿಕ್ರಿಯಿಸಿ, ಹನಕೆರೆ ಗ್ರಾಮದ ಬಳಿ ಅಂಡರ್ ಪಾಸ್ ಸೇರಿದಂತೆ ಅಡಿಷನಲ್ ಕೆಲಸಕ್ಕಾಗಿ ಹೆಚ್ಚುವರಿ ಹಣ ಬಿಡುಗಡೆ ಮಾಡಿದೆ. ಅಂತಿಮವಾಗಿ ಸಚಿವರ ಸಹಿ ಆಗಬೇಕಿದೆ ಅದೊಂದೇ ಬಾಕಿ ಇದೆ. ಈ ಹಂತದಲ್ಲಿ ಪ್ರತಿಭಟನೆ ಮಾಡೋದು ಎಷ್ಟು ಸರಿ? ಅವರಿಗೆ ಇದು ಗೊತ್ತಿದೆಯೋ ಇಲ್ವೋ. ಗೊತ್ತಿದ್ದೂ ಈ ರೀತಿ ಮಾಡ್ತಿದ್ದಾರೋ ಗೊತ್ತಿಲ್ಲ ಸುಳ್ಳು ಹೇಳಿ ಈ ರೀತಿ ದಿಕ್ಕು ತಪ್ಪಿಸುವ ಕೆಲಸ ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ನನ್ನ ಹೋರಾಟದಿಂದ ಆಗಿದೆ ಎಂದು ಬಿಂಬಿಸಿಕೊಳ್ಳುವ ಪ್ರಯತ್ನ ಇರಬಹುದು. ಅರ್ಥಬಂರ್ಥ ತಿಳಿದು ಮಾತಾಡೋದು ಸರಿಯಲ್ಲ. ನನಗೆ ಕ್ರೆಡಿಟ್ ಏನೂ ಬೇಡ. ನನಗೆ ಅದರ ಅವಶ್ಯಕತೆ ಇಲ್ಲ. ಗಡ್ಕರಿ ಅವರನ್ನು ಸಾಕಷ್ಟು ಸಲ ಭೇಟಿ ಮಾಡಿ ಹಲವು ಬೇಡಿಕೆ ಇಟ್ಟಿದ್ದೆ. ಅದರ ಫಲವಾಗಿ ಅನುಮೋದನೆ ಸಿಕ್ಕಿದೆ. ಗಡ್ಕರಿ, ಬಿಜೆಪಿ ಸರ್ಕಾರ ಸಾಕಷ್ಟು ಹೆದ್ದಾರಿ ಅಭಿವೃದ್ಧಿ ಮಾಡಿದೆ. ಕಾಶ್ಮೀರದಿಂದ ಕನ್ಯಾಕುಮಾರಿವರೆಗೂ ರಸ್ತೆ ಆಗಿದೆ. ಇದರ ಕ್ರೆಡಿಟ್‌ನ ಬಿಜೆಪಿಗೆ ಕೊಡಲು ಕಾಂಗ್ರೆಸ್‌ನವರು ಸಿದ್ಧರಿಲ್ಲ. ಹೀಗಾಗಿ ಈ ರೀತಿಯ ಹೋರಾಟ ಮಾಡ್ತಿದ್ದಾರೆ ಎಂದು ಕಿಡಿಕಾರಿದರು.

ಮಹಾಶಿವರಾತ್ರಿ ಪೂಜೆ

ಪಾಂಡವಪುರ, ಮಾ.7– ಓಂಕಾರೇಶ್ವರ ಚಾರಿಟಬಲ್ ಟ್ರಸ್ಟ್ ವತಿಯಿಂದ ಮಂಡ್ಯ ಜಿಲ್ಲೆ, ಪಾಂಡವಪುರ ತಾಲೂಕು ದೊಡ್ಡೇಗೌಡನಕೊಪ್ಪಲಿನ ಸಮೀಪವಿರುವ ಕಾವೇರಿ ಸಾಯಿಧಾನದಲ್ಲಿ ನಾಳೆ (ಮಾ.8) 16ನೇ ವರ್ಷದ ಮಹಾಶಿವರಾತ್ರಿಯನ್ನು ಏರ್ಪಡಿಸಲಾಗಿದೆ. ಶ್ರೀ ಓಂಕಾರೇಶ್ವರ ಸ್ವಾಮಿಗೆ ಮಾನಸ ಸರೋವರದಿಂದ ತಂದಿರುವ ಪವಿತ್ರ ಜಲದಿಂದ ರುದ್ರಾಭಿಷೇಕ. ಲಕ್ಷ ಬಿಲ್ವಾರ್ಚನೆ, ಜಾವ ಜಾವದ ಪೂಜೆ ನಡೆಸಲಾಗುವುದು.

ಭಾರತ ಆಧ್ಯಾತ್ಮಿಕ ದೇಶ: ಬಿ.ಕೆ.ಲಕ್ಷ್ಮೀಜಿ

ಚಾಮರಾಜನಗರ, ಮಾ.7– ಭಾರತ ಆಧ್ಯಾತ್ಮಿಕ ದೇಶವಾಗಿದ್ದು, ಹಬ್ಬಗಳ ಮೂಲಕ ಸಂಸ್ಕೃತಿಯನ್ನು ಸಾರಿ ಸರ್ವರಲ್ಲೂ ಸಾಮರಸ್ಯ, ಸ್ವಚ್ಛತೆ, ಆತ್ಮೀಯತೆ ಬೆಳೆಸುವಲ್ಲಿ ತುಂಬಾ ಪ್ರಭಾವ ಬೀರುತ್ತದೆ ಎಂದು ಮೈಸೂರು ಉಪವಲಯದ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಮುಖ್ಯ ಸಂಚಾಲಕಿ ಬಿ.ಕೆ.ಲಕ್ಷ್ಮೀಜಿ ಅಭಿಪ್ರಾಯಪಟ್ಟರು.

ನಗರದ ಶ್ರೀ ಚಾಮರಾಜೇಶ್ವರ ದೇವಾಲಯ ಮುಂಭಾಗ ಅಂತಾರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆಯ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ವತಿಯಿಂದ ಆಯೋಜಿಸಿರುವ ದ್ವಾದಶ ಜ್ಯೋತಿರ್ಲಿಂಗ ದರ್ಶನ ಉದ್ಘಾಟನೆಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಜಾಪಿತ ಈಶ್ವರೀಯ ವಿಶ್ವವಿದ್ಯಾಲಯ ಇಂದು ಜಗತ್ತಿನಲ್ಲಿ 147 ದೇಶಗಳಲ್ಲಿ ಕಾರ್ಯನಿರ್ವಹಿಸಿ ಮಾನವ ಕುಲಕ್ಕೆ ಶಾಂತಿ ಸಂದೇಶ, ಯೋಗ, ರಾಜಯೋಗ ಧ್ಯಾನ ಕೇಂದ್ರಗಳನ್ನು ಸ್ಥಾಪಿಸಿದೆ. ಯೋಗ ಜೀವನದ ಮೂಲಕ ಜ್ಞಾನದ ಜೀವನ ನಡೆಸಿ ಸತ್ಯ ಹೃದಯ, ಸರಳ ವಿಧಾನದ ಮೂಲಕ ದುಷ್ಕರ್ಮವನ್ನು ಹೋಗಲಾಡಿಸಬೇಕು. ಮನುಷ್ಯ ವ್ಯರ್ಥ ಚಿಂತನೆ ಬಿಟ್ಟು ಸಕಾರಾತ್ಮಕ ಚಿಂತನೆ, ದೈವ ಸ್ಮರಣೆಯ ಮೂಲಕ ಸನ್ಮಾರ್ಗದಲ್ಲಿ ನಡೆಯಬೇಕು ಎಂದರು.

ಹರವೆ ವಿರಕ್ತ ಮಠದ ಶ್ರೀ ಸರ್ಪಭೂಷಣ ಸ್ವಾಮೀಜಿ ಮಾತನಾಡಿ, ಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ದ್ವಾದಶ ಲಿಂಗಗಳ ದರ್ಶನದ ಭಾಗ್ಯ ಕರುಣಿಸುವ ಮೂಲಕ ಪ್ರಜಾಪಿತ ಬ್ರಹ್ಮಾಕುಮಾರಿ ಸಂಸ್ಥೆ ನಗರದ ಜನರಿಗೆ ಉತ್ತಮ ಅವಕಾಶ ಒದಗಿಸಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೊಳ್ಳೇಗಾಲ ಮುಖ್ಯ ಸಂಚಾಲಕರಾದ ಪ್ರಭಾಮಣಿಜೀ, ಬಿಳಿಗಿರಿರಂಗನ ಬೆಟ್ಟದ ವಿಶ್ವಶಾಂತಿ ಆಶ್ರಮದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಮಾಜಿ ಶಾಸಕರಾದ ಪರಿಮಳಾ ನಾಗಪ್ಪ, ಎಸ್.ಬಾಲರಾಜು, ಕಸಾಪ ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ ಮಾತನಾಡಿದರು. ಸ್ವಾಮಿ ವಿವೇಕಾನಂದ ರಾಷ್ಟ್ರ ರಾಜ್ಯ ಸದ್ಭಾವನಾ ಪ್ರಶಸ್ತಿ ಪುರಸ್ಕೃತೆ ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜೀ, ಉಪ ತಹಶೀಲ್ದಾರ್ ಗಿರಿಜಕ್ಕ, ಓಂಶಾಂತಿ ನ್ಯೂಸ್ ಸರ್ವಿಸ್‌ನ ಬಿ.ಕೆ.ಆರಾಧ್ಯ, ಸುರೇಶ್‌ನಾಗ್ ನಂಜುಂಡಸ್ವಾಮಿ ನಾರಾಯಣಶೆಟ್ಟಿ ಶ್ರೀನಿವಾಸ ತಾಂಡವಮೂರ್ತಿ ಡಾಪರಮೇಶ್ವರಪ್ಪ ಸುರೇಶ್ ಗೌಡ್ರು ಹಾಜರಿದ್ದರು. ಕಾರ್ಯಕ್ರಮಕ್ಕೂ ಮೊದಲು ಸೇವಾ ಕೇಂದ್ರದಿಂದ ದೇವಸ್ಥಾನವರೆಗೆ ರಾಜಯೋಗ ವಿದ್ಯಾರ್ಥಿಗಳು ಹಾಗೂ ಬ್ರಹ್ಮಾಕುಮಾರ ಕುಮಾರಿಯರು ಶಾಂತಿ ಶೋಭಾಯಾತ್ರೆ ನಡೆಸಿದರು. ಜ್ಯೋತಿರ್ಲಿಂಗಗಳ ಪುಣ್ಯ ದರ್ಶನ ಶುಕ್ರವಾರದಿಂದ ಮಾ.13ರವರೆಗೆ ಬೆಳಗ್ಗೆ 6 ರಿಂದ ರಾತ್ರಿ 8ರವರೆಗೆ ಇರುತ್ತದೆ.



ಚಾಮರಾಜನಗರದ ಚಾಮರಾಜೇಶ್ವರ ದೇವಾಲಯ ಮುಂಭಾಗ ಆಯೋಜಿಸಿರುವ ದ್ವಾದಶ ಜ್ಯೋತಿರ್ಲಿಂಗ ದರ್ಶನಕ್ಕೆ ಹರವೆ ವಿರಕ್ತ ಮಠದ ಶ್ರೀ ಸರ್ಪಭೂಷಣ ಸ್ವಾಮೀಜಿ, ಬಿಳಿಗಿರಿರಂಗನಬೆಟ್ಟದ ವಿಶ್ವಶಾಂತಿ ಆಶ್ರಮದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಚಾಲನೆ ನೀಡಿದರು. ಬಿ.ಕೆ.ಲಕ್ಷ್ಮೀಜಿ, ಪ್ರಭಾಮಣಿಜೀ, ಪರಿಮಳಾ ನಾಗಪ್ಪ, ಎಸ್.ಬಾಲರಾಜು ಇದ್ದರು.



ಚಾಮರಾಜನಗರ ನಗರಸಭೆ ವ್ಯಾಪ್ತಿಯ ಮತಗಟ್ಟೆ ಕೇಂದ್ರಗಳನ್ನು ಜಿಲ್ಲಾ ಯೋಜನಾ ನಿರ್ದೇಶಕಿ ಪಿ.ಸುಧಾ ಮತ್ತು ಪೌರಾಯುಕ್ತ ಎಸ್.ವಿ.ರಾಮದಾಸ್ ಪರಿಶೀಲಿಸಿದರು. ನಗರಸಭೆ ಆರೋಗ್ಯಾಧಿಕಾರಿ ಮಂಜುನಾಥ್, ಕಿರಿಯ ಇಂಜಿನಿಯರ್ ಮಂಜುನಾಥ್, ಕಂದಾಯ ಶಾಖೆಯ ನಂಜುಂಡ ಶೆಟ್ಟಿ, ಪಳನಿಸ್ವಾಮಿ ಇದ್ದರು.

ಕೆರೆಗಳ ಅಭಿವೃದ್ಧಿಗೆ ಕಾರ್ಯೋನ್ಮುಖರಾಗಿ

ಸಭೆಯಲ್ಲಿ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಶಿಲ್ಪನಾಗ್ ಸೂಚನೆ

ಚಾಮರಾಜನಗರ, ಮಾ.7– ಜಿಲ್ಲೆಯ ನಗರ ಹಾಗೂ ಗ್ರಾಮಾಂತರ ಪ್ರದೇಶಗಳ 100 ಕೆರೆಗಳನ್ನು ವಿಶೇಷವಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಅಗತ್ಯ ಸಿದ್ಧತೆ ಕಾರ್ಯಗಳಿಗೆ ಶೀಘ್ರವಾಗಿ ಕಾರ್ಯೋನ್ಮುಖರಾಗುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಶಿಲ್ಪನಾಗ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ಕೆರೆ, ಕುಂಟೆ, ಕಟ್ಟೆ ಜಲಾಶಯಗಳ ಸಂರಕ್ಷಣೆ ಕುರಿತು ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಶ್ರೀಧರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಸಾರ್ವಜನಿಕರು, ಜಾನುವಾರು, ಪ್ರಾಣಿ–ಪಕ್ಷಿಗಳಿಗೆ ಅನುಕೂಲವಾಗುವಂತೆ ವಿಶೇಷವಾಗಿ ಕೆರೆಗಳನ್ನು ಅಭಿವೃದ್ಧಿಪಡಿಸುವ ಕಾರ್ಯ ಕೈಗೆತ್ತಿಕೊಳ್ಳಬೇಕು. ಇದಕ್ಕಾಗಿ ಆಯ್ಕೆಯಾಗಿರುಗುವ ಕೆರೆಗಳನ್ನು ಪಟ್ಟಿ ಮಾಡಿಕೊಳ್ಳಬೇಕು. ಕೆರೆಗಳ ಹಸ್ತಾಂತರ, ದಾಖಲೆಗಳ ನಿರ್ವಹಣೆ, ಅನುದಾನ ಬಳಕೆ ಇನ್ನಿತರ ಪೂರ್ವ ಯೋಜನೆ ಕಾರ್ಯಗಳನ್ನು ತ್ವರಿತವಾಗಿ ನಿರ್ವಹಿಸುವಂತೆ ತಿಳಿಸಿದರು.

ಮಳೆಗಾಲಕ್ಕೂ ಮೊದಲೇ ಕೆರೆಗಳ ಹೂಳೆತ್ತುವ ಕಾಮಗಾರಿ ನಿರ್ವಹಿಸಿ, ಜಂಗಲ್ ಕಟಿಂಗ್ ಕಾರ್ಯವನ್ನು ಕೈಗೆತ್ತಿಕೊಳ್ಳಿ, ಗಡಿ ಗುರುತು, ಇತರೆ ಕಾಮಗಾರಿಗಳಿಗೆ ಮುಂದಾಗಿ. ದುರಸ್ತಿ ಕೆಲಸಗಳಿಗೆ ಸ್ಥಳೀಯವಾಗಿ ಲಭ್ಯವಾಗುವ ಯಂತ್ರೋಪಕರಣಗಳನ್ನು ಬಳಸಿಕೊಂಡು ವೇಗವಾಗಿ ಕೆಲಸ ಪೂರ್ಣಗೊಳಿಸಬೇಕು ಎಂದರು.

ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿ ಅಮೃತ್ 2ರಡಿ ಅಭಿವೃದ್ಧಿ ಪಡಿಸಲಿರುವ ಕಾಮಗಾರಿಗಳ ವಿವರ ಅಂದಾಜು ಪಟ್ಟಿಯನ್ನು ಸಲ್ಲಿಸಬೇಕು. ಸಿಎಸ್‌ಆರ್ ಅನುದಾನ ಬಳಸಿಕೊಂಡು ಕೆರೆಗಳ ಅಭಿವೃದ್ಧಿ ಮಾಡಬಹುದು. ನರೇಗಾ ಯೋಜನೆಯಡಿ ಕೆಲಸ ಪ್ರಾರಂಭಿಸಿ, ಆದ್ಯತೆ ಮೇರೆಗೆ ಮುಗಿಸಬೇಕು. ಕೆಲ ಕೆರೆಗಳ ಆರ್‌ಟಿಸಿ ಇಂಡೀಕರಣ ಬಾಕಿಯಿದೆ. ತ್ವರಿತವಾಗಿ ಇತ್ಯರ್ಥಪಡಿಸಿ ಬಾಕಿ ಸರ್ವೇ, ಒತ್ತುವರಿ ಹಾಗೂ ಒತ್ತುವರಿ ತೆರವುಗೊಳಿಸಿರುವ, ಹಸ್ತಾಂತರ ಬಾಕಿ ಕೆರೆಗಳ ಬಗ್ಗೆ ಸಮಗ್ರವಾಗಿ ಪರಿಶೀಲಿಸಿ ಪಟ್ಟಿಯೊಂದಿಗೆ ವರದಿ ಸಲ್ಲಿಸುವಂತೆ ತಿಳಿಸಿದರು.



ಚಾಮರಾಜನಗರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಕೆರೆ, ಜಲಾಶಯಗಳ ಸಂರಕ್ಷಣೆಯ ಸಭೆಯಲ್ಲಿ ಡಿಸಿ ಶಿಲ್ಪನಾಗ್ ಮಾತನಾಡಿದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಶ್ರೀಧರ, ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಉಪಕಾರ್ಯದರ್ಶಿ ಪಿ.ಲಕ್ಷ್ಮೀ, ಉಪವಿಭಾಗಾಧಿಕಾರಿ ಎಂ.ಶಿವಮೂರ್ತಿ ಇದ್ದರು.

> ಇಲಾಖೆಗಳಿಗೆ ಹಸ್ತಾಂತರವಾಗಿರುವ ಕೆರೆಗಳನ್ನು ಮುಂದೆ ಒತ್ತುವರಿಯಾಗದಂತೆ ನೋಡಿಕೊಳ್ಳುವುದು ಅಧಿಕಾರಿಗಳ ಜವಾಬ್ದಾರಿಯಾಗಿದೆ. ಜಿಲ್ಲಾಧಿಕಾರಿ ಈಗಾಗಲೇ ನೀಡಿರುವ ನಿರ್ದೇಶನದಂತೆ ಅಧಿಕಾರಿಗಳು ಕ್ರಮವಹಿಸಿದರೆ ಜಿಲ್ಲೆಯ ಕೆರೆಗಳು ಉತ್ತಮ ಸ್ಥಿತಿಗೆ ಬರಲಿವೆ. ಜನ–ಜಾನುವಾರುಗಳಿಗೆ ಅನುಕೂಲವಾಗಲಿದೆ.
> –ಎಂ.ಶ್ರೀಧರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ.

ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ, ಉಪಕಾರ್ಯದರ್ಶಿ ಪಿ.ಲಕ್ಷ್ಮೀ, ಉಪವಿಭಾಗಾಧಿಕಾರಿ ಎಂ.ಶಿವಮೂರ್ತಿ, ಕಾವೇರಿ ನೀರಾವರಿ ನಿಗಮ, ನೀರಾವರಿ ಇಲಾಖೆಗಳ ಅಧಿಕಾರಿಗಳು, ತಹಶೀಲ್ದಾರ್‌ಗಳು, ತಾಪಂ ಇಓಗಳು, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಪೌರಾಯುಕ್ತರು, ಮುಖ್ಯಾಧಿಕಾರಿಗಳು, ಇನ್ನಿತರ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

102 ವರ್ಷದ ವೃದ್ಧೆ ಮ.ಬೆಟ್ಟಕ್ಕೆ ಪಾದಯಾತ್ರೆ



ಪಾರ್ವತಮ್ಮ

ಚಾಮರಾಜನಗರ: ಪ್ರಸಿದ್ಧ ಯಾತ್ರಾ ಕ್ಷೇತ್ರವಾದ ಮಲೆ ಮಹದೇಶ್ವರ ಬೆಟ್ಟಕ್ಕೆ 102 ವರ್ಷದ ವೃದ್ಧೆ ಪಾದಯಾತ್ರೆ ಮಾಡಿ ಗಮನ ಸೆಳೆದಿದ್ದಾರೆ.

ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ಶತಾಯುಷಿ ಪಾರ್ವತಮ್ಮ ಅವರು ಕಳೆದ ನಾಲ್ಕೈದು ವರ್ಷಗಳಿಂದ ಪಾದಯಾತ್ರೆ ನಡೆಸುತ್ತಿದ್ದು, ತಾಳಬೆಟ್ಟದಿಂದ ಮಹದೇಶ್ವರಬೆಟ್ಟಕ್ಕೆ ಸುಮಾರು 18 ಕಿ.ಮೀ ಪಾದಯಾತ್ರೆ ನಡೆಸಿದ್ದಾರೆ. ಭಕ್ತರೊಬ್ಬರು ಅಜ್ಜಿಯ ಪಾದಯಾತ್ರೆಯ ವಿಡಿಯೋ ಚಿತ್ರೀಕರಿಸಿ, ಸಾಮಾಜಿಕ ಜಾಲತಾಣಗಳಲ್ಲಿ ಹರಿಯ ಬಿಟ್ಟಿದ್ದಾರೆ. ಇದೇ ವೇಳೆ ಪಾರ್ವತಮ್ಮ ಮಾತನಾಡಿ, ದೇಶ ಮತ್ತು ರೈತರಿಗೆ ಒಳ್ಳೆಯದಾಗಬೇಕು. ಕಾಡುಪ್ರಾಣಿಗಳಿಗೆ ನೀರಿಲ್ಲ, ಎಲ್ಲರಿಗೂ ಒಳ್ಳೆದಾಗಲಿ ಎಂದು ಬೇಡಿಕೊಂಡು ಮಾದಪ್ಪನ ದರ್ಶನಕ್ಕೆ ಹೋಗುತ್ತಿದ್ದೇನೆ ಎಂದು ಹೇಳಿದ್ದಾರೆ.

ಅಲ್ಲದೇ, ಇದೇ ವೇಳೆ ಮುಂದೆ ದೇಶದ ಪ್ರಧಾನಿ ಯಾರಾಗಬೇಕು ಎಂದು ಕೇಳಿದ್ದಕ್ಕೆ ಅಜ್ಜಿಯು, ಮೋದಿ ಬಂದರೆ ದೇಶಕ್ಕೆ ಒಳ್ಳೆಯದಾಗುತ್ತದೆ ಎಂದಿದ್ದಾರೆ.

ಎ.ಭಾಗಿ ನಿಧನ



ಸುಂಟಿಕೊಪ್ಪ: ಸುಂಟಿಕೊಪ್ಪ ಗ್ರಾಮ ಪಂಚಾಯಿತಿ ಸದಸ್ಯ ಐ.ಸೋಮನಾಥ್ ಅವರ ತಾಯಿ ಎ. ಭಾಗಿ(84) ಗುರುವಾರ ಸಂಜೆ ನಿಧನರಾದರು. ಮೃತರು ಐವರು ಪುತ್ರಿಯರು ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ. ಶುಕ್ರವಾರ (ಮಾ.8) ಮಧ್ಯಾಹ್ನ ಮಾದಾಪುರ ಹಿಂದೂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಜಾಗೃತಿ ಜಾಥಾ



ಮೈಸೂರು, ಮಾ.7(ಬಿಎಲ್‌ಯು)– ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮೈಸೂರಿನಲ್ಲಿ ಇಂದು ಜಾಗೃತಿ ಜಾಥಾ ಸೇರಿದಂತೆ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮ್ಯಾಜಿಕ್ ಬಸ್ ಇಂಡಿಯಾ ಫೌಂಡೇಷನ್‌ನವರು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಈ ಜಾಥಾ ಆಯೋಜಿಸಿದ್ದರು. ನೂರಾರು ಮಹಿಳೆಯರು ಭಾಗವಹಿಸಿದ್ದ ಜಾಥಾ, ನಗರದ ಪುರಭವನದಿಂದ ಹೊರಟು ಚಾಮರಾಜ ಒಡೆಯರ್ ವೃತ್ತ, ಅರಮನೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಮತ್ತೆ ಪುರಭವನ ತಲುಪಿತು.

ಮಹಿಳೆಯರನ್ನು ಸಮಾನರಾಗಿ ಕಾಣಿರಿ, ಹೆಣ್ಣನ್ನು ಗೌರವಿಸುವ ದೇಶ ಶ್ರೇಷ್ಠ, ಹೆಣ್ಣು ಸಂಸಾರದ ಕಣ್ಣು, ಮಹಿಳೆಯರಿಗೆ ಶಿಕ್ಷಣ ನೀಡಿ, ಭ್ರೂಣ ಹತ್ಯೆ ನಿಲ್ಲಿಸಿ ಎಂಬ ಹಲವು ಘೋಷಣಾ ಫಲಕ ಹಿಡಿದು ಮಹಿಳೆಯರ ನಡೆಸಿದ ಜಾಥಾ ಆಕರ್ಷಿಸಿತು. ತರುವಾಯ ಪುರಭವನದಲ್ಲಿ ಮಹಿಳೆಯರಿಗೆ ನಾಲ್ಕು ವಿವಿಧ ಕ್ರೀಡಾ ಚಟುವಟಿಕೆ ನಡೆಸಿ ಬಹುಮಾನ ವಿತರಿಸಲಾಯಿತು. ನಂತರ ಪುರಭವನ ಸಭಾಂಗಣದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ವೇದಿಕೆ ಕಾರ್ಯಕ್ರಮವನ್ನು ಮಾನಸ ಗಂಗೋತ್ರಿಯ ಇಎಂಆರ್‌ಸಿ ನಿರ್ದೇಶಕಿ ಪ್ರೊ.ಸ್ವಪ್ನಾ ಉದ್ಘಾಟಿಸಿದರು.

ಸೈಂಟ್ ಫಿಲೋಮಿನಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ.ಪೂರ್ಣಿಮಾ ಉಮೇಶ್, ಮ್ಯಾಜಿಕ್ ಬಸ್ ಇಂಡಿಯಾ ಫೌಂಡೇಷನ್ ಡಿಜಿಎಂ ಎನ್.ಟಿ.ವೆಂಕಟೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಮಹಿಳೆಯರನ್ನು ಸನ್ಮಾನಿಸಲಾಯಿತು.


ತಾಲೂಕು ಆಸ್ಪತ್ರೆಗಳಲ್ಲಿ ಟೆಲಿ ಐಸಿಯು ಕೇಂದ್ರಗಳ ಯಶಸ್ವಿ ಕಾರ್ಯನಿರ್ವಹಣೆ

● ಹೃದ್ರೋಗಗಳಿಗೂ ಸೂಕ್ತ ಸಮಯದಲ್ಲಿ ಚಿಕಿತ್ಸೆ ; 1500 ಮಂದಿಗೆ ಮರುಜೀವ ● ಜಿಲ್ಲಾ ಆಸ್ಪತ್ರೆಗಳ ಮೇಲಿನ ಒತ್ತಡ ನಿವಾರಣೆ

ಮೈಸೂರು, ಮಾ.7(ಜಿಎ)–ಮೈಸೂರು ಜಿಲ್ಲೆಯ ತಾಲೂಕು ಆಸ್ಪತ್ರೆಗಳಲ್ಲಿ ಆರಂಭಿಸಿರುವ ಟೆಲಿ ಐಸಿಯು ಕೇಂದ್ರಗಳಿಂದ ತಾಲೂಕು ಭಾಗದ ರೋಗಿಗಳಿಗೆ ಸಾಕಷ್ಟು ಅನುಕೂಲವಾಗಿದ್ದು, ಹೃದ್ರೋಗಗಳಿಗೆ ಸೂಕ್ತ ವೇಳೆಗೆ ಚಿಕಿತ್ಸೆ ಪಡೆದು 1,500ಕ್ಕೂ ಅಧಿಕ ಮಂದಿ ಮರುಜೀವ ಪಡೆದಿದ್ದಾರೆ.

ಮೈಸೂರು ವಿಭಾಗದ ಏಳು ಜಿಲ್ಲೆಗಳ ಒಟ್ಟು 11 ತಾಲೂಕುಗಳಲ್ಲಿ ಈ ಸೇವೆ ಆರಂಭವಾಗಿದ್ದು, ಏಳು ತಿಂಗಳ ಅವಧಿಯಲ್ಲಿ(2022ರ ಜೂನ್‌ನಿಂದ 2023ರ ಜನವರಿವರೆಗೆ) 5579 ಮಂದಿ ಚಿಕಿತ್ಸೆ ಪಡೆದಿದ್ದಾರೆ. ಮೈಸೂರಿನ ಕೆ.ಆರ್.ನಗರ, ನಂಜನಗೂಡು, ಹೆಚ್.ಡಿ.ಕೋಟೆ, ತಿ.ನರಸೀಪುರ ಮತ್ತು ಹುಣಸೂರು ತಾಲೂಕಿನ ಟೆಲಿ ಐಸಿಯುಗಳಿಂದ 1,500ಕ್ಕೂ ಅಧಿಕ ಮಂದಿ ಪ್ರಯೋಜನ ಪಡೆದುಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರವು ಹೆಚ್ಚುವರಿಯಾಗಿ ಒಟ್ಟು 30 ತಾಲೂಕು ಆಸ್ಪತ್ರೆಗಳಿಗೆ ಈ ಸೇವೆ ವಿಸ್ತರಿಸುವ ಚಿಂತನೆ ಹೊಂದಿದೆ.

ಮತ್ತೊಂದೆಡೆ ಟೆಲಿ ಐಸಿಯು ತಾಲೂಕು ಕೇಂದ್ರಗಳಲ್ಲಿಯೇ ಬಹುತೇಕ ತುರ್ತು ಚಿಕಿತ್ಸಾ ವ್ಯವಸ್ಥೆ ಲಭ್ಯವಿದೆ. ಹೀಗಾಗಿ ಮೈಸೂರು ವಿಭಾಗದಲ್ಲಿ ಮೈಸೂರು ಎಮರ್ಜೆನ್ಸಿ ಕೇರ್‌ಗಾಗಿ ತಾಲೂಕು ಕೇಂದ್ರದಿಂದ ಜಿಲ್ಲಾ ಕೇಂದ್ರಕ್ಕೆ ಬರುವ ರೋಗಿಗಳ ಸಂಖ್ಯೆ ಶೇ.80 ರಿಂದ ಶೇ. 20ಕ್ಕೆ ಇಳಿಮುಖವಾಗಿದೆ.


ಮೈಸೂರು ಟ್ರಾಮಾ ಕೇರ್ ಸೆಂಟರ್‌ನಲ್ಲಿರುವ ಜಿಲ್ಲಾ ಕೇಂದ್ರ ಹಬ್‌ನಿಂದ ತಜ್ಞ ವೈದ್ಯರು ತಾಲೂಕಿನ ಟೆಲಿ ಐಸಿಯುಗಳಲ್ಲಿರುವ ರೋಗಿಗಳ ಬಗ್ಗೆ ಮೇಲ್ವಿಚಾರಣೆ ನಡೆಸುತ್ತಿರುವುದು

ಮೈಸೂರು ವಿಭಾಗದ ಚಾಮರಾಜನಗರ–ಕೊಳ್ಳೇಗಾಲ, ಹಾಸನ–ಅರಕಲಗೂಡು, ಹೊಳೆನರಸೀಪುರ, ಕೊಡಗು–ವಿರಾಜಪೇಟೆ, ಸೋಮವಾರಪೇಟೆ ಮಂಡ್ಯ–ಮಳವಳ್ಳಿ, ನಾಗಮಂಗಲ, ಮೈಸೂರು–ಕೆ.ಆರ್.ನಗರ, ನಂಜನಗೂಡು, ಹೆಚ್.ಡಿ.ಕೋಟೆ, ತಿ.ನರಸೀಪುರ ಮತ್ತು ಹುಣಸೂರಿನ ತಾಲೂಕಿನ ಟೆಲಿ ಐಸಿಯು ವಿಸ್ತರಿಸಲಾಗಿದೆ.

ಹುಬ್ಬಳ್ಳಿ, ಬಳ್ಳಾರಿ, ಬೆಂಗಳೂರು ಸೇರಿ ಮೂರು ವಿಭಾಗದ 30 ಕೇಂದ್ರಗಳು ಸೇರಿದಂತೆ ರಾಜ್ಯಾದ್ಯಂತ ಒಟ್ಟು 41 ತಾಲೂಕು ಆರೋಗ್ಯ ಕೇಂದ್ರಗಳಲ್ಲಿ 10 ಹಾಸಿಗೆಯ ತುರ್ತು ಸೇವೆ ನೀಡುವ ಘಟಕವನ್ನು ಕಾರ್ಯಾರಂಭ ಮಾಡಲಾಗಿದೆ. ನಂತರ ಎಲ್ಲಾ ತಾಲೂಕು ಆಸ್ಪತ್ರೆಗಳಿಗೂ ಈ ಸೇವೆ ವಿಸ್ತರಣೆ ಮಾಡಲು ಆರೋಗ್ಯ ಇಲಾಖೆ ನಿರ್ಧರಿಸಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಟೆಲಿ ಐಸಿಯು ಕಾರ್ಯನಿರ್ವಹಣೆ : ಜಿಲ್ಲಾ ಕೇಂದ್ರದಲ್ಲಿ ಹಬ್‌ವೊಂದನ್ನು ಸ್ಥಾಪಿಸಿಕೊಂಡು ಅಲ್ಲಿರುವ ತಜ್ಞ ವೈದ್ಯರು ಟೆಲಿವಿಷನ್ ಹಾಗೂ ಸಿಸಿ ಕ್ಯಾಮರಾಗಳ ಮೂಲಕ ತಾಲೂಕು ಆಸ್ಪತ್ರೆಗಳಲ್ಲಿ ಸ್ಥಾಪಿಸಿರುವ ಟೆಲಿ ಐಸಿಯು ಘಟಕಕ್ಕೆ ತುರ್ತು ಚಿಕಿತ್ಸೆಗೆ ಬರುವ ರೋಗಿಗಳನ್ನು ಗಮನಿಸಿ ಅವರ ಸ್ಥಿತಿಗತಿಯನ್ನು ಪರಿಶೀಲಿಸಿ ಆನ್‌ಲೈನ್‌ನಲ್ಲಿಯೇ ಚಿಕಿತ್ಸೆಗೆ ಸೂಚನೆ ನೀಡುತ್ತಾರೆ. ಜಿಲ್ಲಾ ಕೇಂದ್ರದಲ್ಲಿರುವ ವೈದ್ಯರು ಹೇಳುವ ಸಲಹೆಯಂತೆ ತಾಲೂಕು ಕೇಂದ್ರದ ಟೆಲಿ ಐಸಿಯುನಲ್ಲಿರುವ ಸಿಬ್ಬಂದಿ ಚಿಕಿತ್ಸೆ ನೀಡುತ್ತಿದ್ದು, ಮೈಸೂರಿನ ಟ್ರಾಮಾ ಕೇರ್ ಸೆಂಟರ್‌ನಲ್ಲಿ ಮೈಸೂರು ಜಿಲ್ಲಾ ಕೇಂದ್ರದ ಹಬ್ ಸ್ಥಾಪಿಸಿದ್ದು, ಅಲ್ಲಿ ನುರಿತ ತಜ್ಞ ವೈದ್ಯರು 24X7 ಕಾರ್ಯನಿರ್ವಹಿಸುತ್ತಿದ್ದಾರೆ. ಜಿಲ್ಲಾ ಕೇಂದ್ರ ಹಬ್‌ನ ಸಹಾಯ ಪಡೆದುಕೊಂಡು ತಾಲೂಕಿನ ಟೆಲಿ ಐಸಿಯುನ ಸಿಬ್ಬಂದಿ ತುರ್ತು ಚಿಕಿತ್ಸೆ ರೋಗಿಯ ಆರೋಗ್ಯ ಸ್ಥಿತಿಯನ್ನು ಸ್ಥಿರ ಗೊಳಿಸಿ, ಹೆಚ್ಚಿನ ಚಿಕಿತ್ಸೆಯ ಅಗತ್ಯವಿದ್ದರೆ ಜಿಲ್ಲಾ ಕೇಂದ್ರಕ್ಕೆ ರವಾನಿಸಲಾಗುತ್ತದೆ ಎಂದು ವಿವರಿಸಿದರು.

ಟೆಲಿ ಐಸಿಯು ಅನುಕೂಲಗಳು : ತಾಲೂಕು ಕೇಂದ್ರದಲ್ಲಿ ತುರ್ತು ಚಿಕಿತ್ಸೆ, ಹೃದಯಾಘಾತವಾದಾಗ ಆರಂಭಿಕ ತುರ್ತು ಚಿಕಿತ್ಸೆ ಚಿಕಿತ್ಸೆ ವಿಳಂಬದ ಕಾರಣಕ್ಕೆ ರೋಗಿಗಳು ಸಾಯುವುದು ಕಡಿಮೆಯಾಗಿದೆ. ಜಿಲ್ಲಾ ಕೇಂದ್ರದ ಆಸ್ಪತ್ರೆಗಳ ಮೇಲಿನ ಒತ್ತಡವೂ ತಪ್ಪಲಿದೆ.

ಯಾವ ಕಾಯಿಲೆಗೆ ಚಿಕಿತ್ಸೆ ಉಸಿರಾಟಕ್ಕೆ ಸಂಬಂಧಿಸಿದ ತೊಂದರೆ, ನಾನಾ ರೀತಿಯ ಸೋಂಕು, ರಕ್ತ ಪರಿಚಲನೆ ಸಮಸ್ಯೆ, ಪೌಷ್ಟಿಕಾಂಶ ಸಮಸ್ಯೆ, ಜೀರ್ಣಾಂಗ ವ್ಯವಸ್ಥೆಗೆ ಸಂಬಂದಿಸಿದ ಸಮಸ್ಯೆಗಳಿಗೆ ತುರ್ತು ಚಿಕಿತ್ಸೆ ಪಡೆದುಕೊಳ್ಳಬಹುದಾಗಿದೆ ಎಂದರು.

ಬಹುರೂಪಿಗೆ ಮೆರಗು ನೀಡಿದ ಚಲನಚಿತ್ರೋತ್ಸವ

ಮೈಸೂರು, ಮಾ.7(ಎಂಟಿವೈ)– ರಂಗಾಯಣದ ಆವರಣದಲ್ಲಿ ಬಹುರೂಪಿ ನಾಟಕೋತ್ಸವದ ಅಂಗವಾಗಿ ಆಯೋಜಿಸಿರುವ ಬಹುರೂಪಿ ಚಲನಚಿತ್ರೋತ್ಸವ ರಾಷ್ಟ್ರೀಯ ನಾಟಕೋತ್ಸವಕ್ಕೆ ಮೆರಗು ನೀಡಿತು.

ರಂಗಾಯಣದಲ್ಲಿ ಗುರುವಾರ ಆರಂಭವಾದ ಚಲನಚಿತ್ರೋತ್ಸವದಲ್ಲಿ ಕ್ರಾಂತಿಕಾರಿ ಬಸವಣ್ಣನವರ ಕುರಿತ ಸಾಕ್ಷ್ಯಚಿತ್ರ ಪ್ರೇಕ್ಷಕರ ಮನ ಮುಟ್ಟಿತು. ವೀರಪ್ಪ ಮರಳವಾಡಿ ನಿರ್ದೇಶನದ ವಚನಕಾರರ ಸಾಕ್ಷಚಿತ್ರವು ಪ್ರೇಕ್ಷಕರಿಗೆ ಶರಣ ಲೋಕ ಪರಿಚಯಿಸಿತು. ಜೇಡರ ದಾಸಿಮಯ್ಯ, ಹರಳಯ್ಯ, ಕುಂಬಾರ ಗುಂಡಯ್ಯ ಇನ್ನಿತರರ ವಚನಗಳು, ಜೀವನ ಕುರಿತು ಮಹತ್ವದ ಸಂದೇಶ ರವಾನಿಸಿತು.

ಬಳಿಕ ವೀರಪ್ಪ ಮರಳವಾಡಿ ನಿರ್ದೇಶನದಲ್ಲಿ ಭಾರತೀಯ ಭಾಷಾ ಸಂಸ್ಥೆಯ ಸಹಯೋಗದಲ್ಲಿ ಹಲವಾರು ಚಾರಿತ್ರಿಕ ನಿರ್ಮಾಣಗಳಲ್ಲಿ ಒಂದಾದ ಬಸವಣ್ಣ ಸಾಕ್ಷ್ಯಚಿತ್ರ ಪ್ರದರ್ಶನಗೊಂಡಿತು. ಮಧ್ಯಾಹ್ನದ ನಂತರ ಜಾನಾಥನ್ ಲಿವಿಂಗ್‌ಸ್ಟನ್ ಸೀಗಲ್ ಮತ್ತು ಇನ್ ಟು ದ ವೈಟ್ (ಇಂಗ್ಲಿಷ್) ಚಿತ್ರಗಳು ಪ್ರದರ್ಶನಗೊಂಡವು.



ಮೈಸೂರು ರಂಗಾಯಣದಲ್ಲಿ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಅಂಗವಾಗಿ ಆಯೋಜಿಸಿರುವ ಚಲನಚಿತ್ರೋತ್ಸವಕ್ಕೆ ಛಾಯಾಗ್ರಾಹಕ ಡಾ.ಲೋಕೇಶ್ ಮೊಸಳೆ ಚಾಲನೆ ನೀಡಿದರು.

ಇದಕ್ಕೂ ಮುನ್ನ ಚಲನಚಿತ್ರೋತ್ಸವಕ್ಕೆ ಚಾಲನೆ ನೀಡಿದ ವನ್ಯಜೀವಿ ಛಾಯಾಗ್ರಾಹಕ ಲೋಕೇಶ್ ಮೊಸಳೆ ಮಾತನಾಡಿ, ಕನ್ನಡ ಭಾಷೆ ಬೆಳವಣಿಗೆಯಲ್ಲಿ ಸಿನಿಮಾ ಕ್ಷೇತ್ರ ಪ್ರಮುಖ ಪಾತ್ರ ವಹಿಸಿದೆ. ಸಾಹಿತ್ಯ, ರಂಗಭೂಮಿ, ಸಿನಿಮಾ ಅಂತರ್‌ಸಂಬಂಧ ಹೊಂದಿದೆ. ಕನ್ನಡಿಗರಲ್ಲಿ ಸದಭಿರುಚಿ, ಕಲಾತ್ಮಕತೆಯನ್ನು ಸಾಹಿತ್ಯದಷ್ಟೇ ರಂಗಭೂಮಿ, ಸಿನಿಮಾಗಳು ಕಟ್ಟಿಕೊಟ್ಟಿವೆ. 1931ರಲ್ಲಿ ಮೂಕಿ ಚಿತ್ರಗಳು ಬಂದಾಗ ರಂಗಭೂಮಿಗೆ ಉಳಿಗಾಲವಿಲ್ಲವೆಂದು ಕಲಾವಿದರು ಅಂದುಕೊಂಡಿದ್ದರು. ಸಿನಿಮಾವನ್ನು ರಂಗಭೂಮಿಯೇ ಬೆಳೆಸಿದೆ. ರಂಗಭೂಮಿ ಹಿನ್ನೆಲೆಯಿಂದ ಬಂದ ನಟರು ಸಿನಿಮಾ ಕ್ಷೇತ್ರವನ್ನು ಕಟ್ಟಿದ್ದಾರೆ. ರಂಗಾಯಣದ ಕಲಾವಿದರೇ ಆದ ರಂಗಾಯಣ ರಘು, ಅರುಣ್ ಸಾಗರ್, ಮಂಡ್ಯ ರಮೇಶ್ ದೊಡ್ಡ ಹೆಸರು ಮಾಡಿದ್ದಾರೆ. ನೂರಾರು ಕಲಾವಿದರು ತಂತ್ರಜ್ಞರಾಗಿಯೂ ಮನ್ನಣೆ ಗಳಿಸಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ನಾಟಕೋತ್ಸವದ ಸಂಚಾಲಕ ಪ್ರೊ.ಹೆಚ್.ಎಸ್.ಉಮೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ರಂಗಾಯಣದ ನಿರ್ದೇಶಕರಾದ ನಿರ್ಮಲಾ ಮಠಪತಿ, ಚಲನಚಿತ್ರೋತ್ಸವದ ಸಂಯೋಜಕ ಕೆ.ಮನು, ಸಂಚಾಲಕರಾದ ಬಿ.ಎನ್.ಶಶಿಕಲಾ ಉಪಸ್ಥಿತರಿದ್ದರು.

ಮೈಸೂರಿನಲ್ಲಿ ಟಾಂಗಾ ಸವಾರಿಯ ಗತವೈಭವ, ಮೂರು ಟಾಂಗಾ ನಿಲ್ದಾಣ ಸ್ಥಾಪನೆ: ಡಿಸಿ ಡಾ.ರಾಜೇಂದ್ರ ಮಾಹಿತಿ

● ಟಾಂಗಾ ಸವಾರಿಗೆ ಶುಲ್ಕ ನಿಗದಿ: ಮಾರ್ಗ ನಿರ್ಧಾರ ● ಮೃಗಾಲಯ, ಕಾರಂಜಿ ಕೆರೆಗೆ ಸಂಪರ್ಕ ● ಪ್ರಸಾದ್ ಯೋಜನೆ ಅನುಷ್ಠಾನಕ್ಕೆ ಜಿಲ್ಲಾ ಮಟ್ಟದ ಸಮಿತಿ

ಮೈಸೂರು, ಮಾ.7(ಬಿಎಲ್‌ಯು)– ಕೇಂದ್ರ ಸರ್ಕಾರದ ಸ್ವದೇಶ ದರ್ಶನ ಯೋಜನೆಯ ಟಾಂಗಾ ರೈಡ್ ಹೆರಿಟೇಜ್ ಎಕ್ಸ್‌ಪೀರಿಯನ್ಸ್ ಝೋನ್‌ನಲ್ಲಿ ಮೈಸೂರು ನಗರದಲ್ಲಿ 3 ಕಡೆ ಟಾಂಗಾ ನಿಲ್ದಾಣ ಸ್ಥಾಪನೆ ಮಾಡಲಾಗುವುದು ಎಂದು ಜಿಲ್ಲಾಧಿಕಾರಿಗಳೂ ಆದ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಅಧ್ಯಕ್ಷ ಡಾ.ಕೆ.ವಿ. ರಾಜೇಂದ್ರ ತಿಳಿಸಿದರು.



ಬಸ್ ಹಾಗೂ ಆಟೋ ನಿಲ್ದಾಣಗಳಂತೆ ಟಾಂಗಾ ನಿಲ್ದಾಣ ಕೂಡ ನಿರ್ಮಾಣ ಮಾಡಲಾಗುವುದು. ಈ ಮೂಲಕ ಪ್ರವಾಸಿಗರಿಗೆ ಅನುಕೂಲ ಕಲ್ಪಿಸಲಾಗುವುದು ಎಂದು ಹೇಳಿದರು. ಮೈಸೂರಿನ ಪ್ರವಾಸಿ ತಾಣಗಳನ್ನು ವೀಕ್ಷಿಸಲು ಬರುವ ಪ್ರವಾಸಿಗರು ಟಾಂಗಾ ಸವಾರಿ ಬಯಸುತ್ತಾರೆ. ಆದಕಾರಣ ಪ್ರವಾಸಿಗರ ಹಿತದೃಷ್ಟಿಯಿಂದ ಟಾಂಗಾ ನಿಲ್ದಾಣ ಸ್ಥಾಪನೆ ಮಾಡಿ, ಸವಾರಿ ಶುಲ್ಕ ನಿಗದಿ ಮಾಡಲಾಗುವುದು ಎಂದರು.

ಪ್ರಯಾಣಿಕರು, ಸಾರ್ವಜನಿಕರು ಹಾಗೂ ಸಂಚಾರಕ್ಕೆ ತೊಂದರೆ ಆಗದಂತೆ ಟಾಂಗಾ ಸವಾರಿ ಮಾರ್ಗ ನಿಗದಿ ಮಾಡಲಾಗುವುದು ಎಂದು ಡಾ.ರಾಜೇಂದ್ರ ತಿಳಿಸಿದರು.

ಇಕೋಲಾಜಿಕಲ್ ಎಕ್ಸ್‌ಪೀರಿಯನ್ಸ್ ಝೋನ್‌ನಲ್ಲಿ ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯ ಹಾಗೂ ಕಾರಂಜಿಕೆರೆಯ ನ್ಯಾಷನಲ್ ಮ್ಯೂಸಿಯಂ ನಡುವೆ ಸಂಪರ್ಕ ಕಲ್ಪಿಸಲಾಗುವುದು. ಈ ಮೂಲಕ ಪ್ರವಾಸಿಗರು ಒಮ್ಮೆಲೆ ಎರಡು ಪ್ರವಾಸಿ ತಾಣ ವೀಕ್ಷಿಸಿ ಉತ್ತಮ ಪರಿಸರದ ಅನುಭವ ಪಡೆಯುವಂತೆ ಮಾಡಲಾಗುವುದು ಎಂದು ಹೇಳಿದರು.

ಇದಲ್ಲದೆ ಮೃಗಾಲಯದ ಒಳಗೆ ಜಿಪ್ ವಾಕ್ ಸೇರಿದಂತೆ ಇತರೆ ಕ್ರೀಡಾ ವ್ಯವಸ್ಥೆ ಮಾಡಲಾಗುವುದು. ಆ ಮೂಲಕ ಪ್ರವಾಸಿಗರಿಗೆ ಅದ್ಭುತ ಅನುಭವ ನೀಡುವ ಉದ್ದೇಶವಿದೆ ಎಂದು ಡಾ.ರಾಜೇಂದ್ರ ತಿಳಿಸಿದರು.

ಕೇಂದ್ರ ಸರ್ಕಾರದ ಪ್ರಸಾದ್ ಯೋಜನೆಯ ಅನುದಾನದಿಂದ ಚಾಮುಂಡಿಬೆಟ್ಟದ ಅಭಿವೃದ್ಧಿಗೆ ಜಿಲ್ಲಾ ಮಟ್ಟದ ಸಮಿತಿ ರಚನೆ ಮಾಡಲಾಗುವುದು. ಈ ಸಮಿತಿ ಮೂರು ತಿಂಗಳಿಗೊಮ್ಮೆ ಸಭೆ ನಡೆಸಿ ವರದಿ ನೀಡಲಿದೆ ಎಂದು ವಿವರಿಸಿದರು.

ಮೈಸೂರಿನ ಪ್ರವಾಸೋದ್ಯಮ ಅಭಿವೃದ್ಧಿಯನ್ನು ತ್ವರಿತಗೊಳಿಸಲಾಗುವುದು. ಮೈಸೂರಿಗೆ ಬರುವ ಪ್ರವಾಸಿಗರು ಸಂಜೆ ವೇಳೆ ಅರಮನೆ ವೀಕ್ಷಣೆ ಮಾಡಿ ವಿಶೇಷ ಅನುಭವದೊಂದಿಗೆ ಹಿಂತಿರುಗುವಂತೆ ಎಲ್ಲಾ ಪ್ರವಾಸಿ ತಾಣಗಳಿಗೆ ವೈವಿಧ್ಯಮಯ ಸ್ಪರ್ಶ ನೀಡಲಾಗುವುದು ಎಂದು ಡಾ.ರಾಜೇಂದ್ರ ಹೇಳಿದರು.

ಇಂದು ಮಹಿಳೆಯರಿಂದಲೇ ರಾಜ್ಯ ರಾಣಿ ಎಕ್ಸ್‌ಪ್ರೆಸ್ ನಿರ್ವಹಣೆ

ಮೈಸೂರು, ಮಾ.7(ಬಿಎಲ್‌ಯು)– ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಾಳೆ (ಮಾ.8) ಮೈಸೂರಿನಿಂದ ಹೊರಡುವ ರಾಜ್ಯ ರಾಣಿ ಎಕ್ಸ್‌ಪ್ರೆಸ್ ರೈಲನ್ನು ಮಹಿಳೆಯರೇ ನಿರ್ವಹಣೆ ಮಾಡುವರು.

ಮಹಿಳಾ ಲೋಕೋ ಪೈಲಟ್, ಸಹಾಯಕ ಲೋಕೋ ಪೈಲಟ್, ಟ್ರೈನ್ ವ್ಯವಸ್ಥಾಪಕಿ, ಟಿಕೆಟ್ ತಪಾಸಣಾ ಸಿಬ್ಬಂದಿ ಮತ್ತು ರೈಲ್ವೆ ಸುರಕ್ಷಾ ದಳದ ಸಿಬ್ಬಂದಿ ಸೇರಿದಂತೆ ಸಂಪೂರ್ಣ ಮಹಿಳಾ ಸಿಬ್ಬಂದಿಗಳೇ ರಾಜ್ಯ ರಾಣಿ ಎಕ್ಸ್‌ಪ್ರೆಸ್ ನಿರ್ವಹಿಸಲಿದ್ದಾರೆ. ಮೈಸೂರು ರೈಲ್ವೆ ನಿಲ್ದಾಣದಲ್ಲಿ ನಾಳೆ ಮಧ್ಯಾಹ್ನ 2 ಗಂಟೆಗೆ ಹೊರಡುವ ರಾಜ್ಯ ರಾಣಿ ಎಕ್ಸ್‌ಪ್ರೆಸ್ ರೈಲಿಗೆ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್ ಚಾಲನೆ ನೀಡುವರು. ಆ ವೇಳೆ ರೈಲ್ವೆ ಮಹಿಳಾ ಕಲ್ಯಾಣ ಸಂಸ್ಥೆಯ ಸಹ ಸದಸ್ಯರು ಮಹಿಳಾ ಪ್ರಯಾಣಿಕರಿಗೆ ಗುಲಾಬಿ ಹೂವು ಮತ್ತು ಸಿಹಿ ವಿತರಣೆ ಮಾಡುವರು ಎಂದು ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕ ಜೆ.ಲೋಹಿತೇಶ್ವರ ತಿಳಿಸಿದ್ದಾರೆ.



ಇಂದಿನಿಂದ 'ಕರಟಕ ದಮನಕ'ನ ಆಟ ಶುರು!

ಡಾ. ಶಿವರಾಜ್‌ಕುಮಾರ್, ಪ್ರಭುದೇವ ಅಭಿನಯದ, ರಾಕ್‌ಲೈನ್ ವೆಂಕಟೇಶ್ ನಿರ್ಮಾಣದ, ಯೋಗರಾಜ್ ಭಟ್ ಅವರ ನಿರ್ದೇಶನದ ಬಹುನಿರೀಕ್ಷಿತ ಚಿತ್ರ ಕರಟಕ ದಮನಕ ಇಂದು 300ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿದೆ. ಊರು ಮತ್ತು ನೀರಿನ ಮೇಲೆ ಈ ಚಿತ್ರದ ಕಥೆ ಸಾಗುತ್ತದೆ. "ಕರಟಕ ದಮನಕ" ಎಂದರೆ ಎರಡು ಕುತಂತ್ರಿ ನರಿಗಳ ಹೆಸರು. ಸಾಮಾನ್ಯವಾಗಿ ಯಾವಾಗಲೂ ಒಟ್ಟಿಗೆ ಇಬ್ಬರನ್ನು ಹೆಚ್ಚು ಸಲ ನೋಡಿದಾಗ ಅವರನ್ನು "ಕರಟಕ ದಮನಕ" ಎನ್ನುತ್ತಾರೆ. ಇದು ಉತ್ತರ ಕರ್ನಾಟಕ ಭಾಗದಲ್ಲಿ ನಡೆಯುವ ಕಥೆಯಾಗಿದ್ದು. ಈ ಚಿತ್ರ ನೋಡಿದ ಪ್ರತಿಯೊಬ್ಬ ವ್ಯಕ್ತಿಗೂ ಅವನ ಊರು, ಆ ಊರಿನಲ್ಲಿ ಎಳೆದ ತೇರು ಹಾಗೂ ಅವನು ಯಾವ ನೀರು ಕುಡಿದು ಬೆಳೆದಿದ್ದಾನೋ ಆ ನೀರು ನೆನಪಾಗುತ್ತದೆ ಎಂದು ನಿರ್ದೇಶಕ ಯೋಗರಾಜ್ ಭಟ್ ಹೇಳಿದ್ದಾರೆ. ಎಲ್ಲರಿಗೂ ಒಂದು ಊರು ಇರುತ್ತದೆ. ಆ ಊರನ್ನು ಬಿಟ್ಟು ಬಂದ ಮೇಲೆ ಪುನಃ ಹೋದಾಗ ಅಲ್ಲಿ ಸಾಕಷ್ಟು ಬದಲಾವಣೆ ಆಗಿರುತ್ತದೆ. ಆ ವಿಷಯ ಇಟ್ಟುಕೊಂಡು ಸಾಕಷ್ಟು ಮನೋರಂಜನೆಯ ಅಂಶಗಳೊಂದಿಗೆ ನಿರ್ದೇಶಕರು ಒಳ್ಳೆಯ ಕಥೆ ಮಾಡಿದ್ದಾರೆ. ಇನ್ನು ಪ್ರಭುದೇವ ಅವರ ಜೊತೆ ಮೊದಲ ಬಾರಿಗೆ ನಟಿಸಿರುವುದು ಖುಷಿಯಾಗಿದೆ ಎಂದು ನಟ ಶಿವರಾಜಕುಮಾರ್ ಹೇಳಿದ್ದಾರೆ.

ಯೋಗರಾಜ್ ಭಟ್ ಅವರ ಸಾಹಿತ್ಯ, ವಿ.ಹರಿಕೃಷ್ಣ ಸಂಗೀತ ಸಂಯೋಜನೆ ಈ ಚಿತ್ರಕ್ಕಿದೆ. ಚಿತ್ರದ ಶೀರ್ಷಿಕೆ ಗೀತೆಯನ್ನು ರಿಯಲ್ ಸ್ಟಾರ್ ಉಪೇಂದ್ರ ಹಾಗೂ ರಾಜೇಶ್ ಕೃಷ್ಣನ್ ಹಾಡಿದ್ದಾರೆ. ಆನಂದ್ ಆಡಿಯೋ ಮೂಲಕ ಬಿಡುಗಡೆಯಾಗಿರುವ, "ಡೀಗ ಡಿಗರಿ" ಹಾಡಿಗೆ ಭಟ್ಟರ ಸಾಹಿತ್ಯವಿದ್ದು, ಶಿವರಾಜಕುಮಾರ್ ಹಾಗೂ ಪ್ರಭುದೇವ ಒಟ್ಟಿಗೆ ಹೆಜ್ಜೆ ಹಾಕಿದ್ದಾರೆ. ಈ ಚಿತ್ರದಲ್ಲಿ ಶಿವಣ್ಣ ಜೊತೆ ನಾಯಕಿಯಾಗಿ ಪ್ರಿಯಾ ಆನಂದ್ ಹಾಗೂ ಪ್ರಭುದೇವ ಜೊತೆ ನಿಶ್ವಿಕಾ ನಾಯ್ಡು ಬಣ್ಣ ಹಚ್ಚಿದ್ದಾರೆ. ಹಿರಿಯ ನಟ ದೊಡ್ಡಣ್ಣ ಇವರಿಬ್ಬರ ಮಾರ್ಗದರ್ಶಕ ಕಳ್ಳನಾಗಿ ಕಾಣಿಸಿಕೊಂಡಿದ್ದಾರೆ. ಸಂತೋಷ್ ರೈ ಪತಾಜೆ ಅವರ ಛಾಯಾಗ್ರಹಣ ಈ ಚಿತ್ತಕ್ಕಿದೆ.

ಜೋಗದ ಗುಂಡಿಯ ಸುತ್ತ ನಿಗೂಢ ಕೊಲೆಗಳು...



ಕರ್ನಾಟಕದ ಹೆಮ್ಮೆಯ ಜೋಗ ಜಲಪಾತ ಯಾರಿಗೆ ತಾನೆ ಗೊತ್ತಿಲ್ಲ ಹೇಳಿ, 'ಮಾನವನಾಗಿ ಹುಟ್ಟಿದ್ಮೇಲೆ ಏನೇನ್ ಕಂಡಿ, ಸಾಯೋದ್ರೊಳಗೆ ಒಮ್ಮೆ ನೋಡು ಜೋಗಾದ್ ಗುಂಡಿ' ಅಂತ ನಮ್ಮ ಹಿರಿಯರೇ ಹೇಳಿದ್ದಾರೆ. ಆ ಜಲಪಾತದ ಸುತ್ತಮುತ್ತ ಅನೇಕ ಕೌತುಕಗಳು ನಡೆಯುತ್ತವೆ, ಅದರ ಜೊತೆಗೆ ಒಂದಷ್ಟು ಕ್ರೈಮ್ ಕಥೆಗಳೂ ನಡೆಯುತ್ತವೆ. ಅಂಥದ್ದೇ ಒಂದಷ್ಟು ಕ್ರೈಂಸ್ಟೋರಿ ಇಟ್ಟುಕೊಂಡು ರಾಘು ಅವರು ಜೋಗ್ 101 ಎಂಬ ಚಿತ್ರವನ್ನು ನಿರ್ಮಿಸಿದ್ದಾರೆ. ಅದರ ಸುತ್ತಮುತ್ತ ನಡೆಯುತ್ತಿರುವ ಕೊಲೆಗಳು ಹಾಗೂ ಅದರ ಹಿನ್ನೆಲೆಯಲ್ಲಿ ಬರುವಂಥ ಒಂದು ಸಣ್ಣ ಥ್ರಿಲ್ಲರ್ ಕಥೆ ಈ ಚಿತ್ರದಲ್ಲಿದೆ. ಸೆವೆನ್‌ಸ್ಟಾರ್ ಪಿಕ್ಚರ್ಸ್ ಅಡಿಯಲ್ಲಿ ನಿರ್ಮಾಣವಾಗಿರುವ ಈ ಚಿತ್ರಕ್ಕೆ ವಿಜಯ್ ಕನ್ನಡಿಗ ಆಕ್ಷನ್ ಕಟ್ ಹೇಳಿದ್ದಾರೆ, ಈ ವಾರ ತೆರೆ ಕಾಣುತ್ತಿರುವ ಈ ಚಿತ್ರದ ಟ್ರೈಲರ್ ಇತ್ತೀಚೆಗೆ ಬಿಡುಗಡೆಯಾಯಿತು. ವಿಜಯ್ ರಾಘವೇಂದ್ರ, ತೇಜಸ್ವಿನಿ ಶೇಖರ್ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ,

ಈ ಸಂದರ್ಭದಲ್ಲಿ ಮಾತನಾಡಿದ ನಿರ್ಮಾಪಕ ರಘು, ವಿಜಯ್ ಬಂದು ಈ ಕಥೆ ಹೇಳಿದಾಗ ನಾಯಕನ ಪಾತ್ರಕ್ಕೆ ವಿಜಯ ರಾಘವೇಂದ್ರ ಅವರೇ ಸೂಕ್ತ ಅನಿಸಿತು. ಅವರನ್ನು ಅಪ್ರೋಚ್ ಮಾಡಿದಾಗ ಅವರೂ ಸಹ ಒಪ್ಪಿದರು, ಅವರು ನಮ್ಮಂಥ ಹೊಸ ನಿರ್ಮಾಪಕ, ನಿರ್ದೇಶಕರಿಗೆ ಬೆಸ್ಟ್ ಆಕ್ಟರ್. ಮೊದಲ ಬಾರಿಗೆ ಚಿತ್ರ ನಿರ್ಮಾಣಕ್ಕೆ ಕೈ ಹಾಕಿದ್ದೇನೆ ಎಂದರು. ಈಗಾಗಲೇ ಧಾರಾವಾಹಿಗಳಲ್ಲಿ ನಟಿಸಿರುವ ತೇಜಸ್ವಿನಿ ಶೇಖರ್ ಈ ಚಿತ್ರದ ನಾಯಕಿ. ಈ ಚಿತ್ರದಲ್ಲಿ ದಿಶಾ ಎಂಬ ಮುಗ್ಧ ಯುವತಿಯ ಪಾತ್ರ ನಿರ್ವಹಿಸಿದ್ದಾರೆ. ತಂದೆ, ತಾಯಿಯ ಮುದ್ದಿನ ಮಗಳಾಗಿದ್ದ ಆಕೆಯ ಜೀವನದಲ್ಲಿ ಒಂದು ಅನಿರೀಕ್ಷಿತ ಘಟನೆ ನಡೆಯುತ್ತದೆ ಅದೇನು ಅನ್ನುವುದೇ ಚಿತ್ರದ ಟ್ವಿಸ್ಟ್, ಚಿತ್ರಕ್ಕೆ ಸಮನ್ ಜಾದುಗಾರ್ ಅವರ ಚಿತ್ರಕಥೆ ಹಾಗೂ ಸಂಭಾಷಣೆಗಳಿವೆ. ಸಸ್ಪೆನ್ಸ್, ಥ್ರಿಲ್ಲರ್ ಕಥೆಯ ಜೊತೆಗೆ ಆಕ್ಷನ್ ಕೂಡ ಚಿತ್ರದಲ್ಲಿದೆ. ಜೋಗ್ ಜಲಪಾತದ ಸುತ್ತಮುತ್ತಲಿನ ಕಾಡುಗಳಲ್ಲಿ, ಮಲೆನಾಡ ಸೊಬಗಿನ ಜೊತೆ ಒಂದು ಸಂಗೀತಮಯವಾದ ಥ್ರಿಲ್ಲರ್ ಅನುಭವವನ್ನು ಜೋಗ್ 101 ಚಿತ್ರವು ಕಟ್ಟಿಕೊಡಲಿದೆ. ತಿಲಕ್ ಶೇಖರ್, ಕಡ್ಡಿಪುಡಿ ಚಂದ್ರು, ರಾಜೇಶ್ ನಟರಂಗ, ಗೋವಿಂದೇಗೌಡ, ನಿರಂಜನ್ ದೇಶಪಾಂಡೆ ಮತ್ತು ಇತರರು ಚಿತ್ರದ ಪ್ರಮುಖ ಪಾತ್ರಗಳಲ್ಲಿದ್ದಾರೆ. ಅವಿನಾಶ್ ಆರ್.ಬಸುತ್ಕರ್ ಅವರ ಸಂಗೀತ ಸಂಯೋಜನೆ, ಸುನೀತ್ ಹಲಗೇರಿಯವರ ಛಾಯಾಗ್ರಹಣ ಈ ಚಿತ್ರಕ್ಕಿದೆ.

ಸೂರ್ಯವಂಶದ ಕುಡಿ ಅನಿರುದ್ದ



ಸೂರ್ಯವಂಶ ಚಿತ್ರದಲ್ಲಿ ಡಾ.ವಿಷ್ಣುವರ್ಧನ್ ಅಭಿನಯವನ್ನು ಇದುವರೆಗೂ ಯಾರೂ ಮರೆತಿಲ್ಲ. ಅಂಥಾ ಅದ್ಭುತ ಪರ್‌ಫಾರ್ಮನ್ಸ್ ಅವರದಾಗಿತ್ತು. ಇದೀಗ ಆ ಚಿತ್ರದ ಮುಂದುವರೆದ ಭಾಗ ಪ್ರೇಕ್ಷಕರೆದುರು ಬರಲಿದೆ. ಇದರಲ್ಲಿ ಸತ್ಯಮೂರ್ತಿ ಅವರ ಸೂರ್ಯವಂಶದ ಕುಡಿಯಾಗಿ ವಿಷ್ಣು ಅವರ ಅಳಿಯ ಅನಿರುದ್ದ ಕಾಣಿಸಿಕೊಳ್ಳುತ್ತಿದ್ದಾರೆ. ಹಾಗಂತ ಇದು ಸಿನಿಮಾವಲ್ಲ. ಉದಯ ವಾಹಿನಿಯಲ್ಲಿ ಇದೇ 11ರಿಂದ ಪ್ರಾರಂಭವಾಗಲಿರುವ ಸೂರ್ಯವಂಶ ಎಂಬ ಮೆಗಾ ಧಾರಾವಾಹಿಯಲ್ಲಿ ಅವರು ಸತ್ಯಮೂರ್ತಿ (ವಿಷ್ಣುವರ್ಧನ್) ಅವರ ಮೊಮ್ಮಗ ಸೂರ್ಯವರ್ಧನನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ತನ್ವಿ ಕ್ರಿಯೇಶನ್ಸ್ ಮೂಲಕ ನಿರ್ಮಾಪಕ ಎಲ್.ಪದ್ಮನಾಭ ಅವರು ಈ ಧಾರಾವಾಹಿಯನ್ನು ನಿರ್ಮಿಸುತ್ತಿದ್ದಾರೆ. ಹರಿಸಂತು ಇದರ ಪ್ರಧಾನ ನಿರ್ದೇಶಕರಾಗಿದ್ದು, ಪ್ರಕಾಶ್ ಮುಚ್ಚಳಗುಡ್ಡ ಸಂಚಿಕೆ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ. ಭವ್ಯ ಪರಂಪರೆಯ ಹೆಗ್ಗುರುತಾಗಿ ನಿಂತಿರುವ ಸೂರ್ಯವಂಶದ ಕುಟುಂಬದಲ್ಲಿ ತಾತ ಸತ್ಯಮೂರ್ತಿಗೆ ಈ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವ ಬಯಕೆ. ವಂಶದ ಕುಡಿ ಮೊಮ್ಮಗ ಸೂರ್ಯವರ್ಧನ ಇಪ್ಪತ್ತು ವರ್ಷಗಳ ಹಿಂದೆ ಕಾಣೆಯಾಗಿದ್ದೇ ಆ ಚಿಂತೆಗೆ ಕಾರಣವಾಗಿರುತ್ತದೆ. ಆಕಸ್ಮಿಕ ಸಂದರ್ಭದಲ್ಲಿ ಆ ಹುಡುಗ ಮತ್ತೆ ಸಿಗುತ್ತಾನೆ. ತನ್ನ ತಾಯಿಯ ಚಿಕಿತ್ಸೆಗೆ ಹಣ ಹೊಂದಿಸಲು ಆತ ಒಂದು ನಾಟಕಕ್ಕೆ ಒಪ್ಪಿಕೊಳ್ಳುತ್ತಾನೆ. ಅವನೇ ಕಥಾನಾಯಕ ಕರ್ಣ. ಆ ಕರ್ಣ ಸೂರ್ಯ ವಂಶದ ಮನೆಗೆ ಕಾಲಿಟ್ಟ ನಂತರ ಆತನಿಗೆ ಎಲ್ಲಾ ಕಡೆಯಿಂದ ವಿರೋಧಿಗಳು ಹುಟ್ಟಿಕೊಳ್ಳುತ್ತಾರೆ. ಅದೇ ಊರಿನ ಕಾಳಿಂಗನ ದಬ್ಬಾಳಿಕೆಯನ್ನು ಮೆಟ್ಟಿನಿಲ್ಲಲು ಕರ್ಣನಿಂದ ಮಾತ್ರ ಸಾಧ್ಯ ಎಂದು ಊರ ಜನ ನಂಬಿರುತ್ತಾರೆ. ಇದರ ಮಧ್ಯೆ ನಾಯಕಿ ಸುರಭಿ ಎಂಟ್ರಿ ಕೊಟ್ಟ ಮೇಲೆ ಕಥೆ ಹೊಸ ರೂಪವನ್ನು ಪಡೆದುಕೊಳ್ಳುತ್ತದೆ. ಮುಂದೆ ಕರ್ಣನೇ ಸೂರ್ಯವರ್ಧನ ಎನ್ನುವ ವಿಷಯ ತಿಳಿಯುತ್ತದೆ. ಅದು ಹೇಗೆ, ಯಾರಿಂದ, ಯಾವಾಗ ಎಂಬ ಸನ್ನಿವೇಶಗಳೊಂದಿಗೆ ಚಿತ್ರಕಥೆ ರೋಚಕ ತಿರುವು ಪಡೆದುಕೊಳ್ಳುತ್ತದೆ, ಇದರ ಪ್ರತಿ ಫ್ರೇಮ್‌ಗಳನ್ನು ಸಿನಿಮಾ ರೀತಿಯಲ್ಲೇ ಶ್ರೀಮಂತವಾಗಿ ಚಿತ್ರೀಕರಿಸಿದ್ದಾರೆ. ನಾಯಕನ ತಾತ ಸತ್ಯಮೂರ್ತಿಯಾಗಿ ಸುಂದರರಾಜ್, ಖಳನಾಯನಾಗಿ ದಿ.ಉದಯಕುಮಾರ್ ಪುತ್ರ ವಿಕ್ರಂ ಉದಯಕುಮಾರ್ ಅಲ್ಲದೆ ರವಿಭಟ್, ಸುಂದರಶ್ರೀ, ಪುಷ್ಪಾ ಬೆಳವಾಡಿ, ನಯನಾ ಮುಂತಾದವರಿದ್ದಾರೆ.

ಥ್ರಿಲ್ಲರ್ 'ಪರವಶ'ದಲ್ಲಿ ರವಿಚಂದ್ರನ್



ಕ್ರೇಜಿಸ್ಟಾರ್ ರವಿಚಂದ್ರನ್ ಹಾಗೂ ರಘು ಭಟ್ ಅಭಿನಯದ ಪರವಶ ಚಿತ್ರದ ಶೀರ್ಷಿಕೆ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಅವ್ಯಕ್ತ ಸಿನಿಮಾಸ್ ಲಾಂಛನದಲ್ಲಿ ಹರೀಶ್‌ಗೌಡ ನಿರ್ಮಿಸುತ್ತಿರುವ ಈ ಚಿತ್ರಕ್ಕೆ ಸುಧೀಂದ್ರ ನಾಡಿಗರ್ ಆಕ್ಷನ್ ಕಟ್ ಹೇಳುತ್ತಿದ್ದಾರೆ. ಈ ಸಂದರ್ಭದಲ್ಲಿ ನಟ ಕ್ರೇಜಿಸ್ಟಾರ್ ರವಿಚಂದ್ರನ್ ಮಾತನಾಡುತ್ತಾ, ನಾನು ಈವರೆಗೂ ಮಾಡಿರದಂಥ ಪಾತ್ರವನ್ನು ಈ ಚಿತ್ರದಲ್ಲಿ ನಿರ್ವಹಿಸಿದ್ದೇನೆ. ನಿರ್ದೇಶಕ ಸುಧೀಂದ್ರ ನಾಡಿಗರ್ ತುಂಬಾ ಚೆನ್ನಾಗಿ ಕಥೆ ಮಾಡಿಕೊಂಡಿದ್ದಾರೆ, ಅವರ ನಿರ್ದೇಶನದ ಶೈಲಿ ವಿನೂತನವಾಗಿದೆ ಎಂದು ಹೇಳಿದರು. ವಿಭಿನ್ನ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ಈಗಾಗಲೇ ನಲವತ್ತು ದಿನಗಳ ಚಿತ್ರೀಕರಣ ನಡೆಸಲಾಗಿದ್ದು, ಕೆಲ ದಿನಗಳ ಚಿತ್ರೀಕರಣ ಮಾತ್ರವೇ ಬಾಕಿಯಿದೆ. ಮಂಗಳೂರು, ಉಡುಪಿ, ಮಣಿಪಾಲ ಹಾಗೂ ಕುಂದಾಪುರದಲ್ಲಿ ಶೂಟಿಂಗ್ ಮಾಡಿದ್ದೇವೆ, ಕ್ರೇಜಿಸ್ಟಾರ್ ರವಿಚಂದ್ರನ್, ರಘುಭಟ್, ಸೋನಾಲ್ ಮೊಂಟೆರೊ, ಪವಿತ್ರ ಲೋಕೇಶ್, ರಾಜೇಶ್ ನಟರಂಗ, ಸುಜಯ್ ಶಾಸ್ತ್ರಿ, ಅನನ್ಯ ಹಾಗೂ ಇತರರು ಈ ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ. ನಾಯಕ ರಘು ಭಟ್ ಅವರೇ ಚಿತ್ರಕ್ಕೆ ಕಥೆ ಬರೆದಿದ್ದಾರೆ. ಸಚಿನ್ ಬಸ್ರೂರ್ ಅವರ ಸಂಗೀತ, ಆನಂದ್ ಮೀನಾಕ್ಷಿ ಅವರ ಛಾಯಾಗ್ರಹಣ, ರಘು ನಿಡವಳ್ಳಿ ಅವರ ಸಂಭಾಷಣೆ ಈ ಚಿತ್ರಕ್ಕಿದೆ. ಈ ಚಿತ್ರದ ಹಾಡುಗಳಿಗೆ ಪ್ರಮೋದ್ ಮರವಂತೆ ಸಾಹಿತ್ಯ ರಚಿಸಿದ್ದಾರೆ ಎಂದು ನಿರ್ದೇಶಕ ಸುಧೀಂದ್ರ ನಾಡಿಗರ್ ತಿಳಿಸಿದರು. ನಮ್ಮೂರಿನಲ್ಲಿ ನಾನು ನಿರ್ಮಿಸುತ್ತಿರುವ ಪರವಶ ಚಿತ್ರದ ಶೀರ್ಷಿಕೆ ಬಿಡುಗಡೆಯಾಗಿರುವುದು ಖುಷಿಯಾಗಿದೆ ಎಂದು ನಿರ್ಮಾಪಕ ಹರೀಶ್‌ಗೌಡ ಹೇಳಿದರು.

ಥ್ರಿಲ್ಲರ್, ಕೌಟುಂಬಿಕ ಹಾಗೂ ಪ್ರೇಮ ಕಥಾಹಂದರವುಳ್ಳ ಪರವಶ ಚಿತ್ರದಲ್ಲಿ ಜನರ ಮನರಂಜನೆಗೆ ಬೇಕಾದ ಎಲ್ಲಾ ಅಂಶಗಳು ಇದೆ. ಪ್ರೇಕ್ಷಕ ಕೊಟ್ಟ ದುಡ್ಡಿಗೆ ದುಪ್ಪಟ್ಟು ಮನೋರಂಜನೆ ನೀಡುವ ಚಿತ್ರವಿದು. ಸಚಿನ್ ಬಸ್ರೂರ್ ಅವರ ಸಂಗೀತ ನಿರ್ದೇಶನದ ಹಾಡುಗಳು ಮನಸಿಗೆ ಮುದ ನೀಡುತ್ತವೆ ಎಂದು ನಾಯಕ ಹಾಗೂ ಕಥೆಗಾರ ರಘು ಭಟ್ ತಿಳಿಸಿದರು. ನಾಯಕಿ ಸೋನಾಲ್ ಮೊಂಟೆರೊ, ರಾಜೇಶ್ ನಟರಂಗ, ಸುಜಯ್ ಶಾಸ್ತ್ರಿ, ಅನನ್ಯ ತಮ್ಮ ಪಾತ್ರಗಳ ಬಗ್ಗೆ ಪರಿಚಯ ಮಾಡಿಕೊಂಡರು.

'ರೋಜಿ' ಚಿತ್ರದಲ್ಲಿ ಒರಟ ಪ್ರಶಾಂತ್


ಭೂಗತ ಲೋಕದ ಮತ್ತೊಂದು ಕರಾಳ ಕಥೆಯನ್ನು ತೆರೆದಿಡುವ ಚಿತ್ರ ರೋಜಿ, ಲೂಸ್‌ಮಾದ ಯೋಗಿ ಅಭಿನಯದ 50ನೇ ಚಿತ್ರ ಇದಾಗಿದ್ದು, ಚಿತ್ರದ ಬಹುತೇಕ ಪಾತ್ರಗಳನ್ನು ಸೆಲಬ್ರಟಿ ಕಲಾವಿದರು ನಿರ್ವಹಿಸುತ್ತಿದ್ದಾರೆ. ಹೀಗೆ ಹಲವಾರು ಕಾರಣಗಳಿಂದ ರೋಜಿ ಚಿತ್ರ ಸುದ್ದಿಯಾಗುತ್ತಿದೆ. ಈಗಾಗಲೇ ನಟ ಶ್ರೀನಗರ ಕಿಟ್ಟಿ ಹಾಗೂ ಲಿಯೋ ಖ್ಯಾತಿಯ ಸ್ಯಾಂಡಿ ಅವರುಗಳು ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಇದೀಗ ಒರಟ ಖ್ಯಾತಿಯ ಪ್ರಶಾಂತ್ ಅವರು "ರೋಜಿ" ಚಿತ್ರತಂಡವನ್ನು ಸೇರಿಕೊಂಡಿದ್ದಾರೆ. ಸ್ವಾಮಿ ಅಣ್ಣ ಎಂಬ ಖಳನಾಯಕನ ಪಾತ್ರವನ್ನು ಪ್ರಶಾಂತ್ ನಿರ್ವಹಿಸುತ್ತಿದ್ದಾರೆ. ಒರಟ ಪ್ರಶಾಂತ್ ಅವರ ಪಾತ್ರವನ್ನು ಪರಿಚಯಿಸುವ ಪೋಸ್ಟರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಈ ಸಂದರ್ಭದಲ್ಲಿ



ನಿರ್ದೇಶಕ ಶೂನ್ಯ ಮಾತನಾಡುತ್ತಾ, ರೋಜಿ ಚಿತ್ರ ಒಂದು ಸ್ಟೈಲೀಶ್ ಗ್ಯಾಂಗ್‌ಸ್ಟರ್ ಡ್ರಾಮಾ ಎನ್ನಬಹುದು. ಒರಟ ಪ್ರಶಾಂತ್ ಅವರು ಬಹಳ ದಿನಗಳ ನಂತರ ಈ ಚಿತ್ರದಲ್ಲಿ ನಟಿಸುವ ಮೂಲಕ ಮರಳಿದ್ದಾರೆ. ಸ್ವಾಮಿ ಅಣ್ಣ ಗ್ಯಾಂಗ್‌ಸ್ಟರ್ ಪಾತ್ರದಲ್ಲಿ ಅವರು ಕಾಣಿಸಿ ಕೊಳ್ಳುತ್ತಿದ್ದಾರೆ. ಚಿತ್ರದಲ್ಲಿ ಇನ್ನೂ ಎರಡು ಪ್ರಮುಖ ಪಾತ್ರಗಳಿದ್ದು, ಸದ್ಯದಲ್ಲೇ ಅವರ ಬಗ್ಗೆ ಮಾಹಿತಿ ನೀಡುತ್ತೇನೆ ಎಂದರು.

ಒರಟ ಪ್ರಶಾಂತ್ ಮಾತನಾಡುತ್ತಾ, ಈ ಹಿಂದೆ ನನಗೆ ಸಾಕಷ್ಟು ಅವಕಾಶಗಳು ಬಂದವು. ಆದರೆ, ಒಪ್ಪಿರಲಿಲ್ಲ. ಶೂನ್ಯ ಅವರು ಹೇಳಿದ ಕಥೆ ಹಾಗೂ ನನ್ನ ಪಾತ್ರ ಇಷ್ಟವಾಯಿತು. ಮೊದಲ ಬಾರಿಗೆ ಖಳನಾಯಕನಾಗಿ ನಟಿಸುತ್ತಿದ್ದೇನೆ. ಯೋಗಿ ಅವರ ಜೊತೆಗೆ ಅಭಿನಯಿಸುವ ಆಸೆ ಈ ಚಿತ್ರದ ಮೂಲಕ ಈಡೇರಿದೆ ಎಂದು ಹೇಳಿದರು. ಸಂಗೀತ ನಿರ್ದೇಶಕ ಗುರುಕಿರಣ್ ಮಾತನಾಡುತ್ತಾ ನಾನು ಚಿತ್ರರಂಗಕ್ಕೆ ಬಂದು ಇಪ್ಪತ್ತೈದು ವರ್ಷಗಳಾಯಿತು. ಈ ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು ಎಲ್ಲಾ ಹಾಡುಗಳೂ ಕಥೆಗೆ ಪೂರಕವಾಗಿವೆ, ಕೊರೋನ ನಂತರ ನಾನು ಮ್ಯೂಸಿಕ್ ಮಾಡಿದ ಮೊದಲ ಚಿತ್ರ "ರೋಜಿ". ದಶಕಗಳ ನಂತರವಾದರೂ ನನ್ನ ಸಂಗೀತದ ಕರಿಮಣಿ ಮಾಲೀಕ ಹಾಡು ಟ್ರೆಂಡ್ ಆಗುತ್ತಿರುವುದಕ್ಕೆ ಖುಷಿಯಾಗುತ್ತಿದೆ ಎಂದರು. ನಿರ್ಮಾಪಕ ಡಿ.ವೈ.ರಾಜೇಶ್, ಡಿ.ವೈ.ವಿನೋದ್, ಛಾಯಾಗ್ರಾಹಕ ಎಸ್.ಕೆ.ರಾವ್ ಚಿತ್ರದ ಕುರಿತಂತೆ ಮಾತನಾಡಿದರು.

ಸಿನಿಪದಬಂಧ-516



ಹೆಸರು ______
ವಿಳಾಸ ______
______
ದೂರವಾಣಿ ಸಂಖ್ಯೆ ______



ವಿಜೇತರು: ಕೆ.ರಂಜನಿ, ನಂ.804, 17ನೇ ಮುಖ್ಯ ರಸ್ತೆ, 'ಇ' ಬ್ಲಾಕ್, ಸಾಯಿಬಾಬಾ ದೇವಸ್ಥಾನದ ರಸ್ತೆ, ಜೆ.ಪಿ.ನಗರ, ಮೈಸೂರು-570 008

ಎಡದಿಂದ ಬಲಕ್ಕೆ

1. ಕೈಲಾಸ ವಾಸಿಯ ಇರುಳು ಮಹಾತ್ಮೆ ತೋರಿದೆ — 4
3. ಹಿರಣ್ಯ ಕಶ್ಯಪ ಪಾತ್ರ ನೆನಪಿಸುವ ಚಿತ್ರ — 5
5. ರಾಕಿಂಗ್ ಸ್ಟಾರ್ "ವ್ಯಾಘ್ರ" — 4
6. ವಿಷ್ಣುವರ್ಧನ್-ರೂಪಿಣಿ ಅಭಿನಯದ ಚಿತ್ರ — 2
7. ರವಿ ಸ್ವತಃ ಅರಸನೆಂದು ಹೇಳಿಕೊಂಡಿದ್ದಾನೆ — 4
9. ಹ್ಯಾಟ್ರಿಕ್ ಹೀರೋನನ್ನು ಪ್ರೀತಿಯಿಂದ ಕರೆದರೆ ಜಗ್ಗೇಶ್ ಚಿತ್ರ ಪ್ರತ್ಯಕ್ಷ! — 3
10. ಚಳಿ ಚಳಿ ಹಾಡಿನ ನಟಿ — 3
14. ರಮೇಶ್ ಅರವಿಂದನ ಶಾಖ ದ್ವಿರುಕ್ತಿಗೊಂಡಿದೆ — 4
15. ಅಭಿ ಚಿತ್ರದ ನಾಯಕಿ — 2
16. ರಾಧಾ ಎತ್ತಿದ ಅವತಾರ — 4
18. ರಾಜಕುಮಾರ್ ನೆಲದ ಪುತ್ರ — 5
19. "ಓ ಚೆಲುವೆ ನಾಟ್ಯದ ಸಿರಿ ನವಿಲೇ.... ", ಗೀತೆಯ ಚಿತ್ರ — 4



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 515ರ ಉತ್ತರ

ಆ	ರ್ಯ	ಭ	ಟ		ಪ	ವಿ	ತ್ರ	ಪ್ರೇ	ಮ	
ನಂ		ವ್ಯ			ಲ್ಲ				ಹಾ	
ದ			ಮಾ	ಳ	ವಿ	ಕ		ಕೆಂ	ಚ	
ನಿ	ನ	ಗಾ	ಗಿ		ಜೋ		ನಾ		ತು	
ಲ			ಯ		ಷಿ		ರ		ರ	
ಯ		ಸಂ	ಕ	ಲ್ಪ		ಕ	ದ	ನ		ಆ
	ಟೊ		ನ		ದೇ		ವಿ			ನಂ
	ಮೇ		ಸು		ವ		ಜ	ಯ	ಪ್ರ	ದ
	ಟೋ	ನಿ		ಪ್ರೇ	ಮಾ	ಲ	ಯ			ಆ
	ಸೋ				ನ			ಶೀ		ನಂ
	ಮು	ಗ್ದ	ಮಾ	ನ	ವ		ಕ	ಲಾ	ವಿ	ದ

ಮೇಲಿನಿಂದ ಕೆಳಕ್ಕೆ

1. ಬಿ. ಸಿ. ಪಾಟೀಲ್ ಭಾರತೀಯ ಅರಸನನ್ನು ನೆನಪಿಸುತ್ತಾನೆ — 6
2. ಶಿವರಾಜ್ ಕುಮಾರ್ – ನೀನಾ ಅಭಿನಯದ ಚಿತ್ರ — 2
3. ವಿಷ್ಣುವರ್ಧನ್ ಶಬಾಸ್ ಎನಿಸಿಕೊಂಡಿದ್ದಾನೆ — 5
4. ವಿಷ್ಣು ತೊಟ್ಟ ಹತ್ತು ವೇಷ — 5
5. ಪ್ರಭಾಕರ್ – ಅಂಬರೀಷ್ ಅಭಿನಯದಲ್ಲಿ ಅರಸರಿದ್ದಾರೆ — 6
8. ನಂಬಿದ್ರೆ _ _ _ _ _ _ — 6
11. "ಶಿವ ಶಿವ ಎಂದರೆ ಭಯವಿಲ್ಲ ಶಿವ ನಾಮಕೆ ಸಾಟಿ ಬೇರಿಲ್ಲ.... " — 6
12. ಕುಮಾರ್ ಬಂಗಾರಪ್ಪ – ಶಿವರಂಜಿನಿಯ ಶಾಶ್ವತ ಪ್ರೀತಿ — 5
13. ಅನಂತ್ ನಾಗ್ ಹಾಡಿದ ಬೆಳಗಿನ ಹಾಡು — 5
17. ಬಳ್ಳಾರಿಯವ ಬುಸುಗುಟ್ಟಿದ್ದಾನೆ — 2

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ನಾಳೆ ಸಂಗೀತೋತ್ಸವ

ಹುಣಸೂರು, ಮಾ.7– ಶ್ರೀಪಂಚಾಕ್ಷರಿ ಗವಾಯಿಗಳ 132ನೇ ಜಯಂತಿ ಹಾಗೂ ಪದ್ಮಭೂಷಣ ಡಾ.ಪಂಡಿತ್ ಪುಟ್ಟರಾಜ ಗವಾಯಿಗಳ 110ನೇ ಜನ್ಮದಿನದ ಅಂಗವಾಗಿ ನಗರದ ಗಾನಯೋಗಿ ಡಾ.ಪಂಡಿತ್ ಪುಟ್ಟರಾಜ ಗವಾಯಿಗಳ ಸುಗಮ ಸಂಗೀತ ಪಾಠಶಾಲೆ ಹಾಗೂ ನಾದ ತರಂಗ ಸಂಗೀತ ಶಾಲೆ ಸಂಯುಕ್ತಾಶ್ರಯದಲ್ಲಿ ಮಾ.9ರಂದು 4 ಗಂಟೆಗೆ ಶಾಸ್ತ್ರಿ ಪಬ್ಲಿಕ್ ಶಾಲೆ ಸಭಾಂಗಣದಲ್ಲಿ ಸಂಗೀತೋತ್ಸವ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ವೃದ್ಧೆ ಮೇಲೆ ವ್ಯಕ್ತಿ ಹಲ್ಲೆ



ಹುಣಸೂರು, ಮಾ.7– ವೃದ್ಧೆ ಮೇಲೆ ವ್ಯಕ್ತಿಯೋರ್ವ ಹಲ್ಲೆ ನಡೆಸಿರುವ ಘಟನೆ ತಾಲೂಕಿನಲ್ಲಿ ನಡೆದಿದೆ. ತಾಲೂಕಿನ ಕೊಳವಿಗೆ ಗಿರಿಜನ ಹಾಡಿ ಜೇನು ಕುರುಬ ಸಮುದಾಯದ ಮಣಿ ಎಂಬುವರ ಪತ್ನಿ ಜಯಮ್ಮ(65) ಗಾಯಗೊಂಡವರು. ಕೊಳವಿಗೆ ಗ್ರಾಮದ ರಾಜಣ್ಣ ಎಂಬುವರೇ ಹಲ್ಲೆ ನಡೆಸಿದವರು.

ವಿವರ: ಜಯಮ್ಮ ಬುಧವಾರ ಸಂಜೆ ಆಡು ಮೇಯಿಸಿಕೊಂಡು ಬರುವಾಗ ರಾಜಣ್ಣನವರ ಹೊಲದಲ್ಲಿ ಬೆಳೆದಿದ್ದ ತೆಂಗಿನ ಗಿಡವನ್ನು ಆಡುಗಳು ತಿಂದು ಹಾಕಿದ್ದವು. ಇದರಿಂದ ಕೋಪಗೊಂಡ ರಾಜಣ್ಣ ಜಯಮ್ಮನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ ಆಕೆ ಮೇಲೆ ತೀವ್ರ ಹಲ್ಲೆ ನಡೆಸಿದ್ದಾನೆ. ಇದೀಗ ಜಯಮ್ಮ ಹನಗೋಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಈ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ.

ಶಿವರಾತ್ರಿ ಜಾಗರಣೆಗೆ ದಕ್ಷಿಣ ಕಾಶಿಯಲ್ಲಿ ಸಕಲ ಸಿದ್ಧತೆ

ಖ್ಯಾತ ಹಿನ್ನೆಲೆ ಗಾಯಕರಿಂದ ಗಾಯನ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ



ನಂಜನಗೂಡು, ಮಾ.7– ದಕ್ಷಿಣಕಾಶಿ ಎಂದೇ ಪ್ರಸಿದ್ಧಿ ಪಡೆದಿರುವ ಶ್ರೀಕಂಠೇಶ್ವರನ ಸನ್ನಿಧಿಯಲ್ಲಿ ಮಾ.8ರಂದು ನಡೆಯುವ ಶಿವರಾತ್ರಿ ಜಾಗರಣೆಗೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಈಗಾಗಲೇ ದೇವಾಲಯದ ಒಳಾವರಣ, ಹೊರಾವರಣದಲ್ಲಿ ಹೂವಿನ ಅಲಂಕಾರ, ತಳಿರು ತೋರಣ ಹಾಗೂ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ದೇವಾಲಯದ ಎದುರು ಸರ್ಕಾರದಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸಭಾ ಕಾರ್ಯಕ್ರಮ ಕೈಗೊಳ್ಳಲು ಸಿದ್ಧತೆ ಕೈಗೊಳ್ಳಲಾಗಿದೆ.

ಶಿವರಾತ್ರಿ ಜಾಗರಣೆ ಪ್ರಯುಕ್ತ ಖ್ಯಾತ ಹಿನ್ನೆಲೆ ಗಾಯಕಿ ಡಾ.ಶಮಿತಾ ಮಲ್ನಾಡ್ ಮತ್ತು ತಂಡದಿಂದ ಶಿವನಾಮ ಸ್ಮರಣೆ ಭಕ್ತಿಗೀತೆಗಳು ಸೇರಿದಂತೆ ಭರತನಾಟ್ಯ, ಹಾಸ್ಯ ಕಾರ್ಯಕ್ರಮ, ಹರಿಕಥೆ, ಸುಗಮ ಸಂಗೀತ, ಶಿವತಾಂಡವ ನೃತ್ಯ ವೈಭವ ಸೇರಿದಂತೆ ಬೆಳಗಿನ ಜಾವದವರೆಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಮಹಾಶಿವರಾತ್ರಿ ಅಂಗವಾಗಿ ದೇವಾಲಯದಲ್ಲಿ ಶ್ರೀಕಂಠೇಶ್ವರಸ್ವಾಮಿಗೆ ವಿಶೇಷ ಪೂಜಾ ಕೈಂಕರ್ಯಗಳು ಜರುಗಲಿದ್ದು, ಮುಂಜಾನೆ 5 ಗಂಟೆಗೆ ಕ್ಷೀರಾಭಿಷೇಕ, ಫಲ ಪಂಚಾಮೃತಾಭಿಷೇಕ, ಮಹಾನ್ಯಾಸ ಪೂರ್ವಕವಾಗಿ ಏಕದಶಾವರ ರುದ್ರಾಭಿಷೇಕ, ಅಷ್ಟೋತ್ತರ ಸಹಸ್ರನಾಮ ಬಿಲ್ವಾರ್ಚನೆ, ಮಹಾ ಮಂಗಳಾರತಿ ನೆರವೇರಿದ ಬಳಿಕ ಭಕ್ತರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುತ್ತದೆ.

9 ಗಂಟೆಗೆ ಪ್ರಾತಃಕಾಲದ ಪೂಜೆ, ನಿತ್ಯೋತ್ಸವ, ಸಂಗಮಕಾಲ ಪೂಜೆ ಮತ್ತು 12 ಗಂಟೆಗೆ ಮಧ್ಯಾಹ್ನದ ಕಾಲ ಪೂಜೆ ನೆರವೇರಿಸಲಾಗುತ್ತದೆ. ಸಂಜೆ 5.30ಕ್ಕೆ ಶಿವರಾತ್ರಿ ಅಂಗವಾಗಿ ಮೊದಲನೇ ಜಾವದ ಪೂಜೆ, ರಾತ್ರಿ 9.30ಕ್ಕೆ 2ನೇ ಜಾವದ ಪೂಜೆ, ರಾತ್ರಿ 12.30ಕ್ಕೆ 3ನೇ ಜಾವದ ಪೂಜೆ, ಮಧ್ಯರಾತ್ರಿ 3.30ಕ್ಕೆ 4ನೇ ಜಾವದ ಪೂಜೆ ನೆರವೇರಲಿದ್ದು, ಪ್ರತಿ ಜಾವದ ಪೂಜೆಯಲ್ಲೂ ಕ್ಷೀರಾಭಿಷೇಕ, ಫಲ ಪಂಚಾಮೃತಾಭಿಷೇಕ, ಮಹಾನ್ಯಾಸ ಪೂರ್ವಕವಾಗಿ ಏಕಾದಶವಾರ ರುದ್ರಾಭಿಷೇಕ, ಅಷ್ಟೋತ್ತರ ಸಹಸ್ರನಾಮ ಬಿಲ್ವಾರ್ಚನೆ, ಮಹಾ ಮಂಗಳಾರತಿ ಪೂಜೆಗಳನ್ನು ನೆರವೇರಿಸಲಾಗುತ್ತದೆ. ನಂತರ ಕೈಲಾಸ ವಾಹನ ಉತ್ಸವ ಮೂಲಕ ಶಿವರಾತ್ರಿ ಪೂಜೆ ಮುಕ್ತಾಯವಾಗಲಿದೆ ಎಂದು ದೇಗುಲದ ಆಗಮಿಕ ದೀಕ್ಷಿತರಾದ ನಾಗಚಂದ್ರ ದೀಕ್ಷಿತ್ ತಿಳಿಸಿದ್ದಾರೆ.

ಶಿವರಾತ್ರಿ ಪ್ರಯುಕ್ತ ಶುಕ್ರವಾರ ರಾತ್ರಿಯಿಂದ ಮುಂಜಾನೆವರೆಗೂ ದೇವಾಲಯದ ಬಾಗಿಲು ಭಕ್ತರ ದರ್ಶನಕ್ಕಾಗಿ ತೆರೆದಿರಲಿದೆ ಯಾವುದೇ ಪೂಜಾ ಟಿಕೆಟ್ ನೀಡುವುದಿಲ್ಲ. ಅಲ್ಲದೆ ಯಾವುದೇ ಸೇವೆ ಲಭ್ಯವಿರುವುದಿಲ್ಲ. ಬರೀ ದರ್ಶನಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ನೂಕು ನುಗ್ಗಲು ನಿಯಂತ್ರಿಸಲು ದೇವಾಲಯದ ಪ್ರವೇಶ ದ್ವಾರದಲ್ಲಿ ಕಬ್ಬಿಣದ ಬ್ಯಾರಿಕೇಡ್ ಅಳವಡಿಸಲಾಗಿದೆ. ಧರ್ಮ ದರ್ಶನಕ್ಕೆ ಪ್ರತ್ಯೇಕ ಸಾಲು ಮತ್ತು 100 ರೂ. ಟಿಕೆಟ್‌ಗೆ ಪ್ರತ್ಯೇಕ ಸಾಲು ಮತ್ತು ವಿವಿಐಪಿಗಳಿಗೆ, 65 ವರ್ಷ ಮೇಲ್ಪಟ್ಟ ವಯೋವೃದ್ಧರಿಗೆ ಪ್ರತ್ಯೇಕ ಸಾಲುಗಳನ್ನು ರಚಿಸಲಾಗಿದೆ. ಬಿಸಿಲಿನ ತಾಪದ ಹಿನ್ನೆಲೆಯಲ್ಲಿ ನೆರಳಿನ ವ್ಯವಸ್ಥೆ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ. ಜೊತೆಗೆ ಶೌಚಾಲಯದ ವ್ಯವಸ್ಥೆ ಮತ್ತು ಸುರಕ್ಷತೆ ದೃಷ್ಟಿಯಿಂದ ಸಿಸಿ ಟಿವಿ ಕ್ಯಾಮರಾಗಳನ್ನೂ ಅಳವಡಿಸಲಾಗಿದೆ. ಎಂದು ದೇವಾಲಯದ ಇಒ ಜಗದೀಶ್ ಕುಮಾರ್ ತಿಳಿಸಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದ್ದು, ಜಾತ್ರೆ ಹಿನ್ನೆಲೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಸ್ಥಳ ಪರಿಶೀಲಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಭೀಮ (ತೆ)	4 ಪ್ರದರ್ಶನಗಳು,
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸೈತಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕರಟಕ ದಮನಕ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಂಗನಾಯಕ (ಕ)	4 ಪ್ರದರ್ಶನಗಳು
ರಾಜಕಮಲ್	
ಕರಟಕ ದಮನಕ (ಕ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	2 ಪ್ರದರ್ಶನಗಳು
ಸೈತಾನ್ (ಹಿಂ)	2 ಪ್ರದರ್ಶನಗಳು
ಲಿಡೋ	
ಭೀಮ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಭೀಮ (ತೆ)	4 ಪ್ರದರ್ಶನಗಳು
ಪ್ರಭಾ	
ಕಾಟೇರ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಗಾಮಿ (ತೆ): ಬೆ.10.40ಕ್ಕೆ, ರಾ.10.10ಕ್ಕೆ, ಜೋಗ್ 101 (ಕ): ಮ.1.40ಕ್ಕೆ, ಆರ್ಟಿಕಲ್ 370 (ಹಿಂ): ಸಂ.4ಕ್ಕೆ, ರಾ.7.05ಕ್ಕೆ.
ಸ್ಕ್ರೀನ್ 2	ಕರಟಕ ದಮನಕ (ಕ): ಬೆ.10.20ಕ್ಕೆ, ಸೈತಾನ್ (ಹಿಂ): ಮ.1.25ಕ್ಕೆ, ರಾ.7.10ಕ್ಕೆ, ಡ್ಯೂನ್ ಪಾರ್ಟ್2 (ಇಂ): ಸಂ.4ಕ್ಕೆ, ರಂಗನಾಯಕ (ಕ): ರಾ.9.50ಕ್ಕೆ.
ಸ್ಕ್ರೀನ್ 3	ಬ್ಲಿಂಕ್ (ಕ): ಬೆ.10.25ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಮ.1.15ಕ್ಕೆ, ಭೀಮ (ತೆ): ಸಂ.4.10ಕ್ಕೆ, ಮಂಜುಮಲೆ (ಮ): ರಾ.7.10ಕ್ಕೆ, ತಂಕಮಣಿ (ಮ): ರಾ.9.55ಕ್ಕೆ.
ಸ್ಕ್ರೀನ್ 4	ರಂಗನಾಯಕ (ಕ): ಬೆ.10.35ಕ್ಕೆ, ಕರಟಕ ದಮನಕ (ಕ): ಮ.1ಕ್ಕೆ,, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಆಪರೇಷನ್ ವ್ಯಾಲೆಂಟೈನ್ (ತೆ): ಬೆ.9.55ಕ್ಕೆ, ಲಾಪತಾ ಲೇಡಿಸ್ (ಹಿಂ): ಮ.12.45ಕ್ಕೆ, ಡ್ಯೂನ್ ಪಾರ್ಟ್2 (ಇಂ): ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಡ್ಯೂನ್ ಪಾರ್ಟ್2 (ಇಂ): ಬೆ.9.50ಕ್ಕೆ, ಮ.1.20ಕ್ಕೆ, ಕ್ರೀಂ (ಕ): ಸಂ.4.50ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ): ರಾ.7.25ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಲಾಪತಾ ಲೇಡಿಸ್ (ಹಿಂ): ಬೆ.10ಕ್ಕೆ, ರಾ.7.25ಕ್ಕೆ, ಆರ್ಟಿಕಲ್ 370 (ಹಿಂ): ಮ.12.45ಕ್ಕೆ, ಸಂ.4.05ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಆಪರೇಷನ್ ವ್ಯಾಲೆಂಟೈನ್ (ತೆ): ಮ.12ಕ್ಕೆ, ಉಪಾಧ್ಯಕ್ಷ (ಕ): ಮ.3.05ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಸಂ.6.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ಡೆಮೋನ್ ಸ್ಲೇಯರ್ (ಜ): ಸಂ.4.30ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ): ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಲಾಪತಾ ಲೇಡಿಸ್ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.11.55ಕ್ಕೆ, ಕ್ರೀಂ (ಕ): ಸಂ.6.55ಕ್ಕೆ, ಪ್ರೇಮಲು (ಮ): ರಾ.10.20ಕ್ಕೆ, ಜೋಶುವಾ (ತ): ಮ.1.20ಕ್ಕೆ, ಸಂ.6.55ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ತಿ.ನರಸೀಪುರ ಪುರಸಭೆಗೆ 58.85 ಲಕ್ಷ ಉಳಿತಾಯ ಬಜೆಟ್



ಉಪವಿಭಾಗಾಧಿಕಾರಿ ಎಲ್.ನಂದೀಶ್ 2024–25ನೇ ಸಾಲಿನ ಬಜೆಟ್ ಮಂಡಿಸಿದರು.

ತಿ.ನರಸೀಪುರ, ಮಾ.7– ಪಟ್ಟಣದ ಪುರಸಭೆ ಆಡಳಿತಾಧಿಕಾರಿಯೂ ಆದ ಉಪ ವಿಭಾಗಾಧಿಕಾರಿ ಎಲ್.ಎಂ.ನಂದೀಶ್ ಪುರಸಭೆಯ 2024–25ನೇ ಸಾಲಿಗೆ 58,85,963 ರೂ.ಗಳ ಉಳಿತಾಯ ಬಜೆಟ್ ಮಂಡಿಸಿದರು.

ಪುರಸಭೆ ಸಭಾಂಗಣದಲ್ಲಿ ಬಜೆಟ್ ಮಂಡಿಸಿದ ಉಪವಿಭಾಗಾಧಿಕಾರಿಗಳು 18,35,69,809 ರೂ. ಒಟ್ಟು ನಿರೀಕ್ಷಿತ ಆದಾಯ ಹಾಗೂ 17,76,83,846 ರೂ. ಪಾವತಿ ನಿರೀಕ್ಷಿಸಲಾಗಿದೆ ಎಂದರು.

ನೀರು ಸರಬರಾಜು ಮತ್ತು ಒಳಚರಂಡಿ ಸಂಪರ್ಕ ಶುಲ್ಕದಿಂದ 63 ಲಕ್ಷ, ಆಸ್ತಿ ತೆರಿಗೆಯಿಂದ 2 ಕೋಟಿ, ಆಸ್ತಿ ತೆರಿಗೆ ದಂಡ 40 ಲಕ್ಷ ರೂ, ಘನ ತ್ಯಾಜ್ಯ ನಿರ್ವಹಣಾ ಶುಲ್ಕ 16 ಲಕ್ಷ, ಉಪಕರ ಸಂಗ್ರಹದಿಂದ 40 ಲಕ್ಷ, ಜಾಹೀರಾತು ತೆರಿಗೆಯಿಂದ 75 ಸಾವಿರ, ವಾಣಿಜ್ಯ ಮಳಿಗೆ ಬಾಡಿಗೆ 45 ಲಕ್ಷ, ಉದ್ದಿಮೆ ಪರವಾನಗಿ 12,15,400, ಕಟ್ಟಡ ಪರವಾನಗಿ 12.50 ಲಕ್ಷ ಖಾತೆ ವರ್ಗಾವಣೆ ಮತ್ತು ಖಾತೆ ನಕಲು ಫೀ 7.50 ಲಕ್ಷ, ಅಭಿವೃದ್ಧಿ ಶುಲ್ಕ ಹಾಗೂ ಇತರೆ ಪರವಾನಗಿ ಮಾರುಕಟ್ಟೆ ಶುಲ್ಕ ಹಾಗೂ ಇತರೆ ಮೂಲಗಳ ಆದಾಯದಿಂದ 1,16,64,409 ರೂ., ವೇತನ ಅನುದಾನ 3.19 ಕೋಟಿ, ವಿದ್ಯುತ್ ಅನುದಾನ 3.61 ಕೋಟಿ, ಮುಕ್ತ ನಿಧಿ ಅನುದಾನ 67 ಲಕ್ಷ, ಬ್ಯಾಂಕ್ ಖಾತೆಗಳ ಬಡ್ಡಿ 14 ಲಕ್ಷ, ನಿರ್ದಿಷ್ಟ ಅನುದಾನ 3.58 ಕೋಟಿ, ಸ್ವಚ್ಛ ಭಾರತ್ ಮಿಷನ್ ಅನುದಾನದಿಂದ 60,15 ಲಕ್ಷ, ಸಲ್ಮ್ ಮತ್ತು ನಲ್ಮ್ ಪೌರಕಾರ್ಮಿಕರ ಗೃಹ ಭಾಗ್ಯದ ಅನುದಾನಗಳಿಂದ 10 ಲಕ್ಷ ರೂ. ಆದಾಯ ನಿರೀಕ್ಷಿಸಲಾಗಿದೆ ಎಂದರು.

ಪ್ರಸಕ್ತ ಸಾಲಿನಲ್ಲಿ 17,76,83,846 ಕೋಟಿ ರೂ. ಪಾವತಿ ನಿರೀಕ್ಷೆ ಹೊಂದಲಾಗಿದ್ದು, ಸ್ವಾಗತ ಕಮಾನು ರಸ್ತೆ ಬದಿ ಮಾರ್ಗಸೂಚಿ ಫಲಕಗಳ ಅಳವಡಿಕೆ ಹಾಗೂ ಇತರೆ ನಾಗರಿಕ ಸೌಲಭ್ಯಗಳಿಗೆ 60 ಲಕ್ಷ ರೂ., ಕಟ್ಟಡಗಳ ಅಭಿವೃದ್ಧಿ ಹಾಗೂ ನಿರ್ಮಾಣಕ್ಕೆ 1 ಕೋಟಿ, ರಾಷ್ಟ್ರ ನಾಯಕರ ಪ್ರತಿಮೆ ನಿರ್ಮಾಣಕ್ಕಾಗಿ 10 ಲಕ್ಷ, 15ನೇ ಹಣಕಾಸು ಯೋಜನೆಯಡಿ ರಸ್ತೆ, ಸೇತುವೆ ಮತ್ತು ಮಳೆ ನೀರಿನ ಚರಂಡಿ, ತೆರೆದ ಚರಂಡಿಗಳು, ಮಾರ್ಗಗಳು ಹಾಗೂ ಉದ್ಯಾನಗಳ ಅಭಿವೃದ್ಧಿಗೆ 2.49 ಕೋಟಿ, ಸಾರ್ವಜನಿಕ ಶೌಚಾಲಯ ನಿರ್ಮಾಣಕ್ಕೆ 25 ಲಕ್ಷ, ಸ್ಮಶಾನಗಳ ಅಭಿವೃದ್ಧಿಗೆ 30 ಲಕ್ಷ, ಪ.ಜಾತಿ ಮತ್ತು ಪಂಗಡಗಳ ಅಭಿವೃದ್ಧಿ ನಿಧಿಗೆ ಎಸ್‌ಎಫ್‌ಸಿ ಮತ್ತು ಪುರಸಭಾ ನಿಧಿಗೆ 24,96,809, ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಧಿಗೆ ಎಸ್‌ಎಫ್‌ಸಿ ಮತ್ತು ಪುರಸಭಾ ನಿಧಿಗೆ 8.5 ಲಕ್ಷ, ಪುರಸಭಾ ನೌಕರರ ವೇತನಕ್ಕಾಗಿ 3.19 ಕೋಟಿ, ವಿದ್ಯುತ್ ಶುಲ್ಕಕ್ಕೆ 3.61 ಕೋಟಿ, ನೀರು ಸರಬರಾಜು ಯಂತ್ರಗಳ ರಿಪೇರಿ, ಕೊಳವೆ ಸಾಮಗ್ರಿಗಳು, ನೀರು ಶುದ್ಧೀಕರಣಕ್ಕಾಗಿ ಹಾಗೂ ಮೋಟಾರ್ ಪಂಪ್ ರಿಪೇರಿ ಮತ್ತು ನಿರ್ವಹಣೆ, ಘನ ತ್ಯಾಜ್ಯ ವಿಲೇವಾರಿ ನೆಲಭರ್ತಿ ಜಾಗದ ಅಭಿವೃದ್ಧಿಗಾಗಿ 2,73,81,591 ಕೋಟಿ ರೂ. ಮೀಸಲಿರಿಸಲಾಗಿದೆ ಎಂದರು.

ನಂತರ ನಡೆದ ಚರ್ಚೆಯಲ್ಲಿ ಮಾಜಿ ಅಧ್ಯಕ್ಷ ಎನ್.ಸೋಮು, ಎಸ್.ಮದನ್ ರಾಜ್ ಸೇರಿದಂತೆ ಬಹುತೇಕ ಸದಸ್ಯರು ಸರ್ಕಾರ ಸಾರ್ವಜನಿಕರಿಗೆ ವಿಧಿಸುತ್ತಿರುವ ಆಸ್ತಿ ತೆರಿಗೆ ಕುರಿತಂತೆ ಅಭಿಪ್ರಾಯ ಮಂಡಿಸಿದರು. ಸರ್ಕಾರ ನಿಗದಿಪಡಿಸಿರುವ ಆಸ್ತಿ ತೆರಿಗೆ ಸಾರ್ವಜನಿಕರಿಗೆ ಹೊರೆಯಾಗಿದೆ. ನಿಗದಿಯಾಗಿರುವ ಕಂದಾಯದ ಹಣ ಕಟ್ಟಲು ತೊಂದರೆ ಉಂಟಾಗಿರುವುದರಿಂದ ಪುರಸಭೆಯಿಂದ ಜನತೆಗೆ ಅನುಕೂಲವಾಗುವ ರೀತಿ ಕಂದಾಯದ ಪಾವತಿ ಹಣ ನಿಗದಿಪಡಿಸಬೇಕೆಂದು ಒತ್ತಾಯಿಸಿದರು.

ಈ ವೇಳೆ ಮುಖ್ಯಾಧಿಕಾರಿ ಬಿ.ಕೆ. ವಸಂತಕುಮಾರಿ, ಮಾಜಿ ಅಧ್ಯಕ್ಷರಾದ ಎನ್.ಸೋಮು, ಎಸ್.ಮದನ್ ರಾಜ್, ಟಿ.ಎಂ.ನಂಜುಂಡಸ್ವಾಮಿ, ಸಾಮಾಜಿಕ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸೈಯದ್ ಅಹಮದ್, ಸದಸ್ಯರಾದ ಸಿ.ಪ್ರಕಾಶ್, ಬಾದಾಮಿ ಮಂಜು, ಮೆಡಿಕಲ್ ನಾಗರಾಜ್, ಎಲ್.ಮಂಜುನಾಥ್, ಎಸ್.ಕೆ.ಕಿರಣ್, ಸಿಸ್ಟಮ್ ಸಿದ್ದು, ಮಾಜಿ ಉಪಾಧ್ಯಕ್ಷರಾದ ಪ್ರೇಮ, ನಾಗರತ್ನ, ರೂಪಾ, ರಾಜೇಶ್ವರಿ, ತೇಜಸ್ವಿನಿ, ಶೋಭಾರಾಣಿ, ವಸಂತ, ಬೇಬಿ, ರೂಪಾ, ಸಿದ್ದು, ಮಹೇಂದ್ರ ಮಧು, ಇಂಜಿನಿಯರ್ ನಾಗರಾಜು, ಲೆಕ್ಕಾಧಿಕಾರಿ ವಿನಯ್, ಎಸ್. ಡಿ.ಎ.ರಾಜೇಂದ್ರ, ಮಹದೇವಯ್ಯ ಮತ್ತಿತರರಿದ್ದರು.

ವರುಣ ಅಭಿವೃದ್ಧಿಗೆ 620 ಕೋಟಿ ಅನುದಾನಕ್ಕೆ ಪ್ರಸ್ತಾವನೆ



ಮಾಜಿ ಶಾಸಕ ಡಾ.ಯತೀಂದ್ರ ಅವರನ್ನು ಸನ್ಮಾನಿಸಲಾಯಿತು.


ತಿ.ನರಸೀಪುರ, ಮಾ.7– ವರುಣ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ 620 ಕೋಟಿ ರೂ. ಅನುದಾನ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಗಿದೆ ಎಂದು ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ವರುಣ ಸರ್ಕಾರಿ ಪ್ರಾಥಮಿಕ ಶಾಲಾವರಣದಲ್ಲಿ ನಡೆದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಂಕುಸ್ಥಾಪನೆ, ಕಾರ್ಮಿಕ ಇಲಾಖೆಯಿಂದ ಲ್ಯಾಪ್‌ಟಾಪ್ ವಿತರಣೆ, ವಿಕಲಚೇತನರಿಗೆ ವಿದ್ಯುತ್ ಚಾಲಿತ ಸ್ಕೂಟರ್ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಿದ್ದರಾಮಯ್ಯ ಅವರು ಕಳೆದ ಬಾರಿ ಮುಖ್ಯಮಂತ್ರಿಯಾಗಿದ್ದ ವೇಳೆ ವರುಣ ಕ್ಷೇತ್ರಕ್ಕೆ 1800 ಕೋಟಿ ರೂ. ಅನುದಾನ ನೀಡಿದ್ದರಿಂದ ಹೆಚ್ಚಿನ ಅಭಿವೃದ್ಧಿ ಕೆಲಸ ನಡೆದಿತ್ತು. ಈಗ ಮತ್ತೆ 620 ಕೋಟಿ ರೂ. ನೀಡುವಂತೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಪ್ರಸ್ತಾವನೆ ಮಂಜೂರಾತಿ ಪಡೆಯುವ ಹಂತದಲ್ಲಿದ್ದು, ಮುಂದಿನ ಒಂದೂವರೆ ವರ್ಷದೊಳಗೆ ಅನುದಾನ ಬಿಡುಗಡೆಯಾಗುವ ನಿರೀಕ್ಷೆ ಇದೆ. ನಾನಾಗಲಿ, ನಮ್ಮ ತಂದೆಯವರಾಗಲಿ ವರುಣ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದೇವೆ. ಹಾಗಾಗಿ ಮುಂದೆ ವರುಣ ಕ್ಷೇತ್ರ ಮಾದರಿ ಕ್ಷೇತ್ರವಾಗಿ ರೂಪುಗೊಳ್ಳಲಿದೆ ಎಂದರು.

ಈ ಬಾರಿ ವರುಣ ಕ್ಷೇತ್ರಕ್ಕೆ 72 ಕೋಟಿ ಹಣ ಮಂಜೂರಾಗಿದೆ. ಕೆಲವು ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಕೆಲಸ ಆರಂಭಿಸಿದ್ದೇವೆ. ಕೆಲವೊಂದು ಕಾಮಗಾರಿ ಚುನಾವಣಾ ನೀತಿ ಸಂಹಿತೆ ಜಾರಿಯಾಗುವ ಒಳಗೆ ಮಾಡಬೇಕಾಗುತ್ತದೆ. ಕೆಲವೊಂದು ಕಾಮಗಾರಿ ಪೂರ್ಣಗೊಂಡು ಉದ್ಘಾಟನೆ ಬಾಕಿ ಇತ್ತು. ಅದನ್ನು ಈಗ ಮಾಡುತ್ತಿದ್ದೇವೆ ಎಂದರು. ಕೆಪಿಸಿಸಿ ಮಾಜಿ ಕಾರ್ಯದರ್ಶಿ ವರುಣ ಮಹೇಶ್ ಮಾತನಾಡಿದರು. ರಂಗಸ್ವಾಮಿ, ಮಂಜುಳಾ, ಮುದ್ದರಾಮೇಗೌಡ, ಕೃಷ್ಣಮೂರ್ತಿ, ಚಿಕ್ಕದೇವಯ್ಯ, ದೇವರಾಜು, ವೆಂಕಟೇಶ್, ಶಿವಕುಮಾರ್, ಕಾರ್ಮಿಕ ಇಲಾಖೆ ಎಂಡಿ ರಾಜೇಶ್ ಕೆಜಾಧವ್, ಬಿಇಓ ವಿವೇಕಾನಂದ ಸೇರಿದಂತೆ ಮತ್ತಿತರರಿದ್ದರು.

ಪ್ರತ್ಯೇಕ ಪ್ರಕರಣ: ನಂ.ಗೂಡು, ಬೈಲಕುಪ್ಪೆಯಲ್ಲಿ ಅರಣ್ಯ ಭಸ್ಮ



ನಂಜನಗೂಡು ಬಳಿ ಬೆಂಕಿಗೆ ಅರಣ್ಯ ಭಸ್ಮವಾಗಿರುವುದು.

ನಂಜನಗೂಡು/ ಬೈಲಕುಪ್ಪೆ, ಮಾ.7– ಪ್ರತ್ಯೇಕ ಪ್ರಕರಣಗಳಲ್ಲಿ ಕಿಡಿಗೇಡಿಗಳ ಕೃತ್ಯಕ್ಕೆ ನಂಜನಗೂಡು ಹಾಗೂ ಬೈಲಕುಪ್ಪೆ ಬಳಿ ಅರಣ್ಯ ಪ್ರದೇಶ ಬೆಂಕಿಗೆ ಆಹುತಿಯಾಗಿದೆ.


ನಂಜನಗೂಡು: ತಾಲೂಕಿನ ಬ್ಯಾಳಾರುಗುಡ್ಡದ ಸಾಮಾಜಿಕ ಅರಣ್ಯ ಪ್ರದೇಶಕ್ಕೆ ಬೆಂಕಿ ತಗುಲಿ 20 ಎಕರೆ ಬೆಂಕಿಗೆ ಆಹುತಿಯಾಗಿರುವ ಘಟನೆ ಜರುಗಿದೆ. 150 ಎಕರೆ ವ್ಯಾಪ್ತಿಯ ಸಾಮಾಜಿಕ ಅರಣ್ಯ ಪ್ರದೇಶಕ್ಕೆ ಕಿಡಿಗೇಡಿಗಳು ಬೆಂಕಿ ಇಟ್ಟ ಪರಿಣಾಮ ಬೆಂಕಿ ಕೆನ್ನಾಲಿಗೆಗೆ 20 ಎಕರೆಗೂ ಅಧಿಕ ಪ್ರದೇಶದಲ್ಲಿದ್ದ ಹುಲ್ಲುಗಾವಲು ಪ್ರದೇಶ ಮತ್ತು ಗಿಡ ಮರಗಳಿಗೆ ಬೆಂಕಿ ತಗುಲಿ ನಾಶವಾಗಿವೆ. ಈ ಪ್ರದೇಶದಲ್ಲಿ ಅಕ್ರಮ ಮಣ್ಣು ಸಾಗಾಟ ದಂಧೆ ವ್ಯಾಪಕವಾಗಿ ನಡೆಯುತ್ತಿದ್ದರೂ ಅರಣ್ಯಾಧಿಕಾರಿಗಳು ಅಕ್ರಮ ದಂಧೆಕೋರರ ಜೊತೆ ಶಾಮೀಲಾಗಿ ಮಣ್ಣು ಸಾಗಾಟ ನಡೆಸಲು ಅನುವು ಮಾಡಿಕೊಟ್ಟಿದ್ದಾರೆ. ಅಕ್ರಮ ಮಣ್ಣು ಸಾಗಾಟ ನಡೆಸುವ ದಂಧೆಕೋರರೆ ಅರಣ್ಯ ಪ್ರದೇಶಕ್ಕೆ ಬೆಂಕಿ ಇಟ್ಟಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ.

ಬೆಂಕಿ ತಗುಲಿರುವ ವಿಷಯವನ್ನು ಸಾಮಾಜಿಕ ಅರಣ್ಯಾಧಿಕಾರಿಗಳಿಗೆ ಕರೆ ಮಾಡಿ ತಿಳಿಸಿದರೂ ಸ್ಥಳಕ್ಕಾಗಮಿಸದೇ ನಿರ್ಲಕ್ಷ್ಯ ವಹಿಸಿದ್ದರಿಂದ ಬೆಂಕಿ ಮತ್ತಷ್ಟು ವ್ಯಾಪಿಸಿತು ಎಂದು ಹಂಡುವಿನಹಳ್ಳಿ, ಬ್ಯಾಳಾರು ಮತ್ತು ಹೆಗ್ಗಡಹಳ್ಳಿ ಗ್ರಾಮಸ್ಥರು ಆರೋಪಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಧಾವಿಸಿದ ಅರಣ್ಯಾಧಿಕಾರಿಗಳು ಗ್ರಾಮಸ್ಥರ ಸಹಾಯದಿಂದ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದು, ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ.

ಬೈಲಕುಪ್ಪೆ: ಇಲ್ಲಿಗೆ ಸಮೀಪದ ಹುಣಸೂರು ಅರಣ್ಯ ವಿಭಾಗ ಪಿರಿಯಾಪಟ್ಟಣ ವಲಯ ಗುಳ್ಳೇದಳ್ಳ ಸೇರಿದ ಮೀಸಲು ಅರಣ್ಯಕ್ಕೆ ದುಷ್ಕರ್ಮಿಗಳು ಬೆಂಕಿ ಇಟ್ಟ ಪರಿಣಾಮ 5 ಎಕರೆಗೂ ಹೆಚ್ಚು ಅರಣ್ಯ ಭಸ್ಮವಾಗಿದೆ.

ಗುರುವಾರ ಬೆಳಗ್ಗೆ 11.30ರ ವೇಳೆ ಅರಣ್ಯ ಇಲಾಖೆ ಸಿಬ್ಬಂದಿ ಸೋಮಯ್ಯ ಎಂಬುವವರು ಅರಣ್ಯಕ್ಕೆ ಬೆಂಕಿ ಬಿದ್ದಿರುವುದನ್ನು ಗಮನಿಸಿ ತಕ್ಷಣ ಪಿರಿಯಾಪಟ್ಟಣ ಅಗ್ನಿಶಾಮಕ ಠಾಣೆಗೆ ಕರೆ ವಿಷಯ ಮುಟ್ಟಿಸಿದರು. ಬಳಿಕ ಸ್ಥಳಕ್ಕಾಗಮಿಸಿದ ಸಿಬ್ಬಂದಿ ಬೆಂಕಿ ನಂದಿಸಿ ಹೆಚ್ಚಿನ ಅನಾಹುತ ತಪ್ಪಿಸಿದರು.

ಹುಣಸೂರು ನಗರಸಭೆಗೆ 97.78 ಲಕ್ಷ ಉಳಿತಾಯ ಬಜೆಟ್



ಹುಣಸೂರು, ಮಾ.7– ಇಲ್ಲಿನ ನಗರಸಭೆ ಆಡಳಿತಾಧಿಕಾರಿಯೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅವರು, ಗುರುವಾರ 2024–25ನೇ ಸಾಲಿಗೆ 97.78 ಲಕ್ಷ ರೂ. ಉಳಿತಾಯ ಬಜೆಟ್ ಮಂಡಿಸಿದರು.

ನಂತರ ಮಾತನಾಡಿದ ಅವರು ವಿವಿಧ ಮೂಲಗಳಿಂದ 4178.48 ಲಕ್ಷ ಆದಾಯ ನಿರೀಕ್ಷಿಸಲಾಗಿದ್ದು, ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ 4080.70 ಲಕ್ಷ ರೂ. ಖರ್ಚು ಮಾಡುವ ಮೂಲಕ 97.78 ಲಕ್ಷ ರೂ. ಉಳಿತಾಯ ನಿರೀಕ್ಷಿಸಲಾಗಿದೆ ಎಂದರು.

ನಗರಸಭೆ ಆದಾಯ: ಆಸ್ತಿ ತೆರಿಗೆಯಿಂದ 467 ಲಕ್ಷ ನೀರು ಸರಬರಾಜು ಮತ್ತು ಸಂಪರ್ಕದ ಶುಲ್ಕ 88 ಲಕ್ಷ, ಉದ್ದಿಮೆ ಮತ್ತು ಕಟ್ಟಡ ಪರವಾನಗಿಯಿಂದ 23 ಲಕ್ಷ, ವಾಣಿಜ್ಯ ಸಂಕೀರ್ಣಗಳ ಬಾಡಿಗೆ 30 ಲಕ್ಷ, ನಗರಯೋಜನೆ ಮತ್ತು ಕಟ್ಟಡ ಪರವಾನಗಿಯಿಂದ 23.50 ಲಕ್ಷ, ಮುದ್ರಾಂಕ ಶುಲ್ಕ 5 ಲಕ್ಷ, ಖಾತೆ ವರ್ಗಾವಣೆ, ನಕಲು ಶುಲ್ಕ 20 ಲಕ್ಷ, ಅನುಪಯುಕ್ತ ವಸ್ತುಗಳ ಮಾರಾಟ, ಎಸ್‌ಡಬ್ಲ್ಯೂಎಂಪಿ ಗೊಬ್ಬರ ಮಾರಾಟ, ನೆಲ ಬಾಡಿಗೆ, ದಂಡ ಮತ್ತಿತರ ಮೂಲಗಳಿಂದ 86.45 ಲಕ್ಷ ಸೇರಿದಂತೆ ಒಟ್ಟು 742.95 ಲಕ್ಷ ರೂ.

ಸರ್ಕಾರದ ಅನುದಾನಗಳು: ಎಸ್‌ಸಿಪಿ 21 ಲಕ್ಷ ಟಿಎಸ್‌ಪಿ 9 ಲಕ್ಷ ಬಂಡವಾಳ ಆಸ್ತಿಗಳ ಸೃಜನತೆಗೆ 70 ಲಕ್ಷ ಸೇರಿದಂತೆ 100 ಲಕ್ಷ, ಎಸ್‌ಎಫ್‌ಸಿ ವಿದ್ಯುತ್ ಶಕ್ತಿ ಮತ್ತು ನೀರು ಸರಬರಾಜು ಅನುದಾನ 410 ಲಕ್ಷ, ಎಸ್‌ಎಫ್‌ಸಿ ವೇತನ ಅನುದಾನ 350 ಲಕ್ಷ, ಎಸ್‌ಎಫ್‌ಸಿ ಕುಡಿಯುವ ನೀರಿನ ಅನುದಾನ 8.50 ಲಕ್ಷ, ಎಸ್‌ಎಫ್‌ಸಿ ವಿಶೇಷ ಅನುದಾನ 352.80 ಲಕ್ಷ, 15ನೇ ಹಣಕಾಸು ಯೋಜನೆ ಅನುದಾನ 455 ಲಕ್ಷ, ಇತರೆ ಅನುದಾನ 10 ಲಕ್ಷ ಸೇರಿದಂತೆ 1686.30 ಲಕ್ಷ ರೂ. ಬರಲಿದೆ ಎಂದರು.

ಪ್ರಸಕ್ತ ಸಾಲಿನ ವಿವಿಧ ಕಾರ್ಯಕ್ರಮಗಳಿಗಾಗಿ ಕಾರ್ಯ ಯೋಜನೆ ರೂಪಿಸಲಾಗಿದೆ. ಅದರಂತೆ ಹಳೇ ಬಿಎಂ ರಸ್ತೆ ಐಟಿಐ ಕಾಲೇಜು ಪಕ್ಕದ ನಗರಸಭೆ ಜಾಗದಲ್ಲಿ ಫುಡ್‌ಕೋರ್ಟ್ ನಿರ್ಮಾಣಕ್ಕೆ 100 ಲಕ್ಷ, ಹುಣಸೂರಿನ ಮುಖ್ಯ ರಸ್ತೆಯ ಎರಡೂ ಕಡೆ ಸ್ವಾಗತ ಕಮಾನು ನಿರ್ಮಾಣ, ರಸ್ತೆಗಳ ನಾಮ ಫಲಕ ಅಳವಡಿಕೆಗೆ 75 ಲಕ್ಷ, ಮಳೆ ನೀರು ಚರಂಡಿ ಅಭಿವೃದ್ಧಿಗೆ 700 ಲಕ್ಷ, ಒಳಚರಂಡಿ ಅಭಿವೃದ್ಧಿಗೆ 150 ಲಕ್ಷ, ಘನತ್ಯಾಜ್ಯ ನಿರ್ವಹಣೆ ಎಸ್‌ಬಿಎಮ್–2 ಯೋಜನೆಗೆ 200 ಲಕ್ಷ ಯಂತ್ರೋಪಕರಣ ಖರೀದಿಗಾಗಿ 120 ಲಕ್ಷ ಹೈಮಾಸ್ಟ್ ದೀಪ ಮತ್ತು ಟ್ರಾಫಿಕ್ ಸಿಗ್ನಲ್ ಅಳವಡಿಕೆಗೆ 100 ಲಕ್ಷ, ಸ್ಮಶಾನಗಳ ಅಭಿವೃದ್ಧಿಗೆ 40 ಲಕ್ಷ, ಕುಡಿಯುವ ನೀರು ಪೈಪ್‌ಲೈನ್ ಕಾಮಗಾರಿಗೆ 200 ಲಕ್ಷ, ಇ ಆಫೀಸ್ ಅನುಷ್ಠಾನ, ಪೀಠೋಪಕರಣ ಖರೀದಿಗೆ 40 ಲಕ್ಷ, ಪೌರಕಾರ್ಮಿಕರ ಬೆಳಗಿನ ಉಪಾಹಾರ, ಆರೋಗ್ಯ ತಪಾಸಣೆ, ವಿಮೆ, ವಿದ್ಯಾರ್ಥಿ ವೇತನ ನೀಡಲು 39 ಲಕ್ಷ, ಹಿಂದುಳಿದ ವರ್ಗಗಳಿಗೆ ಮನೆ ನಿರ್ಮಾಣಕ್ಕೆ ಸಹಾಯ ಧನ ಮತ್ತು ವಿದ್ಯಾರ್ಥಿ ವೇತನಕ್ಕಾಗಿ 10.25 ಲಕ್ಷ, ಅಂಗವಿಕಲರ ವ್ಹೀಲ್‌ಚೇರ್, ಆರೋಗ್ಯ ಸೇವೆಗೆ 7 ಲಕ್ಷ ಸೇರಿದಂತೆ 1831.25 ಲಕ್ಷ ಬಳಸಲು ಉದ್ದೇಶಿಸಲಾಗಿದೆ ಎಂದರು.


ವೇತನ ಪಾವತಿಗೆ 430 ಲಕ್ಷ, ಪತ್ರಿಕಾ ಪ್ರಕಟಣೆ, ಲೇಖನ ಸಾಮಗ್ರಿ ಖರೀದಿ ಮತ್ತಿತರ ವೆಚ್ಚ 138.95 ಲಕ್ಷ, ಕೌನ್ಸಿಲ್ ಸಭೆಗೆ ಸಂಬಂಧಿಸಿದಂತೆ 47 ಲಕ್ಷ, ರಸ್ತೆ ದುರಸ್ತಿ ಮತ್ತು ನಿರ್ವಹಣೆಗಾಗಿ 55 ಲಕ್ಷ, ಬೀದಿದೀಪ ನಿರ್ವಹಣೆಗಾಗಿ 220 ಲಕ್ಷ, ಮಳೆ ನೀರು ಮತ್ತು ಚರಂಡಿ ನಿರ್ವಹಣೆ 103 ಲಕ್ಷ, ಘನತ್ಯಾಜ್ಯ ನಿರ್ವಹಣೆ, ಚಾಲಕರ ವೇತನ, ವಾಹನಗಳ ವಿಮೆ, ದುರಸ್ತಿಗಾಗಿ 389 ಲಕ್ಷ ನೀರು ಸರಬರಾಜು, ಒಳಚರಂಡಿ ನಿರ್ವಹಣೆ, ಹೊರಗುತ್ತಿಗೆ ನೌಕರರ ವೇತನ, ಮತ್ತಿತರ ವೆಚ್ಚಗಳಿಗಾಗಿ 457 ಲಕ್ಷ, ಉದ್ಯಾನವನ ನಿರ್ವಹಣೆಗೆ 10 ಲಕ್ಷ, ಸರ್ಕಾರಕ್ಕೆ ಪಾವತಿಸಬೇಕಾದ ಆದಾಯ ತೆರಿಗೆ, ಜಿಎಸ್ಟಿ ರಾಜಧನ ಪಾವತಿಗಾಗಿ 181.50 ಲಕ್ಷ, ಪತ್ರಕರ್ತರ ವೈದ್ಯಕೀಯ ವೆಚ್ಚಕ್ಕಾಗಿ 10 ಲಕ್ಷ ಹಾಗೂ ಕಚೇರಿ ಪೀಠೋಪಕರಣಗಳ ದುರಸ್ಥಿ ಮತ್ತು ನಿರ್ವಹಣೆಗಾಗಿ 19 ಲಕ್ಷ ಸೇರಿದಂತೆ ಒಟ್ಟು 2043.45 ಲಕ್ಷ ರೂ. ವಿನಿಯೋಗಿಸಲು ಉದ್ದೇಶಿಸಲಾಗಿದೆ ಎಂದರು.

ನಟರಾಜ್ ನಿಧನ



ಹುಣಸೂರು, ಮಾ.7– ತಾಲೂಕಿನ ಕರ್ಣಕುಪ್ಪೆ ಗ್ರಾಪಂ ನೀರುಗಂಟಿ, ವಡ್ಡಿ ಮನುಗನಹಳ್ಳಿ ಗ್ರಾಮದ ನಿವಾಸಿ ನಟರಾಜ್(32) ಗುರುವಾರ ನಿಧನರಾದರು. ಮೃತರು ತಂದೆ, ತಾಯಿ, ಪತ್ನಿ ಸೇರಿದಂತೆ ಅಪಾರ ಬಂಧು ಗಣ್ಯ ಆಗಲಿದ್ದಾರೆ ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೋಟೆ ಅಭಿವೃದ್ಧಿಗೆ 400 ಕೋಟಿ ಅನುದಾನ: ಶಾಸಕ ಅನಿಲ್



ಕಾರ್ಮಿಕರ ಮಕ್ಕಳಿಗೆ ಶಾಸಕ ಅನಿಲ್ ಲ್ಯಾಪ್‌ಟಾಪ್ ವಿತರಿಸಿದರು.

ಹೆಚ್.ಡಿ.ಕೋಟೆ, ಮಾ.7– ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೆ 400 ಕೋಟಿ ಅನುದಾನ ನೀಡಿದ್ದಾರೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ತಾಲೂಕು ಕಚೇರಿ ಆವರಣದಲ್ಲಿ ಗುರುವಾರ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ 36 ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರ ವಿತರಣೆ, ಕಾರ್ಮಿಕ ಇಲಾಖೆಯಿಂದ ಆಯೋಜಿಸಿದ್ದ ಕೋಟೆ ಹಾಗೂ ಸರಗೂರು ತಾಲೂಕಿನ 79 ಕಾರ್ಮಿಕರ ಮಕ್ಕಳಿಗೆ ಉಚಿತ ಲ್ಯಾಪ್‌ಟಾಪ್ ವಿತರಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸರ್ಕಾರ ಕ್ಷೇತ್ರದ ಅಭಿವೃದ್ಧಿಗೆ ನೂರಾರು ಕೋಟಿ ಅನುದಾನ ಬಿಡುಗಡೆ ಮಾಡಿದೆ ಎಂದ ಅವರು, ಅಂತರಸಂತೆ, ಹಂಪಾಪುರ, ಮನುಗನಹಳ್ಳಿ ಕುಡಿಯುವ ನೀರಿನ ಯೋಜನೆ ಪೂರ್ಣಗೊಂಡಿದ್ದು, ಪ್ರತಿ ಮನೆಗೂ ಕುಡಿಯುವ ನೀರು ಕಲ್ಪಿಸಲಾಗುವುದು ಎಂದರು. ತಾಲೂಕಿನ ವಿವಿಧ ಗ್ರಾಮಗಳ ಸಂಪರ್ಕ ರಸ್ತೆ ನಿರ್ಮಾಣ ಹಾಗೂ ವಿವಿಧ ಸಮುದಾಯಗಳ ಅಭಿವೃದ್ಧಿಗೆ 40 ಕೋಟಿ ಹಣ ನೀಡಲಾಗುವುದು. ಇನ್ನು ಕೆಂಪೇಗೌಡ ಭವನ ನಿರ್ಮಾಣಕ್ಕೆ ಸ್ಥಳ ಗುರುತಿಸುವ ಕೆಲಸ ಮಾಡಲಾಗುತ್ತಿದೆ ಎಂದ ಅವರು, ತಾಲೂಕಿನ 71 ಸಾವಿರ ಮಂದಿ ಶಕ್ತಿ ಯೋಜನೆ ಸದುಪಯೋಗ ಪಡಿಸಿಕೊಂಡಿದ್ದಾರೆ ಎಂದರು. ಮನೆ ಇಲ್ಲದ ಬಡವರಿಗೆ 700 ಮನೆ ನಿರ್ಮಿಸಿಕೊಡುವುದಾಗಿ ಸರ್ಕಾರ ಭರವಸೆ ನೀಡಿದ್ದು, 200 ಮನೆ ನಿರ್ಮಾಣಕ್ಕೆ ಅನುದಾನ ಬಿಡುಗಡೆಯಾಗಿದೆ. ಅಲ್ಲದೇ ಚಿಕ್ಕದೇವಮ್ಮನ ಬೆಟ್ಟದ ಅಭಿವೃದ್ಧಿಗೆ ಎರಡೂವರೆ ಕೋಟಿ ರೂ. ಬಿಡುಗಡೆಯಾಗಿದೆ ಎಂದರು.

ಕಬಿನಿ ಜಲಾಶಯದಲ್ಲಿ ಬೃಂದಾವನ ನಿರ್ಮಾಣ ಟೆಂಡರ್ ಹಂತದಲ್ಲಿದೆ. ಸದ್ಯದಲ್ಲೇ ಮೈಸೂರು–ಮಾನಂದವಾಡಿ ಮುಖ್ಯರಸ್ತೆ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು. ತಾಲೂಕಿನ ಉದ್ಬೂರಿನಿಂದ ಬಾವಲಿವರೆಗೆ ಮೇಲ್ಸೇತುವೆ ನಿರ್ಮಾಣಕ್ಕೆ ಮನವಿ ಸಲ್ಲಿಸಲಾಗಿದೆ ಎಂದರು.

ಕಳೆದ ಐದು ವರ್ಷ ತಾಲೂಕಿನ ಅಭಿವೃದ್ಧಿಗೆ ಶಕ್ತಿಮೀರಿ ಶ್ರಮಿಸಿದ್ದೇನೆ. ಅದೇ ರೀತಿ ಪ್ರಸಕ್ತ ಸಾಲಿನಲ್ಲಿ ತಾಲೂಕಿನ ಅಭಿವೃದ್ಧಿಗೆ ಪಣ ತೊಡುವುದಾಗಿ ತಿಳಿಸಿದ ಅವರು, ಮಹಿಳೆಯರು ಸರ್ಕಾರದ ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಇದೇ ವೇಳೆ 12 ಕಾರ್ಮಿಕರಿಗೆ ಜೀತ ವಿಮುಕ್ತಿ ಪ್ರಮಾಣ ಪತ್ರ ನೀಡಲಾಯಿತು. ಕಾರ್ಯಕ್ರಮದಲ್ಲಿ ಹುಣಸೂರು ಉಪವಿಭಾಗಾಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೇರ್, ತಹಸೀಲ್ದಾರ್ ಶ್ರೀನಿವಾಸ್, ಕಾರ್ಮಿಕ ಇಲಾಖೆ ಜಿಲ್ಲಾ ಅಧಿಕಾರಿ ರಾಜೇಶ್ ಜಾಧವ್, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕಿ ಶೋಭಾ, ಸಹಾಯಕ ಅಭಿವೃದ್ಧಿ ಅಧಿಕಾರಿ ಮಹದೇವಸ್ವಾಮಿ, ಹಿರಿಯ ಕಾರ್ಮಿಕ ನಿರೀಕ್ಷಕ ಶಶಿಧರ್, ಕಾರ್ಮಿಕ ನಿರೀಕ್ಷಕಿ ಚಂದ್ರು ಮತ್ತು ಡಿಇಓ ಗಳಾದ ಪರಶಿವ ಮೂರ್ತಿ, ಸರಿತಾ, ನಾಗರಾಜು ಇದ್ದರು.

> ಅನಾರೋಗ್ಯ ಹಿನ್ನೆಲೆಯಲ್ಲಿ ಕೆಲ ತಿಂಗಳಿಂದ ತಾಲೂಕಿನಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಬದಲಿಗೆ ಉಡುಪಿ, ಮೈಸೂರು ಮತ್ತು ಬೆಂಗಳೂರಿನಲ್ಲಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದೆ. ಇದೀಗ ಆರೋಗ್ಯ ಸುಧಾರಿಸಿದ ಹಿನ್ನೆಲೆಯಲ್ಲಿ ತಾಲೂಕಿಗೆ ಆಗಮಿಸಿದ್ದೇನೆ. ಆದ್ದರಿಂದ ಕ್ಷೇತ್ರದ ಜನತೆಯಲ್ಲಿ ಕ್ಷಮೆಯಾಚಿಸುತ್ತೇನೆ. ನನ್ನ ತಂದೆ ಚಿಕ್ಕಮಾದು ಹಾಗೂ ಮಾಜಿ ಸಂಸದ ಆರ್.ಧ್ರುವನಾರಾಯಣ್ ಆರೋಗ್ಯ ವಿಚಾರದಲ್ಲಿ ಎಚ್ಚರಿಕೆ ವಹಿಸದ ಪರಿಣಾಮ ಇಬ್ಬರನ್ನು ಕಳೆದುಕೊಂಡಿದ್ದೇವೆ. ಹೀಗಾಗಿ ನಾನು ಆರೋಗ್ಯ ಕಡೆಗೆ ಹೆಚ್ಚು ಒತ್ತು ನೀಡಿದ್ದೇನೆ.
> – **ಅನಿಲ್ ಚಿಕ್ಕಮಾದು**, ಶಾಸಕ.

SITE FOR SALE

40x60 E/F 40 Feet Road, Pragathi Deams, Near Paper Mill Circle, KRS Road, 100% White, 78 Lacs (Negotiable)

9845972834, 8431669595



ಮೈಸೂರು ವಿಶ್ವವಿದ್ಯಾಲಯ ವತಿಯಿಂದ ಡಾಕ್ಟರೇಟ್ ಪದವಿ ಪಡೆದ ಈ ಪೂಜ್ಯರಿಗೆ ನನ್ನ ಅಭಿನಂದನೆಗಳು

ಶುಭಕೋರುವವರು: ವಿಕ್ರಾಂತ ಪಿ ದೇವೇಗೌಡ

HOUSE FOR SALE

Brand New 30x40 E/F, 3 BHK, Architect Designed Duplex House at Vijayanagar 4th Stage.

Contact : 99862 06577 / 80733 75718

Brokers Excuse

NANJUNDESHWARA TVS
AUTHORISED DEALER
TVS MOTOR COMPANY

WANTED

Post : Technician / Helper/ PDI Assistant / Advisor
Qualification: ITI, Dip, BE or SSLC Fail/ Pass
Salary : 10 to 15 k+ (Nego., based on knowledge and experience)
Location : Mysore, Siddartha Lyt.
Experience : 0 to 3yrs

email to nanjundeshwaramotors@gmail.com
9916820828 ,8884030405

6ನೇ ವರ್ಷದ ಸವಿನೆನಪು



ಶ್ರೀಮಾನ್ ನಿಂಗಪ್ಪ (ಚೆಡ್ಡಿ ನಿಂಗಪ್ಪ)

ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖಿತಪ್ತರು : ಶ್ರೀಮತಿ ಜಯಮ್ಮ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಕುಟುಂಬ ವರ್ಗದವರು ಹಾಗೂ ಬಂಧುಮಿತ್ರರು

ಚೆಫ್ ಬೇಕಾಗಿದ್ದಾರೆ

ರೆಸ್ಟೋರೆಂಟ್‌ಗೆ ಸೌತ್ ಇಂಡಿಯನ್ ಚೆಫ್ ಬೇಕಾಗಿದ್ದಾರೆ.

Mob: 9205086021

ಮನೆ ಬಾಡಿಗೆಗೆ ಇದೆ

60x40 ಅಳತೆ, 2 ಬೆಡ್‌ರೂಂ, ಕಾರ್ ಪಾರ್ಕಿಂಗ್ ಮತ್ತು ಗಾರ್ಡನ್ ಸ್ಥಳವಿದೆ. ರೂಪಾನಗರ, ಮೈಸೂರು, ಸಸ್ಯಹಾರಿಗಳಿಗೆ ಮಾತ್ರ. ಸಂಪರ್ಕಿಸಿ:

9448810471, 8618487308

KHB Site for Sale

60x40, South face
2600/ sq.ft.
KHB Kenchalagudu, Mysore. Within 3 km from Ring Road.

Mob: 9632102676


DTCP SITES FOR SALE

DTCP Sites
Rs. 699 per sq.ft.,
Near Jayapura,
H.D. Kote Road, Mysore.

9590491194,9606783264

ಪ್ಲಾಸ್ಟಿಕ್ ಬಳಕೆ ನಿಷೇಧಿಸಿ ಪರಿಸರವನ್ನು ಕಾಪಾಡಿ

॥ ಪುಣ್ಯ ಸ್ಮರಣೆ ॥



ಶ್ರೀ ಕೆ. ಶಿವರಾಮು, ಐ.ಎ.ಎಸ್ (ನಿ)

(15 ಡಿಸೆಂಬರ್ 1953 - 29 ಫೆಬ್ರವರಿ 2024)

ಜೀವನದಲ್ಲಿ ಶ್ರೇಷ್ಠವಾದ ಶಿಸ್ತು ಮತ್ತು ಸಂಸ್ಕಾರಯುತ ಬದುಕನ್ನು ನಡೆಸಿ, ಭಾರತದ ಇತಿಹಾಸದಲ್ಲೇ IAS ಪದವಿಯನ್ನು ಕನ್ನಡದಲ್ಲಿ ಉತ್ತೀರ್ಣರಾದ ಮೊದಲಿಗರಾಗಿ, ಚಲನಚಿತ್ರ, ಸಂಘಟನೆ, ಸಮಾಜಸೇವೆ ಮತ್ತು ರಾಜಕೀಯದಲ್ಲೂ ತಮ್ಮ ಛಾಪನ್ನು ಮೂಡಿಸಿ, ಪ್ರೀತಿ ವಾತ್ಸಲ್ಯದ ಪ್ರತಿರೂಪವಾಗಿ ಎಲ್ಲರಿಗೂ ಪ್ರೀತಿಯ ಚಿಲುಮೆಯಾಗಿ, ಸದಾಕಾಲ ಎಲ್ಲರ ಒಳಿತನ್ನು ಬಯಸಿ ಅಪಾರವಾದ ಅಭಿಮಾನಿಗಳನ್ನು ಹಾಗೂ ಬೆಂಬಲಿಗರನ್ನು ಸಂಪಾದಿಸಿ, ಪ್ರತಿಯೊಬ್ಬರಿಗೂ ಸ್ಫೂರ್ತಿಯಂತೆ ಬದುಕಿದ ನಿಮ್ಮ ಅಗಲುವಿಕೆ ನಮಗೆ ಅತೀವ ದುಃಖವನ್ನು ಉಂಟುಮಾಡಿದೆ. ಅಗಲಿದ ನಿಮ್ಮ ದಿವ್ಯಾತ್ಮಕ್ಕೆ ಚಿರಶಾಂತಿ ಲಭಿಸಲೆಂದು ಪ್ರಾರ್ಥಿಸುವ,

ಶ್ರೀಮತಿ ವಾಣಿ ಶಿವರಾಮು ಮತ್ತು ಕುಟುಂಬ.

ದಿನಾಂಕ : 10-03-2024ನೇ ಭಾನುವಾರ ಬೆಳಗ್ಗೆ 11.00ಕ್ಕೆ ಹಾಲು ತುಪ್ಪ ಹಾಗೂ ವೈಕುಂಠ ಸಮಾರಾಧನೆಯನ್ನು ಏರ್ಪಡಿಸಲಾಗಿದೆ
ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

Scan for location

ಸ್ಥಳ : ಉರುಗಹಳ್ಳಿ ಗ್ರಾಮ, ಬಿಡದಿ ಹೋ॥, ರಾಮನಗರ ಜಿಲ್ಲೆ ಭೋಜನ ಮಧ್ಯಾಹ್ನ 12.00 ಘಂಟೆಗೆ

JOCKEY



FACTORY SECONDS UPTO 50% OFF*
*T & C apply

· 10 am to 8 pm · Open All Days · Master / Visa Card Accepted
INNERWEAR · LEISUREWEAR · ACTIVEWEAR · KIDSWEAR · SOCKS

Venue In Mysore
JLB Road | The Institution Of Engineers (Auditorium Hall), Jhansi Lakshmibai Road - 5

Org. by: Surya Agency Pvt. Ltd.

2.5 BHK HOME INTERIORS @ ₹ 2.5 Lacs*

Home Space Mart™
TALK TO OUR DESIGN TEAM
✆ 9108923123

MUDA APPROVED SITES FOR SALE

Last 7
30X40 EAST FACING
Available.
Location: Adjacent J P Nagar, At Mysore-Ooty Road & Ring Road Junction.
Price @ Rs 68 lakhs onwards
Call: 96200 99122

IMKTA TEACHER TRAINING PROGRAMS INDIA MYSORE

IMKTA Since 2003
WWW.IMKTA.IN

Happy Women's Day

IMKTA EMPOWERS WOMEN PRESCHOOL TEACHERS



Join Diploma Montesssori / Primary Teacher Training Courses

• FOR SSLC, PUC OR ANY GRADUATES • REGULAR/ SATURDAY CLASS

Alpha International School
Near Ring Road Signal Junction, Srirampura, Mysore
7829937469

ESS & ESS INFRASTRUCTURE PVT. LTD.

ಈ ಮಾರ್ಚ್ ನಲ್ಲಿ ಅತ್ಯುತ್ತಮ DEAL ನಿಮ್ಮದಾಗಿಸಿ

ESS & ESS INFRASTRUCTURE PVT. LTD. 100 + Projects

ಮೈಸೂರಿನಲ್ಲಿ MUDA ಅನುಮೋದಿತ ನಿವೇಶನಕ್ಕೆ ಹೂಡಿಕೆ ಮಾಡಿ

ಅತ್ಯುತ್ತಮ ಪ್ರಧಾನ LOCATIONS ಗಳು
ರೈಲು ನಿಲ್ದಾಣದಿಂದ ಕೇವಲ 12 ಕಿ.ಮೀ

ನೋಂದಣಿಗೆ ಸಿದ್ಧವಾಗಿರುವ ನಿವೇಶನಗಳು

MUDA APPROVED
RERA REGISTRED

ಹೂಡಿಕೆಯ ಮೇಲೆ ಉತ್ತಮ ಲಾಭವನ್ನು ನಿರೀಕ್ಷಿಸಿ!

HURRY UP..! OWN YOUR DREAM PLOT NOW
80% ವರೆಗೆ ಬ್ಯಾಂಕ್ ಲೋನ್ ಲಭ್ಯ

FOR FREE SITE VISIT CALL: 99011 64444
essandess.in

ಅದ್ದೂರಿ ಪ್ರಾರಂಭೋತ್ಸವ ಹೊಸ ಸ್ಟಾಕ್‌ನೊಂದಿಗೆ ಗಾರ್ಮೆಂಟ್ಸ್, ಫುಟ್‌ವೇರ್ಸ್ & ಅಕ್ಸೇಸರೀಸ್

ಭಾರತದ ಅತಿದೊಡ್ಡ ಫ್ಯಾಷನ್ & ಲೈಫ್‌ಸ್ಟೈಲ್ ಎಕ್ಸ್‌ಪೋ 2024

ಮೈಸೂರಿನಲ್ಲಿ ಮೊದಲ ಬಾರಿಗೆ @ ಜಯಮ್ಮ ಗೋವಿಂದಗೌಡ ಹಾಲ್

15000 ಚದರ ಬ್ರಾಂಡೆಡ್ ರೆಡಿಮೇಡ್ ಉಡುಪುಗಳು
10000 ಚದರ ಫುಟ್‌ವೇರ್ & ಅಕ್ಸೇಸರಿ ಎಕ್ಸ್‌ಪೋ
20000 ಚದರ ಪಾರ್ಕಿಂಗ್ ಸೌಲಭ್ಯಗಳು

ನೇರವಾಗಿ 20 ಕಂಪನಿಗಳ 25 ಬ್ರಾಂಡೆಡ್ ಗಾರ್ಮೆಂಟ್ಸ್‌ಗಳ ಮಾರಾಟ

upto 85% OFFER
FACTORY SECONDS

ನೇರ ಫ್ಯಾಕ್ಟರಿ ಮಾರಾಟ
ಫುಟ್‌ವೇರ್, ಸ್ವೆಟ್ ಶರ್ಟ್, ಹೂಡೀಸ್, ಜಿಪ್ಪರ್, ಸ್ಯಾಂಡಲ್, ಜೆಂಟ್ಸ್ & ಲೇಡೀಸ್

ಯಾವುದೇ ವಸ್ತುವನ್ನು ಖರೀದಿಸಿ RS 99

ಮೆನ್ಸ್ ಜೀನ್ಸ್ ಪ್ಯಾಂಟ್
ಮೆನ್ಸ್ ಶರ್ಟ್
ಮೆನ್ಸ್ ಟಿ–ಶರ್ಟ್
ಸ್ಪೇಷಲ್ ಕೌಂಟರ್

ಲೇಡಿಸ್ ಕುರ್ತಿಸ್
ಲೇಡಿಸ್ ಟಾಪ್ಸ್
ಲೇಡಿಸ್ ಬಾಟಮ್
ಸನ್‌ಗ್ಲಾಸ್
ವಾಚ್‌ಗಳು

ಕಿಡ್ಸ್‌ವೇರ್, ಹೂಡೀಸ್, ಸ್ವೆಟ್ ಶರ್ಟ್, ಶರ್ಟ್ಸ್, ಜೀನ್ಸ್ ಪ್ಯಾಂಟ್, ಶಾರ್ಟ್ಸ್, ಟಿ-ಶರ್ಟ್ಸ್, ಕಾರ್ಟನ್ ಪ್ಯಾಂಟ್ಸ್, ಫ್ರಾಕ್ಸ್, ಲೋವರ್, ನೈಟ್ ಸ್ಯೂಟ್, ಲೇಡೀಸ್ ಬ್ಯಾಗ್, ಲೇಡೀಸ್ ಹ್ಯಾಂಡ್ ಬ್ಯಾಗ್, ಲೇಡೀಸ್ ಪರ್ಸ್

ಎಲ್ಲಾ ಬಟ್ಟೆಗಳು ಅತ್ಯಂತ ಕಡಿಮೆ ನಂಬಲಾಗದ ದರದ ರೀತಿಯಲ್ಲಿ ಬನ್ನಿ ಮತ್ತು ನೋಡಿ ನಿಮಗೆ ಇಷ್ಟವಾದರೆ ಮಾತ್ರ ತೆಗೆದುಕೊಳ್ಳಿ

ಪ್ರದರ್ಶನದಲ್ಲಿ 1 ಲಕ್ಷ ಪೀಸ್ ರೆಡಿಮೇಡ್ ಉಡುಪುಗಳು 50,000 ಪಾದರಕ್ಷೆಗಳು

ಭಾನುವಾರದಂದು ಪೂರ್ಣ ದಿನ ತೆರೆಯುತ್ತದೆ

ಸೇಲ್ 4 ದಿನಗಳು ಮಾತ್ರ ಯಾವುದೇ ವಿಸ್ತರಣೆ ಸಾಧ್ಯವಿಲ್ಲ
ಶುಕ್ರ 08 ಶನಿ 09 ಭಾನು 10 ಸೋ 11 ಮಾರ್ಚ್ 2024

JAYAMMA GOVINDA GOWDA KALYANA MANTAPA

ಸ್ಥಳ: ಜಯಮ್ಮ ಗೋವಿಂದಗೌಡ ಕಲ್ಯಾಣ ಮಂಟಪ
ಉದಯರವಿ ರಸ್ತೆ, ಕುವೆಂಪು ನಗರ, ಮೈಸೂರು

FREE PARKING ENTRANCE
G Pay PhonePe Paytm

ಸಮಯ : ಬೆಳಗ್ಗೆ 10 ಗಂಟೆಯಿಂದ ರಾತ್ರಿ 10 ರವರೆಗೆ

ಸೂಚನೆ: ಜಾಹಿರಾತು ಪ್ರಕಟಣೆಯ ಪೇಪರ್ ಕಟಿಂಗ್ ತನ್ನಿ ಮತ್ತು ಹಾಯ್ ಲುಕ್ ಆರ್ಟ್ ಸಿಲ್ಕ್ ಸ್ಯಾರಿಯನ್ನು ಕೇವಲ 200 ರೂ (ಒಂದು ಪೇಪರ್ ಕಟಿಂಗ್‌ಗೆ 1 ಸಾರಿ ಮಾತ್ರ)

EAST WEST INSTITUTIONS

1968 EAST WEST INSTITUTIONS
BENGALURU - MYSURU



FOUNDER'S DAY CELEBRATION

Remembrance of 82nd BIRTHDAY
of our Beloved Founder Chairman
Late. Sri C.M NAGARAJ
Former Mayor B.B.M.P, Bengaluru

&

Inauguration of New Building for
EAST WEST INSTITUTE OF PHARMACEUTICAL SCIENCES
(on Big Banyan Tree Road)



56 Years Excellence

On Saturday 9th March 2024 at 10.00 am

All Are Cordially Invited



Smt CHITRAKALA NAGARAJ
CHAIRPERSON, CO-FOUNDER
EAST WEST INSTITUTIONS
Bengaluru - Mysuru

EAST WEST INSTITUTIONS
187, Dodda Alada Mara Main Road, Kumbalagodu, Kengeri Hobli, Bangalore - South | Ph : 6360167901

East West Academy - MALLESHWARAM
East West Academy - RAJAJINAGAR
The Great Eastern International Public School - MAGADI ROAD
The Great Eastern Pre-University College - MAGADI ROAD
East West International School - MYSURU
East West Sports Academy - BENGALURU - MYSURU
East West Cricket Academy - YESHWANTHPUR / MAGADI ROAD

KUMBALAGODU, MYSURU ROAD
East West Business School - BBA / BCA / B.Com
East West School of Nursing - GNM
S.V.N. College of Nursing - B.Sc (N), PB B.Sc (N), M.Sc (N)
Madhu School of Nursing - GNM
East West Independent Pre-University College - SCIENCE / COMMERCE
East West Institute of Pharmaceutical Sciences - B PHARN